LEGISLATIVE ASSEMBLY

ELEVENTH DAY.

Wednesday, 31st January 1951.

The Assembly met in the Assembly Hall, Old Public Offices, Bangalore, at Forty Minutes past Eight of the Clock (morning).

Mr. Speaker (The Hon'ble Sri V. Venkatappa) in the Chair.

DEBATE ON FOOD SITUATION.

Mr. SPEAKER (The Hon'ble Sri V. Venkatappa).—The Hon'ble Home Minister will move the motion on the Food Situation.

The Hon'ble Sri T. MARIAPPA (Home Minister).—Sir, I beg to move:

"That the food situation in the State be taken into consideration."

1950ನೆಯ ಇಸವಿಯಲ್ಲಿನ ಆಹಾರಪರಿಸ್ಥಿತಿಯನ್ನು ನಾನೀಗ ಸಂಕ್ಷೇಪವಾಗಿ ವಿವರಿಸುತ್ತೇನೆ. 1950ನೆಯ ಇಸವಿಯ ಪ್ರಾರಂಭದಲ್ಲಿ ನಮ್ಮಲ್ಲಿ 25,738 ಟನ್‌ನಷ್ಟು ಆಹಾರಸಾಮಗ್ರಿಗಳಿತ್ತು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ 1949ನೆಯ ಇಸವಿಯಲ್ಲಿ ಮಳೆ ಬೆಳೆಗಳು ಅಷ್ಟೊಂದು ತೃಪ್ತಿಕರವಾಗಿಲ್ಲದೆ ಇದ್ದರೂ ಕೂಡ ತಕ್ಕಷ್ಟುಮಟ್ಟಿಗೆ 1950ನೆಯ ಇಸವಿಯಲ್ಲಿ ಕೆಲವು ಪ್ರದೇಶಗಳು ಏನಾ ಬಾಕಿ ಪ್ರದೇಶಗಳಲ್ಲಿ ಬೆಳೆ ಸುಧಾರಾಗಿದ್ದುದರಿಂದ ಧಾನ್ಯ ಕೇಖರಣೆಯನ್ನು 1949ನೆಯ ಇಸವಿಗಿಂತಲೂ 1950ನೆಯ ಇಸವಿಯಲ್ಲಿ ಹೆಚ್ಚಿಗೆಮಾಡುವುದಕ್ಕೆ ಸಾಧ್ಯವಾಯಿತು. ಮಾನ್ಯ ಸದಸ್ಯರ ಅವಗಾಹನೆಗಾಗಿ ಈ ಅಂಕಿಅಂಶಗಳನ್ನೆಲ್ಲಾ ವಿವರಿಸಿ ಒಂದು ಹಸ್ತಪತ್ರಿಕೆಯನ್ನು ಕೂಡ ಕೊಟ್ಟಿದ್ದೇನೆ. 1949ರಲ್ಲಿ 49,37,298 ಪಲ್ಲ ಭತ್ತ ಉತ್ಪತ್ತಿಯಾಗಬಹುದೆಂದು ಅಂದಾಜುಮಾಡಿದ್ದುದು 1950ರಲ್ಲಿ 46,56,633 ಪರ್ಯಾಗಳಷ್ಟು ಮಾತ್ರ ಆಯಿತು. ಮರೆನಾಡಿನ ಕೆಲವು ಪ್ರದೇಶಗಳಲ್ಲಿ ಸಕಾಲದಲ್ಲಿ ಮಳೆಬಾರದೆ ಹೋದದ್ದರಿಂದ ಬತ್ತದ ಬೆಳೆ ಹೀಗೆ ಸ್ವಲ್ಪ ಕಡಿಮೆಯಾಯಿತು. ಆದರೆ ರಾಗಿ ಒಂದೆರಡು ಪ್ರದೇಶಗಳನ್ನು ಬಿಟ್ಟು ಬಾಕಿ ಪ್ರದೇಶಗಳಲ್ಲಿ ಉತ್ತಮವಾಗಿ 1949ನೆಯ ಇಸವಿಯಲ್ಲಿ 41,61,170 ಪರ್ಯಾಗಳವರೆಗೂ ಏರಿತು. ಹೀಗೆಯೇ ಜೋಳ ಮತ್ತು ಮಿಕ್ಕ ಮೈನರ್ ಆಹಾರ ಪದಾರ್ಥಗಳ ಉತ್ಪತ್ತಿಯೂ ಹೆಚ್ಚಾಗಿದೆಯೆಂದು ಹೇಳಿ ನಾನಾಗಲೇ ಸದಸ್ಯರಿಗೆ ಕೊಟ್ಟಿರತಕ್ಕ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ನಾವು 1950ನೆಯ ಇಸವಿಯಲ್ಲಿ 16 ಲಕ್ಷ ಪಲ್ಲ ಭತ್ತ, 4,50,000 ಪಲ್ಲಗಳಷ್ಟು ರಾಗಿ, ಜೋಳ ಮತ್ತು ಇತರ ಧಾನ್ಯಗಳನ್ನು ವಸೂಲುಮಾಡಬಹುದೆಂದು ಅಂದಾಜುಮಾಡಿದ್ದೆವು. ಆದರೆ ಬೆಳೆ ಸ್ವಲ್ಪಮಟ್ಟಿಗೆ ಸಮರ್ಪಕವಾದ್ದರಿಂದ 17,14,298 ಪಲ್ಲ ಬತ್ತವನ್ನೂ ಸುಮಾರು 4,68,679 ಪರ್ಯಾಗಳಷ್ಟು ರಾಗಿ ಜೋಳ ಮತ್ತಿತರ ಧಾನ್ಯಗಳನ್ನೂ ವಸೂಲುಮಾಡಿದ್ದೇವೆ. ಸ್ವಲ್ಪ ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಂಡದ್ದರಿಂದ ಇಷ್ಟು ಧಾನ್ಯವನ್ನು ವಸೂಲುಮಾಡುವುದಕ್ಕೆ ಸಾಧ್ಯವಾಯಿತು. ನಮ್ಮ ದೇಶದ ಆಹಾರದಲ್ಲಿ 1950ನೆಯ ಇಸವಿಗೆ 1,68,000 ಟನ್‌ಗಳಷ್ಟು ಜೋತಾ ಬೀಳಬಹುದೆಂದು ಅಂದಾಜುಮಾಡಿದ್ದೆವು. ಕೇಂದ್ರಸರ್ಕಾರದವರು ಇದರಲ್ಲಿ ಒಂದು ಲಕ್ಷ ಟನ್‌ಗಳಷ್ಟು ಕೊಡುವುದಾಗಿ ಪಾಗ್ದಾನಮಾಡಿದ್ದರು. ಆದರೆ ಕೊನೆಗೆ 75,000 ಟನ್ನಿಗೆ ಇಡನ್ನು ಇಳಿಸಿದರು. ಈ 75,000 ಟನ್ ಧಾನ್ಯ ಸಾಲದೆಂದು ನಾವು ಪದೇ ಪದೇ ಒತ್ತಾಯಮಾಡಿದ್ದರಿಂದ ಅಖೈರಾಗಿ 1950ನೆಯ ಇಸವಿಯೊಳಗೆ 96,000 ಟನ್‌ಗಳಷ್ಟು ನಮಗೆ ದೊರಕಿತು; ಇದರಲ್ಲಿ 19,600 ಟನ್ ಅಕ್ಕಿ 59,000 ಟನ್ ಗೋಧಿ ಮತ್ತು ಗೋಧಿಹಿಟ್ಟು 18,000 ಟನ್ ಮಿಲೋ ಆಗಿತ್ತು. ಇಂಡಿಯಾ ದೇಶದ ಹೊರಗಡೆಯಿಂದ ಮತ್ತು ಒಳಗಡೆ ಇತರ ಭಾಗಗಳಿಂದ ನಮ್ಮ ಸಂಸ್ಥಾನಕ್ಕೆ ಬಂದ ಆಹಾರ ಪದಾರ್ಥಗಳ ಅಂಕಿಅಂಶಗಳನ್ನೂ ತಮಗೆ ಕೊಟ್ಟಿರುವ ಹಸ್ತಪತ್ರಿಕೆಯಲ್ಲಿ ನಮೂದುಮಾಡಿದ್ದೇನೆ. ಈ ಎಲ್ಲಾ ಧಾನ್ಯಗಳನ್ನೂ ಇಡೀ ಭಾರತದ ನೀತಿಗನುಸಾರವಾಗಿ ಸರ್ಕಾರಿ ಡಿಪೋಗಳು, ಲೈಸನ್ಸ್‌ಪಡೆದ ವರ್ತಕರು, ಕೋ-ಆಪರೇಟಿವ್ ಸೊಸೈಟಿಗಳು ಮತ್ತು ಮುನಿಸಿಪಲ್ ಮತ್ತು ಗ್ರಾಮಪಂಚಾಯ್ತಿ ಡಿಪೋಗಳ ಮೂಲಕ ಹಂಚುತ್ತಿದ್ದೇವೆ. ವರ್ಷದ ಪ್ರಾರಂಭದಲ್ಲಿ 1,735 ಡಿಪೋಗಳಿದ್ದುದನ್ನು ಕೊನೆಗೆ ಅಖೈರಿನಲ್ಲಿ 1,775 ಡಿಪೋಗಳವರೆಗೆ ಹೆಚ್ಚಿಸಲಾಗಿತ್ತು. ಜನರ ಅನುಕೂಲತೆಯ ದೃಷ್ಟಿಯಿಂದ ಹೀಗೆ ಸುಮಾರು 40 ಡಿಪೋಗಳನ್ನು ಕೊನೆಯಲ್ಲಿ ಜಾಸ್ತಿಮಾಡಬೇಕಾಗಿ ಬಂತು. ಹಾಲ್ ಸ್ಯಾಂಪಲಿಂಗ್ ರೇಷನಿಂಗ್ ಪದ್ಧತಿಯನ್ನು ಕೇವಲ ಬೆಂಗಳೂರು, ಮೈಸೂರು, ಕೋಲಾರದ ಚಿನ್ನದಗಣಿ ಮತ್ತು ದಾವಣಗೆರೆ ಈ ನಾಲ್ಕು ಕಡೆಗಳಲ್ಲಿ ಮಾತ್ರ ಇಟ್ಟುಕೊಂಡು ಬಾಕಿ ಪ್ರದೇಶಗಳಲ್ಲಿ ನಮ್ಮಲ್ಲಿ ದಾಸ್ತಾನೆಷ್ಟಿತ್ತೋ ಅದಕ್ಕನುಗುಣವಾಗಿ ಇಕ್ಷಾರ್ಮರ್ ರೇಷನಿಂಗ್ ಮೂಲಕ ಜನರಿಗೆ ಕೊಟ್ಟುಕೊಂಡು ಬರುತ್ತಿದ್ದೇವೆ. ಆದರೆ, ಈ ಮಧ್ಯೆ 1950ನೆಯ ಇಸವಿ ಜುಲೈ ತಿಂಗಳಿನಲ್ಲಿ ಕೇಂದ್ರಸರ್ಕಾರದವರ ಜೊತೆಯಲ್ಲಿ ಮೈಸೂರು ದೇಶದಲ್ಲಿ ಅಕ್ಕಿಅಭಾವ ಬಹಳ ಜಾಸ್ತಿಯಾಗಿದೆ, ಕೇಂದ್ರಸರ್ಕಾರದವರು ವಾಗ್ದಾನ ಮಾಡಿರುವುದು ಏನೇನೂ ಸಾಲದೆಂದು ಎಷ್ಟೇ ವ್ಯವಹಾರ ನಡೆಸಿದರೂ, ಇಡೀ ಭಾರತದೇಶದಲ್ಲಿ ಆಹಾರದ ಅಭಾವವಿರುವುದರಿಂದ ಹೆಚ್ಚಿಗೆ ಕೊಡುವುದಕ್ಕಾಗುವು

(THE HON'BLE SRI T. MARIAPPA.)

ದಿಲ್ಲವೆಂದು ಅಖೈರಾಗಿ ಹೇಳಿಬಿಟ್ಟದ್ದರಿಂದ ವಿಧಿಯಿಲ್ಲದೆ ನಾವು ಇಲ್ಲಿ ಅಕ್ಕಿಯ ರೇಷನ್ ಪ್ರಮಾಣವನ್ನು ಕಡಿಮೆ ಮಾಡಬೇಕಾಗಿ ಬಂತು. ಇದರಿಂದ ಅನೇಕ ಜನರಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆ. ಆದರೂ ವಿಧಿಯಿಲ್ಲದೆ ನಮ್ಮಲ್ಲಿರತಕ್ಕ ದಾಸ್ತಾನನ್ನೇ ಸ್ವಲ್ಪ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳಬೇಕೆಂದು ಹೇಳಿ ಅದುವರೆಗೆ 6 ಔನ್ಸು, ಅಕ್ಕಿ ಕೊಡುತ್ತಿದ್ದುದನ್ನು (ಎ) ಕ್ಲಾಸಿನವರಿಗೆ 5.5 ಔನ್ಸ್‌ಗಳಿಗೆ ಇಳಿಸಲಾಯಿತು. (ಬಿ) ಕ್ಲಾಸ್‌ನವರಿಗೆ 3.7 ಔನ್ಸ್‌ಗಳಿಂದ 3.4 ಔನ್ಸ್‌ಗಳಿಗೆ ಇಳಿಸಬೇಕಾಯಿತು. ಆದರೆ ಇದೇ ಸಮಯದಲ್ಲಿ ಇತರೇ ಧಾನ್ಯಗಳನ್ನಾದರೂ ಸ್ವಲ್ಪ ಹೆಚ್ಚಿಗೆ ಕೊಡಬೇಕೆಂದು ಹೇಳಿ ಇತರೇ ಧಾನ್ಯಗಳ ಪ್ರಮಾಣವನ್ನು 5 ಔನ್ಸ್‌ನಷ್ಟು ಜಾಸ್ತಿಮಾಡಲಾಯಿತು. ಈ ಪ್ರಕಾರ ಸ್ವಲ್ಪವಷ್ಟಿಗೆ ಅಕ್ಕಿ ಪ್ರಮಾಣವನ್ನು ಕಡಿಮೆ ಮಾಡಿದರೂ ಒಟ್ಟಿನ ಆಹಾರದ ಪ್ರಮಾಣವನ್ನು 'ಎ' ಕ್ಲಾಸಿನವರಿಗೆ 9.5 ಔನ್ಸ್‌ಗೂ 'ಬಿ' ಕ್ಲಾಸಿನವರಿಗೆ 12 ಔನ್ಸ್‌ಗೂ ಹೆಚ್ಚಿಸಲಾಯಿತು. ಯಥಾ ಪ್ರಕಾರ heavy manual labour ಗೆ 15 ಔನ್ಸ್ ಕೊಡಲಾಗಿದೆ. ಈ ಪ್ರಕಾರ ರೇಷನ್ ಕೊಡತಕ್ಕ ಈಗ ಒಟ್ಟು ಎಷ್ಟು ಜನರಿಗೆ ನಾವು ರೇಷನ್ ಒದಗಿಸುತ್ತಿದ್ದೇವೆಂದು ಹೇಳುತ್ತೇನೆ :

ಕಷ್ಟ ಕೆಲಸದ ಶ್ರಮಜೀವಿಗಳು	...	96,424
ದೊಡ್ಡವರು	...	46,68,103
ಮಕ್ಕಳು	...	11,53,865

ಈ ಅಂಕಿಯಲ್ಲಿ ಸ್ಟಾಚ್ಯುಟರಿ ರೇಷನಿಂಗ್ ಪ್ರದೇಶದಲ್ಲಿ ಎಷ್ಟು ಜನರಿದ್ದಾರೆ, ಇಕ್‌ಫಾರ್ಮರ್ ರೇಷನಿಂಗ್ ಪ್ರದೇಶದಲ್ಲಿ ಎಷ್ಟು ಜನರಿದ್ದಾರೆಂಬುದನ್ನೂ ಹೇಳುತ್ತೇನೆ. ಸ್ಟಾಚ್ಯುಟರಿ ರೇಷನಿಂಗ್ ಪ್ರದೇಶದಲ್ಲಿ ಸುಮಾರು,

ಕಷ್ಟ ಕೆಲಸದ ಶ್ರಮಜೀವಿಗಳು	...	23,662
ದೊಡ್ಡವರು	...	... 10 ಲಕ್ಷ ಚಿಲ್ಲರೆ
ಮಕ್ಕಳು	...	... 2,15,330

ಇಷ್ಟು ಜನರಿದ್ದಾರೆ. ಸಾಮಾನ್ಯವಾಗಿ ಈ ಸಂಖ್ಯೆಯನ್ನೇ ಸ್ವಲ್ಪ ಹೆಚ್ಚುಕಡಿ ಸ್ಟಾಚ್ಯುಟರಿ ರೇಷನಿಂಗ್ ಪ್ರಾರಂಭವಾದಿದ ರಾಗಾಯಿತು ಇದುವರೆಗೂ ಇಟ್ಟುಕೊಂಡು ಬಂದಿದ್ದೇವೆ. ಸ್ಟಾಚ್ಯುಟರಿ ರೇಷನಿಂಗ್ ಇಲ್ಲದ ಪ್ರದೇಶಗಳಲ್ಲಿ ಇದು ಕಾಲಕ್ರಮೇಣ ವ್ಯತ್ಯಾಸವಾಗಿದೆ. ಏಕೆಂದರೆ, ಅಲ್ಲಿ ಒಂದು ತಿಂಗಳಿಗಾಗುವಷ್ಟು ಬೆಳೆಯುವವರೂ ಕೆಲವರಿದ್ದಾರೆ, ಹೀಗೆಯೇ 2 ತಿಂಗಳು, 4 ತಿಂಗಳು, 6 ತಿಂಗಳಿಗಾಗುವಷ್ಟು ಬೆಳೆಯುವವರೂ ಇರುತ್ತಾರೆ. ಆದ್ದರಿಂದ ಇವರುಗಳಿಗೆಲ್ಲಾ ಕ್ರಮಕ್ರಮೇಣ ಕೊಡಬೇಕಾಗಿ ಬರುತ್ತದೆ. ವರ್ಷದ ಕೊನೆಯ peak period ನಲ್ಲಿ ಇವರುಗಳೆಲ್ಲರಿಗೂ ಕೊಡಬೇಕಾಗಿ ಬರುತ್ತದೆ ಆದ್ದರಿಂದ ಈ ಅಧಾರದ ಪ್ರಕಾರ ಎಷ್ಟು ಧಾನ್ಯಗಳನ್ನು ಕೊಡುತ್ತಿದ್ದೇವೆಂದರೆ, ಈ ವರ್ಷದ ಲೆಕ್ಕದ ಪ್ರಕಾರ, ಸುಮಾರು 1,23,000 ಟಿಕ್ ಅಕ್ಕಿ, 6,1,130 ಟಿಕ್ ಗೋಧಿ, 57,795 ಟಿಕ್ ಇತರೇ ಧಾನ್ಯಗಳು ಮಾನ್ಯ ಸದಸ್ಯರಿಗಾಗಲೇ ಪ್ರಶ್ನೋತ್ತರಗಳ ಕಾಲದಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ತಿಳಿಸಿರುವ ಹಾಗೆ ಆಹಾರ ಇರಾಖೆಯಲ್ಲಿ 1944 ನೆಯ ಇಸವಿಯಿಂದ ಇಲ್ಲಿಯವರೆಗೆ ಸುಮಾರು 8½ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಸಾಧ್ಯವಾದಷ್ಟು 'service at cost' ನೀತಿಯನ್ನನು ನುಸರಿಸಬೇಕೆಂಬ ಸೂಚನೆಗಳು ಬಂದಿವೆ. ಆ ನೀತಿಗನುಸಾರವಾಗಿ ಒಂದೇ ಸಾರಿ ನಡೆಯುವುದರಿಂದ ಕೆಲವರಿಗೆ ಸ್ವಲ್ಪಮಟ್ಟಿಗೆ ತೊಂದರೆಯಾಗಬಹುದೆಂದು ಮನಗಂಡು 1—7—1950ನೆಯ ಇಸವಿಯಿಂದ ನಾವು ಒದಗಿಸುವ ಧಾನ್ಯದ ಬೆರೆಗಳನ್ನು ಸ್ವಲ್ಪಮಟ್ಟಿಗೆ ಜಾಸ್ತಿಮಾಡಬೇಕಾಗಿ ಬಂತು. ಇದರ ಪರಿಣಾಮವಾಗಿ ಸರ್ಕಾರದವರಿಗೆ 4 ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗಿದೆ. ಹೇಗೆ ನಾವು 1950ನೆಯ ಇಸವಿಯಲ್ಲಿ ಬೆಳೆದಿದ್ದೇವೆ ಎಂಬ ವಿಚಾರದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ಮುಖ್ಯವಾಗಿ ಒಂದಂಶವನ್ನು ತರಬೇಕಾಗಿದೆ. ಕಳೆದ ಡಿಸೆಂಬರ್ ತಿಂಗಳ ತನಕ ನಾವು ಬಹಳ ಕಷ್ಟಪಟ್ಟಿದ್ದೇವೆ. ನಮ್ಮಲ್ಲದ್ದ ದಾಸ್ತಾನೇ ಬಹಳ ಕಮ್ಮಿ ಇದ್ದಿತು. ಅದರ ಮೇರೆ ಕೇಂದ್ರದವರ ಸಹಾಯಕೂಡ ನಮಗೆ ಸಕಾಲಕ್ಕೆ ಸರಿಯಾಗಿ ಬರಲಿಲ್ಲ. ಮೇಲಾಗಿ ಹೋದವರ್ಷ ಮಳೆ ಬೆಳೆಗಳೂ ಕೂಡ ಸಕಾಲದಲ್ಲಿ ಪ್ರಾರಂಭವಾಗದ ಬಹಳ ಸಾವಕಾಶವಾಗಿ ಅಂದರೆ ಅಕಾಲದಲ್ಲಿ ನಡೆಸಿದ್ದರ ಪ್ರಯುಕ್ತ, ಸ್ವಲ್ಪ ಕಾಲ ವಿಳಂಬಮಾಡಿ ವ್ಯವಸಾಯವನ್ನು ಪ್ರಾರಂಭಮಾಡಿದ್ದರ ದೆಸೆಯಿಂದ ಆ ಬೆಳೆ ನಮ್ಮ ಕೈಸೇರುವುದೂ ಕೂಡ ಬಹಳ ನಿಧಾನವಾಯಿತು. ಹೀಗೆಲ್ಲಾ ಆಗಿ ಆಗ ನಾವು ಎಷ್ಟು ಸಂಗ್ರಹಣ ಮಾಡಬೇಕೆಂದಿದ್ದೆವೋ ಅಷ್ಟನ್ನು ಸಂಗ್ರಹಣಮಾಡಲಾಗಲಿಲ್ಲ. ಪರಿಸ್ಥಿತಿ ಹೀಗಾಗಿ ಹೋಗಿ ನಮ್ಮಲ್ಲಿದ್ದ ದಾಸ್ತಾನಿನಲ್ಲೇ ಬತ್ತವನ್ನು ಸಂಸ್ಥಾನದ ಎಲ್ಲಾ ಪ್ರದೇಶಗಳಿಗೂ ಕಳುಹಿಸಿ ಕೊಡಬೇಕಾಗಿ ಬಂತು. ಹೀಗೆಲ್ಲಾ ಆಗಿ ನಾವು ಎಷ್ಟು ಕಷ್ಟಪಟ್ಟಿದ್ದೇವೆ, ಎಷ್ಟು ಶ್ರಮವಹಿಸಿದ್ದೇವೆಂಬುದನ್ನು ನಾನೀಗ ಹೆಚ್ಚಾಗಿ ವಿವರಿಸತಕ್ಕದ್ದು ಅನಗತ್ಯ. ಅದೇ ಕಾಲದಲ್ಲಿ ನಮ್ಮಲ್ಲಿ ಗೋಧಿ ದಾಸ್ತಾನು ಕೂಡ ಬಹಳ ಕಮ್ಮಿ ಇತ್ತು. ಆಗ ನಮಗೆ ಬರಬೇಕಾಗಿದ್ದ ಗೋಧಿ 1,500 ಟಿಕ್ ಮಾತ್ರ. ಆಗ ಅದೂ ಕೂಡ ಸಕಾಲಕ್ಕೆ ನಮ್ಮ ಕೈಸೇರಲಿಲ್ಲ. ಸಂಸ್ಥಾನಗಳ ಡಿಪೋಗಳಲ್ಲೆಲ್ಲಾ ಅಮ್ಮಮ್ಮಾ ಎಂದರೆ ಆಗ 200—300 ಟಿಕ್ ಗೋಧಿ ಮಾತ್ರವೇ ನಮ್ಮಲ್ಲಿದ್ದದ್ದು. ಅಂತೂ ಅದೃಷ್ಟವಶಾತ್ ಆ ಕಷ್ಟ ಪರಿಸ್ಥಿತಿಯಲ್ಲಿ 1950ನೆಯ ವರ್ಷವನ್ನು ಕಳೆದು ನಾವೀಗ 1951ನೆಯ ಜನವರಿ ಅಂತ್ಯದಲ್ಲಿದ್ದೇವೆ. ಈ ವಿಚಾರವಾಗಿ ನಾವು ಪದೇ ಪದೇ ಕೇಂದ್ರಸರ್ಕಾರದವರಿಗೆ ಒತ್ತಾಯಪಡಿಸುತ್ತಲೇ ಇದ್ದೇವೆ. ಆದರೆ ಭಾರತದ ನಾನಾ ಭಾಗಗಳಲ್ಲಿ ದುರ್ದೈವದಿಂದ ಕಳೆದ ವರ್ಷ ಭೂಕಂಪಗಳೂ, ಅತಿವೃಷ್ಟಿಗಳೂ ಉಂಟಾಗಿ ಲಕ್ಷಾಂತರ ರೂಪಾಯಿಗಳ ಬೆಳೆಯು ಹಾಳಾಗಿ ಹೋಗಿರುತ್ತೆ. ಹೀಗೆಲ್ಲಾ ಆಗಿ ಮಧ್ಯಪ್ರಾಂತ್ಯ, ಅಸ್ಸಾಂ ಮತ್ತು ಉತ್ತರಪ್ರದೇಶಗಳ ಕಷ್ಟವನ್ನು ಹೇಳತೀರದಾಗಿದೆ. ಈ ನಮ್ಮ ದೇಶಗಳನ್ನೆಲ್ಲಾ ತೀವ್ರವಾಗಿ ಕೇಂದ್ರಸರ್ಕಾರದವರು ಗಮನಿಸಿ, ಪ್ರತಿಯೊಂದು ಸಂಸ್ಥಾನಗಳವರಿಗೂ ಮತ್ತು ಭಾರತದ ಇತರ ಪ್ರದೇಶದವರಿಗೂ ಕೂಡ, ಇನ್ನು ಮೇಲೆ ಪ್ರತಿಯೊಬ್ಬರೂ ತಮ್ಮ ಕಾಲ ಮೇರೆ ತಾವು ನಿಂತುಕೊಳ್ಳಲು ಪ್ರಯತ್ನಮಾಡಬೇಕೇ ಶಿವಾಯಿ ಇತರರನ್ನೇ ಆಶ್ರಯಿಸಬಾರದೆಂದು ಹೇಳಿದ್ದಾರೆ. ಮೊನ್ನೆ ದೆಹಲಿಯಲ್ಲಿ ನಡೆದ ಆಹಾರಸಮ್ಮೇಳನದಲ್ಲಿ ಅದೇ ಮುಖ್ಯ ವಿಚಾರ ಇದು. ಈ ಸಂಬಂಧವಾಗಿ ನಮಗೆ ಕಷ್ಟಗಳು ಒಂದೂ ಮುಖನಾಗಿಲ್ಲ. ನಾನಾ ಭಾಗದಲ್ಲಿ ತೊಂದರೆಗಳಿವೆ. ಹಡಗು ಸಿಕ್ಕುವುದೂ ಕೂಡ ಬಹಳ ಕಷ್ಟವಾಗಿ ಹೋಗಿದೆ. ಹಣ ಸಿಕ್ಕಿದರೂ ಸಿಕ್ಕಬಹುದು, ಒಂದು ವೇಳೆ ಕೆಲವು ಕಡೆ ಆಹಾರಧಾನ್ಯ ಸಿಕ್ಕಿದರೂ ಸಿಕ್ಕ

ಬಹುದು. ಆದರೆ ಯುದ್ಧದ ಭಯದಿಂದ ನಮಗೆ ಈ ಹಡಗುಗಳ ಸರಬರಾಯಿ ಸಿಕ್ಕುವುದೇ ಬಹಳ ದುರ್ಲಭವಾಗಿದೆ. ಈ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಹೇಳುವುದಾದರೆ ನಾವು ಈ 1951ನೆಯ ವರ್ಷವನ್ನು ಬಹಳ ಎಚ್ಚರಿಕೆಯಿಂದ ಕಳೆಯಬೇಕಾಗಿದೆ. ಇದಕ್ಕಾಗಿ ದೇಶದಲ್ಲಿರತಕ್ಕ ಪ್ರತಿಯೊಬ್ಬರೂ ತ್ಯಾಗಕ್ಕೆ ಸಿದ್ಧರಾಗಿರಬೇಕು, ಎಲ್ಲರ ಸಹಕಾರ, ಸಹಾನುಭೂತಿ ಬೇಕು. ದೇಶದ ಕಷ್ಟವನ್ನು ಹಂಚಿಕೊಳ್ಳಲು ಪ್ರತಿಯೊಬ್ಬರೂ ತಯಾರಾಗಿರಬೇಕು. ಈಗ ಈ ಕಷ್ಟಗಳೆಲ್ಲಾ ಸಂಭವಿಸಿದ್ದರಿಂದಲೇ ಕೇಂದ್ರದವರು ಇಡೀ ಇಂಡಿಯಾದಲ್ಲೆಲ್ಲಾ ಪ್ರತಿಯೊಬ್ಬರಿಗೂ ತರಾ ಒಂಭತ್ತು ಔನ್ಸಿನಂತೆ ಆಹಾರವನ್ನು ಹಂಚಿಕೊಡಬೇಕೆಂದು ನಿರ್ಧರ ಮಾಡಿ ್ದಾರೆ. ಇದನ್ನು ಆಲೋಚನೆಮಾಡಿದ್ದಲ್ಲ ಇಡೀ ಭಾರತದಲ್ಲಿರುವ ಈ ಆಹಾರಸಾಮಗ್ರಿಗಳ ದಾಸ್ತಾನು ತೀರಾ ಕಡಿಮೆಯಾಗಿದೆಯೆಂಬುದು ಎಲ್ಲರಿಗೂ ವೇದ್ಯವಾಗುತ್ತದೆ. ಇದೇ ಸಂಬಂಧವಾಗಿ ಶ್ರೀಮಾನ್ ಎ. ಎಸ್. ನಾರಾಯಣರಾಯರು ಈ ಸಂಬಂಧವಾಗಿ ಒಂದು ಪ್ರಶ್ನೆ ಹಾಕಿದ್ದರು. ಬೊಂಬಾಯಿಯಲ್ಲಿ ನಡೆದ ಆಹಾರ ಸಮ್ಮೇಳನದಲ್ಲಿ ತರಾ ಒಂದಕ್ಕೆ 8½ ಔನ್ಸಿನ ಆಹಾರಬೇಕೆಂದು ಚರ್ಚೆ ನಡೆದು ಕಡಿಗೆ ಅದು 9 ಔನ್ಸಿಗೆ ನಿಂತಿತು. ಆಗಲೂ ಕೂಡ ನಾವು ಹೀಗೆ ಮಾಡುವುದರಿಂದ ಶ್ರಮಜೀವಿಗಳಿಗೆ ಬಹಳ ಕಷ್ಟವಾಗುತ್ತದೆ, ಅವರ ವಿಷಯದಲ್ಲಾದರೂ ನಾವು ಕನಿಷ್ಟಪಕ್ಷ 12 ಔನ್ಸಿನ ಆಹಾರಕೊಡಬಕ್ಕದ್ದು ಅತ್ಯಗತ್ಯವಾಗಿದೆ. ಹಾಗೂ ಅದು ಸಾಧ್ಯವಾಗದೆ ಹೋದಲ್ಲಿ ಖಂಡಿತ 10 ಔನ್ಸಿನಗಳನ್ನಾದರೂ ಕೊಡಲೇಬೇಕೆಂದು ಒತ್ತಾಯ ಮಾಡಿದ್ದೇವೆ. ಈ ವಿಷಯ ಕೂಡ ನಾನು ಈ ವಿಚಾರವಾಗಿ ಕೇಂದ್ರದ ಅಧಿಕಾರಿಗಳೊಡನೆ ಪ್ರಸ್ತಾಪಮಾಡಿದ ನಂತರವೇ ನಾನು ಈ ನಭೆಗೆ ಬಂದಿದ್ದೇನೆ. ಇದು ಇಡೀ ಭಾರತಕ್ಕೇ ಅನ್ವಯಿಸತಕ್ಕ ನೀತಿಯಾಗಿದೆ. ಆ ನೀತಿಯನ್ನೇ ನಾವೂ ಈಗ ಅನುಸರಿಸಬೇಕೆಂದು ಹೇಳಿದ್ದೇವೆ. ಇಡೀ ಭಾರತದಲ್ಲಿ ಅನೇಕಕಡೆ ಅನೇಕ ರೀತಿಯಲ್ಲಿ ಆಹಾರವನ್ನು ಹಂಚುತ್ತಿದ್ದಾಗ, ನಾವು ಅದರಂತೆ ಕಡಮೆಮಾಡದೆ ಯಾವಾಗಲೂ 12 ಔನ್ಸಿನು, 9½ ಔನ್ಸಿನು ಮತ್ತು 10 ಔನ್ಸಿನು ಹೀಗೆಲ್ಲಾ ಕೊಡುತ್ತಲೇ ಬಂದಿದ್ದೇವೆ. ಈಗ ಇಲ್ಲಿಯತನಕವೂ ನಾವು ಶ್ರಮಜೀವಿಗಳಿಗೆ 12½ ಔನ್ಸಿನು ಆಹಾರವನ್ನೇ ಕೊಡುತ್ತಲೇ ಬಂದಿದ್ದೇವೆ.

The Hon'ble Sri K. CHENGALARAYA REDDY (Chief Minister).—The reduction proposed by the Government of India is only for a short period, for about two or three months.

ಮಾನ್ಯ ಶ್ರೀ ಟಿ. ಮರಿಯಿಪ್ಪನವರು—ಹೆಚ್ಚು ಕಾರಾವಕಾಶವಿಲ್ಲ. ಅದಷ್ಟು ವಿಷಯಗಳನ್ನೂ ಬೇಗ ಬೇಗ ತಿಳಿಸುತ್ತೇನೆ. 1950ನೆಯ ಇಸವಿ ಅಕ್ಟೋಬರಿನಿಂದ 1951ನೆಯ ಇಸವಿ ಅಕ್ಟೋಬರುವರಿಗೆ ನಾವು ಬಹಳ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ 3 ತಾಲ್ಲೂಕುಗಳು, ಚಿತ್ರದುರ್ಗ ಜಿಲ್ಲೆಯಲ್ಲಿ 3 ತಾಲ್ಲೂಕುಗಳು ಏನಾ ಬಾಕಿ ಉಳಿದ ಪ್ರದೇಶಗಳೆಲ್ಲೆಲ್ಲಾ ಸಂಸ್ಥಾನಾದ್ಯಂತವೂ ಬೆಳೆ ಚೆನ್ನಾಗಿದೆ. ನಾನೀಗ ಹೇಳುತ್ತಿರುವುದೆಲ್ಲ 1950-51ಕ್ಕೆ ಪಿಲಿಮಿನರಿ ಎಸ್ಟಿಮೇಟ್ ಎಂದು ತಯಾರಿಸಿರತಕ್ಕ ಅಂಕಿ ಅಂಶಗಳನ್ನು ತಿಳಿಸುತ್ತಿದ್ದೇನೆ ಹೊರತು ಇವು ಅಚ್ಚುಕಟ್ಟು ಅಂಕಿ ಅಂಶಗಳಲ್ಲವೆಂಬುದನ್ನು ದಯವಿಟ್ಟು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈಗಿನ ನಮ್ಮ ಅಂದಾಜಿನ ಪ್ರಕಾರ 18 ಲಕ್ಷ ಪಲ್ಲ ಭತ್ತ, 4 ಲಕ್ಷ 15 ಸಾವಿರ ಇತರ ಧಾನ್ಯಗಳು ಸಂಗ್ರಹವಾಗಬಹುದೆಂದು ಸರ್ಕಾರದವರು ಭಾವಿಸಿದ್ದಾರೆ. ಆದರೆ ಹಿಂದೆ 1950ರ ಪ್ರಾರಂಭದಲ್ಲಿ 18,40 ಟನ್ ಮಾತ್ರ ನಮ್ಮಲ್ಲಿತ್ತು. ಆಗ ನಾವು ಸಂಗ್ರಹಮಾಡಲು ಅಂದಾಜುಮಾಡಿದ್ದುದು 25,735 ಟನ್ ಆದರೆ ಈಗ ನಮ್ಮಲ್ಲಿರತಕ್ಕದ್ದು, ಅಂದರೆ ಸಂಸ್ಥಾನದ ನಾನಾ ರೇಷನ್ ಡಿಪೋಗಳಲ್ಲಿರತಕ್ಕ, ಒಟ್ಟು ಧಾನ್ಯದ ದಾಸ್ತಾನು 18,410 ಟನ್ ಮಾತ್ರ. ಈ ಪೈಕಿ ನಮ್ಮ ಮುಂದಿನ ವರ್ಷಕ್ಕೆಂದು ಹೊಸದಾಗಿ ವಸೂಲುಮಾಡಿದ್ದ ಬತ್ತದಲ್ಲಿ 9,300 ಪಲ್ಲಗಳಲ್ಲಿ, 9,[illegible]0 ಟನ್ ಬತ್ತವನ್ನು ಮಿಲ್ ಮಾಡ್ಸಿ ಅಕ್ಕಿಮಾಡಿ ದೇಶದ ನಾನಾ ಭಾಗಗಳಿಗೆ ಸರಬರಾಯಿ ಮಾಡಲಾಗಿದೆ. ಅಷ್ಟೇ ಅಲ್ಲದೆ ನವಂಬರಿಗೆ 9,810 ಟನ್ ಮಿಲೆಟ್ಸ್ ವತ್ತು ಗೋಧಿ ಕಮ್ಮಿ ಬಿದ್ದಿದೆ. ಅದಕ್ಕಾಗಿ ಈಗಲೂ ಗೋಧಿ ಬರದೆ ಇರುವುದರಿಂದ ಅದಕ್ಕೆ ಬದಲಾಗಿ ಬರಿ ಮೈದಾಹಿಟ್ಟನ್ನು ಹಂಚಲಾಗುತ್ತಿದೆ. ಆದುದರಿಂದ ಈಗ ದೇಶದಲ್ಲಿ ಬೆಳೆಯುವುದರಲ್ಲಿ ಬಹಳ ಎಚ್ಚರಿಕೆಯಿಂದ ಈ ಸಂಗ್ರಹಣಕಾರ್ಯವನ್ನು ನಡೆಸಬೇಕಾಗಿದೆ. ಹೋದ ಸಾರ್ತಿ ಕೇಂದ್ರ ಸರ್ಕಾರದವರು ನವಂಬರಿಗೆ 75 ಸಾವಿರ ಟನ್ ಆಹಾರ ಸಾಮಗ್ರಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದರು. ಇದು ಮದ್ರಾಸು ಮತ್ತು ಬೊಂಬಾಯಿ ಪ್ರಾಂತ್ಯಗಳಿಗೆ ಅವರು ಕೊಡುತ್ತಿರುವ ಕೋಟಾಕ್ಕಿಂತಲೂ ಹೆಚ್ಚಾಗಿಯೇ ಇರುತ್ತೆ. ಆದರೆ ನಮಗೆ ಈ ವರ್ಷ ಈ ಆಹಾರದ ಬಗ್ಗೆ 1 ಲಕ್ಷ 41 ಸಾವಿರ ಟನ್ ನಷ್ಟ ಕೊರತೆ ಇದೆ. ಇಂಡಿಯಾ ಸರ್ಕಾರದವರು ನಮಗೆ ಈಗ 75 ಸಾವಿರ ಟನ್ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಅಲ್ಲಿಗೂ ನಮಗೆ 65 ಸಾವಿರ ಟನ್ ಸಾಲದೆ ಬರುತ್ತಿದೆ. ಈ ಅಂತರವನ್ನು ಮಾನ್ಯ ಸದಸ್ಯರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಇರತಕ್ಕ ಧಾನ್ಯವನ್ನೂ ನಾವು ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕು; ಈ ಅಂತರವನ್ನು ತಾವು ಮರೆಯಬಾರದು. ಆದುದರಿಂದಲೇ ದೇಶದಲ್ಲಿರತಕ್ಕ ಪ್ರತಿಯೊಬ್ಬರೂ ತ್ಯಾಗಮಾಡುವುದಕ್ಕೆ ಮತ್ತು ಇರತಕ್ಕದ್ದನ್ನು ಸಮಾನಾಗಿ ಹಂಚಿಕೊಂಡು ತಿನ್ನತಕ್ಕ ಬಗ್ಗೆ ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿ ಬೇಕಾಗಿದೆ. ಈ ದೃಷ್ಟಿಯಿಂದಲೇ ಇಡಿ ಭಾರತದಲ್ಲೆಲ್ಲಾ ಒಂದೇ ಪಡಿತರ ಪದ್ಧತಿ ಜಾರಿಯಲ್ಲಿರಬೇಕೆಂದು ತಿಳಿಸಲಾಗಿದೆ. ಅದಪ್ರಯುಕ್ತ ಮಾನ್ಯ ಸದಸ್ಯರುಗಳು ಈ ಸಂಬಂಧವಾಗಿ ಚರ್ಚೆ ನಡೆಸುವಾಗ ಕೇವಲ ರಚನಾತ್ಮಕ ದೃಷ್ಟಿಯಿಂದ ಟೀಕೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಇದು ಒಬ್ಬಬ್ಬರಿಗೆ ಅನ್ವಯಿಸಿದ ವಿಚಾರವಲ್ಲ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರ, ಇಡೀ ಸಮಾಜದ ಅಳವು-ಉಳಿವುಗಳ ಇತ್ಯರ್ಥವನ್ನು ನಿರ್ಧರಿಸತಕ್ಕಂಥ ಈ ಆಹಾರ ಸಮಸ್ಯೆ.

ಈ ಆಹಾರ ಸಮಸ್ಯೆಯನ್ನು ಎದುರಿಸತಕ್ಕ ಬಗ್ಗೆ ಮತ್ತು ಇದನ್ನು ಸರಿಪಡಿಸತಕ್ಕ ಬಗ್ಗೆ ಎಲ್ಲರ ರಚನಾತ್ಮಕ ಟೀಕೆಗೂ ಮನ್ನಣೆ ಉಂಟು. ತಾವು ಮಾಡತಕ್ಕ ಟೀಕೆ ದೇಶದಲ್ಲಿ ಆಹಾರೋತ್ಪನ್ನಗಳ ಬಗ್ಗೆ ಒಂದು ಕ್ರಾಂತಿಕಾರಕ ಬಳವಳಿ ಮೂಡುವಂಥಾದ್ದಾಗಿರಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗಿಲ್ಲದೆ ಅನ್ಯಥಾ ಟೀಕ ಟಪ್ಪಣಿಗಳನ್ನು ಹೇಳಬೇಕೆಂದರೆ ಅದಕ್ಕೂ ಬೇಕಾದಷ್ಟು ಅವಕಾಶ ಇದೆ. ಆಹಾರದ ವಿಷಯದಲ್ಲಿ ಜನಗಳನ್ನು ಯಾರ ಮೇರಾಗಲ ಎತ್ತಿಕಟ್ಟುವುದು ಬಹಳ ಸುಲಭ. ಆದರೆ ಅದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ; ದೇಶಕ್ಕೂ ಪ್ರಯೋಜನವಾಗುವುದಿಲ್ಲ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಆಹಾರ ಸಮಸ್ಯೆಯನ್ನೂ ಬಿಡಿಸಿದ ಹಾಗಾಗುವುದಿಲ್ಲ. ಆ ದೃಷ್ಟಿಯಿಂದ ಈ ವಿಷಯದಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಸಹ ಸಹೃದಯದಿಂದ ಮತ್ತು ರಚನಾತ್ಮಕವಾಗಿ ವಿಮರ್ಶೆಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ. ಈಗಿರುವ 75 ಸಾವಿರ ಟನ್‌ನಿಂದ ನಮಗೆ ತೃಪ್ತಿಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರವನ್ನು ಹೆಚ್ಚಿಗೆ ಕೊಡಲು ಒತ್ತಾಯಮಾಡುತ್ತಿದ್ದೇವೆ. ಆದರೂ ದಕ್ಷಿಣ ಇಂಡಿಯಾದ ಪ್ರಾಂತಗಳು ಯಾವಾಗಲೂ ಕೊರತೆಯ ಪ್ರದೇಶಗಳು ಎಂದು ವ್ಯವಸಾಯವನ್ನು ವೃದ್ಧಿಮಾಡಿ ಸಾಧ್ಯವಾದಷ್ಟು ನರಿಪಡಿಸಲು ಇಲ್ಲೂ ಪ್ರಯತ್ನಪಡುತ್ತಿದ್ದೇವೆ. ಈ ಸಂದರ್ಭದಲ್ಲಿ ಬೊಂಬಾಯಿ ಆಹಾರ ಮಂತ್ರಿಗಳು ಮಾಡಿರುವ ಭಾಷಣ ನೋಡಿದರೆ ಅಲ್ಲಿ ಕೂಡ ಎಂಥ ಕಷ್ಟಪರಿಸ್ಥಿತಿ ಬಂದಿದೆ ಎಂಬುದು ಗೊತ್ತಾಗುತ್ತದೆ. ಕೈಗಾರಿಕಾ ಪ್ರದೇಶಗಳಿರುವ ಪ್ರಾಂತಗಳಲ್ಲಿ ಅಂದರೆ ಬೊಂಬಾಯಿ, ಅಹಮದಾಬಾದ್, ಸೋಲಾಪುರ ಮುಂತಾದ ಸ್ಥಳಗಳಲ್ಲೂ ಹಂಚಿಕೆ ನರಿಯಾಗಿ ನಡೆಸುವುದಕ್ಕೆ ಹೆಚ್ಚಿಗೆ ಆಹಾರ ಧಾನ್ಯ ಬೇಕು. ಅಲ್ಲದೆ ಬೊಂಬಾಯಿಯೂ ಕೂಡ ಕೊರತೆಯ ಪ್ರದೇಶ. ಒಂದು ವರ್ಷ ಮದ್ರಾಸಿನಲ್ಲಿ ಮುಂಗಾರು ಮಳೆ ನರಿಯಾಗಿ ಬಾರದೆ ಕಷ್ಟವಾಗಿದೆ. ಹೀಗೆ ಕೊರತೆಯಿರುವ ಕಡೆಯ ಪರಿಸ್ಥಿತಿಯನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಬೇಕು. ನಮ್ಮ ದೇಶದಿಂದ ಹೊರಗೆ ಹೋಗುವುದನ್ನೂ ತಡೆಗಟ್ಟಿ ಮತ್ತು ಒಳಗೆ ಎಲ್ಲ ಸಾಧ್ಯವೋ ಅಲ್ಲಿ ದೊಡ್ಡ ಮನಸ್ಸುಮಾಡಿ ಮಹನೀಯರು ಯಾರು ಬೆಳೆಯುತ್ತಾರೋ ಅವರಿಂದ ಸಂಗ್ರಹಿಸಿ, ಯಾರು ಬೆಳೆಯುವುದಿಲ್ಲವೋ ಅವರಿಗೆ ಒದಗಿಸಲು ಸಹಾಯಮಾಡಿ, ಉತ್ಪತ್ತಿ ಹೆಚ್ಚಿಸಲು ಅನುಕೂಲಿಸುವಂತೆ ಮಾಡಬೇಕಾದ್ದು ಇಡೀ ದೇಶದ ಪ್ರತಿನಿಧಿಗಳ ಕರ್ತವ್ಯ. ಆ ಒಂದು ದೃಷ್ಟಿಯಿಂದ ದಯವಿಟ್ಟು ವಿಮರ್ಶೆಮಾಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಮೊದಲೇ ತಿಳಿಸಿರುವ ಹಾಗೆ ಈ ಆಹಾರ ಸಮಸ್ಯೆಯು ಪಕ್ಷದ ಪ್ರಶ್ನೆಯಲ್ಲ, ಸರ್ವರ ಪ್ರಶ್ನೆ ಎಂದು ತಿಳಿದು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಬೇಕೆಂದು ಪ್ರಾರ್ಥಿಸಿಕೊಂಡು ಈ ಅಂಶವನ್ನು ಸಭೆಯು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

Mr. SPEAKER.—Motion moved :

" That the food situation in the State be taken into consideration."

There are some amendments. Sri V. S. Narayana Rao may move his amendment.

***The Hon'ble Sri K. CHENGALARAYA REDDY.**—Before we continue the debate, I would like to once again invite the attention of this Hon'ble House to the fact that we have to close the debate by 11-30 A. M. The House will have to meet again at 1 P. M. because between 11-30 A. M. and 1 P. M. the Cabinet has to meet for the transaction of urgent business. So the debate has to be regulated in such a way that we may be able to complete it by 11-30 A.M. There are two or three amendments. After they are moved, I request that the Chair may be pleased to fix a time limit for speeches so that we may complete the debate well within time

Sri V. S. NARAYANA RAO (Bangalore City-General).—Sir, I beg to move the following amendment :

"That while holding that decontrol should be the ultimate policy of the State, this Assembly on further consideration of the present food situation in the country recommends to the Mysore Government to urge on the Union Government the imperative need of supplying at least 1,40,000 tons of food grains to Mysore for the year 1951, out of which at least 50,000 tons should be rice, to enable the State Government to maintain and continue the present standard system of food control and rationing."

ಸ್ವಾಮಿ, ಮಾನ್ಯ ಮಂತ್ರಿಗಳು ವಿವರಿಸಿದಂತೆ ಇದು ಬಹಳ ಬೃಹತ್ಪ್ರಶ್ನೆ, ಬಹಳ ಜಟಿಲವಾದ ಪ್ರಶ್ನೆ. ಇದು ಕೇವಲ ಮೈಸೂರಿಗೆ ಮಾತ್ರ ಅನ್ವಯಿಸುವ ಪ್ರಶ್ನೆಯಲ್ಲ. ಇದು ಭಾರತಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೇ ಅನ್ವಯಿಸುವ ದೊಡ್ಡ ಪ್ರಶ್ನೆ. ಈ ವಿಚಾರದಲ್ಲಿ ಎಷ್ಟು ದೀರ್ಘ ಭಾಷಣ ಬೇಕಾದರೂ ಮಾಡಬಹುದು. ಹತೋಟಿಯಿರಬೇಕೆ, ಇರಬಾರದೆ ಎಂಬುದೇ ಒಂದು ದೊಡ್ಡ ಪ್ರಶ್ನೆಯಾಗಿ ನಮ್ಮ ಮುಂದಿದೆ. ಆಹಾರ ಹತೋಟಿ, ಧಾರಣ್ ಹತೋಟಿ ಸಮಸ್ಯೆಗಳನ್ನು ತೆಗೆದುಕೊಂಡರೆ ಸರ್ಕಾರ ಸಂಪೂರ್ಣ ಜವಾಬ್ದಾರಿ ವಹಿಸಿ ಜನರಿಗೆ ಅನ್ನವನ್ನು ಒದಗಿಸಲು ಪ್ರಯತ್ನಮಾಡಿದಂತಾಗುತ್ತದೆ. ಈ ಜವಾಬ್ದಾರಿಯನ್ನು ಸರ್ಕಾರ ಪ್ರತ್ಯಕ್ಷವಾಗಿ ವಹಿಸಿಕೊಳ್ಳಬೇಕೆ ಅಥವಾ ಪರೋಕ್ಷವಾಗಿ ಬೇರೆ ರೂಪವಾಗಿ ಆಹಾರವನ್ನು ಹೆಚ್ಚಾಗಿ ಬೆಳೆಸಲು ಸಹಾಯವಾಗಬೇಕೆ ಎಂಬುದು ಒಂದು ಪ್ರಶ್ನೆ. ಹತೋಟಿಯಿಡುವುದು ಮತ್ತು ಹತೋಟಿ ತೆಗೆಯುವುದು—ಈ ವಿಚಾರ ಮಾತನಾಡುತ್ತಾ ಹೋದರೆ ಬಹಳ ದೀರ್ಘವಾಗಿ ಬಹು ಹೊತ್ತು ಆಡೀತು. ಏನೇ ಆಗಲಿ ಹತೋಟಿಯು ನಮ್ಮ ದೇಶಕ್ಕೆ ಬಂದುದು ಯುದ್ಧವಾದ ಮೇಲೆ. ಅದು ಬಂದು ಬಹುಕಾಲವಾಗಿ ಅನೇಕ ಸಮಸ್ಯೆಗಳು ನಮ್ಮ ದೇಶದಲ್ಲಿ ಉದ್ಭವಿಸುತ್ತಿವೆ. ದೇಶದಲ್ಲಿ ಅನೀತಿ ತಲೆದೋರುವುದಕ್ಕೆ ಇದರಿಂದಾಗಿರುವಷ್ಟು ಅವಕಾಶ ಇನ್ಯಾವುದರಿಂದಲೂ ಆಗಿಲ್ಲ. ಇದು ಬಂದಮೇಲೆ ಜನರ ನೀತಿಯ ಮಟ್ಟ ಬಹಳ ಕೆಳಗಿಳಿದಿದೆಯೆಂಬುದು ಎಲ್ಲರಿಗೂ ತಿಳಿದ ಅಂಶ. ಆದ್ದರಿಂದ ಹತೋಟಿಯನ್ನು ಇಟ್ಟುಕೊಳ್ಳಬೇಕೆ, ಅದೇ ರೀತಿಯಾಗಿ ಅದರ ಜೊತೆಯಲ್ಲಿ ಧಾರಣ್‌ಹತೋಟಿ, ಧಾನ್ಯಗಳ ಸಾಗಾಣಿಕೆ ಹತೋಟಿ ಇಟ್ಟುಕೊಳ್ಳಬೇಕೆ ಎಂಬುದು ಒಂದು ಬಹಳ ದೊಡ್ಡ ಸಮಸ್ಯೆ. ಇದಲ್ಲದೆ ಹತೋಟಿಯನ್ನು ಕೂಡ ಒಂದೊಂದು ಪ್ರಾಂತದಲ್ಲಿ ಒಂದೊಂದು ವಿಧವಾದ ಪದ್ಧತಿ ಪ್ರಕಾರ ಜಾರಿಗೆ ತರುತ್ತಿದ್ದಾರೆ. ಕೆಲವು ಕಡೆ ಕೈಗಾರಿಕಾ ಪ್ರದೇಶಗಳಲ್ಲಿ ಮಾತ್ರ ಹತೋಟಿಯನ್ನಿಟ್ಟು ಬಾಕಿ ಗ್ರಾಮಾಂತರ ಪ್ರದೇಶಗಳಲ್ಲಿ ಅದನ್ನು ತೆಗೆಯಬೇಕೆಂಬ ಪ್ರಯತ್ನವಿದೆ. ಮದ್ರಾಸಿನಲ್ಲಿ ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹತೋಟಿಯನ್ನು ತೆಗೆದಿದ್ದಾರೆ. ಅಲ್ಲಿ ಕೈಗಾರಿಕಾ ಪ್ರದೇಶದಲ್ಲಿ ಮಾತ್ರ ಹತೋಟಿಯಿದೆ. ನಮ್ಮಲ್ಲೂ ಕೂಡ ಸ್ಯಾಚ್ಯುಟರಿ ಪ್ರದೇಶ ಮತ್ತು ನಾನ್ ಸ್ಯಾಚ್ಯುಟರಿ ಪ್ರದೇಶ

ಎಂದು ಎರಡು ವಿಭಾಗಮಾಡಿ ಕೆಲವುಕಡೆ ಪ್ರತ್ಯಕ್ಷವಾಗಿ, ನೇರವಾಗಿ ಸರ್ಕಾರ ಆಹಾರವನ್ನು ಕೊಡುತ್ತಿದೆ. ಇನ್ನು ಕೆಲವು ಕಡೆ ಸಂಪೂರ್ಣ ಜವಾಬ್ದಾರಿ ವಹಿಸದೆ ಸಾಧ್ಯವಾದರೆ ಒದಗಿಸುತ್ತೇವೆ ಎಂದು ಹೇಳಿ ಒಂದು ವಿಧದಲ್ಲಿ ಆಹಾರ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಡುತ್ತಿದ್ದಾರೆ. ಮತ್ತು ಆಹಾರವು ಹೊರಗಿನಿಂದ ಬಾರದೇ ಇದ್ದರೂ ನರಿತೂಗಿಸುವುದಕ್ಕೆ ಅವಕಾಶವಾಗುವಂತೆ ನಮ್ಮ ದೇಶ ಸ್ವಾವಲಂಬಿಯಾಗಿಲ್ಲ. ಎಷ್ಟೋ ಮಂದಿ ಹತೋಟಿ ತೆಗೆಯಬೇಕೆಂದು ಹೇಳಿದರೂ ನಮ್ಮ ದೇಶಕ್ಕೆ ಬೇಕಾದಷ್ಟು ಆಹಾರ ನಮ್ಮಲ್ಲ ಉತ್ಪತ್ತಿಯಾಗುವವರೆಗೂ ಹತೋಟಿಯು ಮುಂದುವರಿಯಬೇಕಾಗಿದೆ. ನಮ್ಮಲ್ಲರುವ ಅಂಕಿ ಅಂಶಗಳನ್ನು ನೋಡಿದರೆ ಸಾಕಾದಷ್ಟು ಆಹಾರ ನಮ್ಮಲ್ಲಿ ಇಲ್ಲದಿರುವುದರಿಂದ ಹೊರಗಿನಿಂದ ಸ್ವಲ್ಪ ಕಾಲವಾದರೂ ಆಹಾರವನ್ನು ತರಿಸಿಕೊಳ್ಳಲೇಬೇಕಾಗುತ್ತದೆಯೆಂಬುದು ಸ್ಪಷ್ಟವಾಗಿದೆ. ಯಾರೂ ಕೂಡ ನಮ್ಮ ದೇಶವು ಸ್ವಾವಲಂಬಿಯಾಗಬಾರದೆಂದು ಹೇಳುವುದಿಲ್ಲ. ದೇಶ ಸ್ವಾವಲಂಬಿಯಾಗಬೇಕು, ಹೊರಗಿನಿಂದ ಆಹಾರ ತರಿಸುವುದು ನಿಲ್ಲಬೇಕು ಎಂಬುದು ಸಾಮಾನ್ಯವಾದ ಅಭಿಪ್ರಾಯವಾಗಿದೆ. ಆದರೆ ಈ ಅಭಿಪ್ರಾಯದಲ್ಲೂ ಕೆಲವು ಅನೇಕರು ಭಿನ್ನಾಭಿಪ್ರಾಯವಿಟ್ಟಿದ್ದಾರೆ. ಪ್ರೊಫೆಸರ್ ನಾರಾಯಣಸ್ವಾಮಿ ನಾಯ್ಡು ಅಂಥವರೂ ಕೂಡ ಆಹಾರ ಸಾಮಗ್ರಿಗಳನ್ನು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುವುದರಿಂದ ಅಷ್ಟು ಅನುಕೂಲವಿಲ್ಲ ಎಂದು ಹೇಳಿದ್ದಾರೆ. ಏಕೆಂದರೆ ಅಕ್ಕಿ, ಗೋಧಿ ಹೊರದೇಶಗಳಲ್ಲಿ ಸುಲಭವಾದ ಬೆಲೆಗೆ ಸಿಕ್ಕುತ್ತದೆ. ಅಮೆರಿಕಾದಿಂದ ಗೋಧಿ, ಬರ್ಮಾದಿಂದ ಅಕ್ಕಿ ತರಿಸಬಹುದು. ಅಲ್ಲಿ ಸುಲಭಬೆಲೆಗೆ ಆಹಾರಪದಾರ್ಥಗಳು ದೊರೆಯುತ್ತವೆ. ಆದ್ದರಿಂದ ನಮ್ಮ ದೇಶದಿಂದ ಸೆಣಬು ಮತ್ತು ಹತ್ತಿ ಮುಂತಾದುವನ್ನು ಹೊರದೇಶಗಳಿಗೆ ಕಳುಹಿಸಿ ಅಲ್ಲಿಂದ ಗೋಧಿ ಮತ್ತು ಅಕ್ಕಿ ತರಿಸೋಣ ಎಂದು ಹೇಳತಕ್ಕಂಥ ಪ್ರವೀಣರು ಕೂಡ ಇದ್ದಾರೆ. ಇದನ್ನು ನೋಡಿದರೆ ನಮ್ಮ ದೇಶದಲ್ಲೇ ಭಿನ್ನಾಭಿಪ್ರಾಯವಿದೆಯೆಂಬುದು ವ್ಯಕ್ತವಾಗುತ್ತದೆ. ಮದ್ರಾಸಿನ ಎಕನಾಮಿಕ್ ಪ್ರೊಫೆಸರು ಇಂಥ ಅಭಿಪ್ರಾಯ ಸೂಚಿಸಿದ್ದಾರೆ. ಸಾಮಾನ್ಯವಾಗಿ ಈ ವಿಚಾರದಲ್ಲಿ ಬಹು ದೀರ್ಘವಾಗಿ ಗಮನಕೊಟ್ಟಿರುವವರು ಮಹಾತ್ಮಾ ಗಾಂಧಿಯವರು. ಅವರಂತೂ ಒಂದೇ ಒಂದು ಮೇಲುಪಂಕ್ತಿ ಹಾಕಿದ್ದಾರೆ. ಏನೆಂದರೆ ಸ್ವಾವಲಂಬಿಯಾಗಬೇಕು, ಮುಖ್ಯವಾಗಿ ಕೈಗಾರಿಕೆಗಳು ವಿಕೇಂದ್ರೀಕರಣವಾಗಬೇಕು ಎಂದು ಹೇಳಿದ್ದಾರೆ. ಪ್ರತಿಯೊಂದು ಗ್ರಾಮ ಮತ್ತು ಪ್ರತಿಯೊಂದು ಹಳ್ಳಿಯೂ ತನಗೆ ಬೇಕಾದ್ದನ್ನು ತಾನೇ ಒದಗಿಸಿಕೊಳ್ಳಬೇಕು ಎಂಬ ಮಹಾತತ್ವವನ್ನು ಹೇಳಿದ್ದಾರೆ. ಪ್ರತಿಯೊಂದು ಗ್ರಾಮದಲ್ಲಿ ಅಥವಾ ನಾಲ್ಕೈದು ಗ್ರಾಮಗಳಿರುವ ಒಂದು ಪ್ರದೇಶದಲ್ಲಿ ಅಲ್ಲಿಯವರೇ ಬೇಕಾದ ಆಹಾರವನ್ನು ಬೆಳೆದುಕೊಳ್ಳಬೇಕು, ಅತ್ಯವಶ್ಯಕವಾದ ಬಟ್ಟೆ ಮತ್ತು ಇತರ ಸಾಮಗ್ರಿಗಳನ್ನು ಸಾಧ್ಯವಾದ ಮಟ್ಟಿಗೆ ಅವರವರೇ ಸಿದ್ಧಮಾಡಿಕೊಳ್ಳಬೇಕು ಎಂಬ ತತ್ವವನ್ನು ಸಾರಿ ಮೇಲುಪಂಕ್ತಿ ಹಾಕಿದ್ದಾರೆ. ಆದರೆ ಕ್ರಮಕ್ರಮವಾಗಿ ಎಷ್ಟುಮಟ್ಟಿಗೆ ನಾವು ಆ ತತ್ವವನ್ನು ಹಿಡಿದುಕೊಂಡು ಅನುಸರಿಸಿಕೊಂಡು ಬರುತ್ತಿದ್ದೇವೆ ಎಂಬುದನ್ನು ವಿಮರ್ಶೆಮಾಡುವುದಕ್ಕೆ ಬಹಳ ಕಾಲ ಬೇಕಾಗಿದೆ. ಒಂದು ಕಡೆ ಮಹಾತ್ಮಾ ಗಾಂಧಿಯವರು ನಮಗೆ ವಿಕೇಂದ್ರೀಕರಣ ತತ್ವ, ಸ್ವಾವಲಂಬನ ತತ್ವ ಹಾಕಿಕೊಟ್ಟಿದ್ದರೆ ಮತ್ತೆ ಕೆಲವರು ಕೈಗಾರಿಕೆ ಜಾಸ್ತಿಯಾಗಬೇಕು, ಗ್ರಾಮಗಳಲ್ಲಿ ಕೂಡ ಗ್ರಾಮಕೈಗಾರಿಕೆ ಜಾಸ್ತಿ ಮಾಡಬೇಕು ಎಂದು ಹೇಳುತ್ತಿದ್ದಾರೆ. ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಇತರರು ಈ ಕೈಗಾರಿಕಾ ತತ್ವವನ್ನು ಸಾರುತ್ತಿದ್ದಾರೆ.

ಕೈಗಾರಿಕೆಗಳು ಜಾಸ್ತಿಯಾಗದೇಯಿದ್ದರೆ ನಮ್ಮ ಐಶ್ವರ್ಯ ಬೆಳೆಯುವುದಿಲ್ಲ, ವ್ಯವಸಾಯವೊಂದನ್ನು ಮಾತ್ರ ನಾವು ಇಟ್ಟುಕೊಂಡರೆ ನಮ್ಮ ದೇಶ ಆಹಾರದ ವಿಷಯದಲ್ಲಿ ಸ್ವಪರಿಪೂರ್ಣವಾದರೂ ಮಿಕ್ಕ ದೃಷ್ಟಿಗಳಿಂದ ಹಿಂದೆ ಬೀಳುತ್ತದೆ. ಆದಕಾರಣ ಕೈಗಾರಿಕೆಗಳನ್ನು ಬೆಳಸಿ ಅದರಿಂದ ಹಣವನ್ನು ಹೆಚ್ಚು ಸಂಪಾದಿಸಬೇಕೆಂದು ಕೆಲವರು ಹೇಳುತ್ತಿದ್ದಾರೆ. ಈ ಅಭಿಪ್ರಾಯ ದೇಶದಲ್ಲಿ ಬಂದು ಅಹಾರವನ್ನು ಬೆಳೆಯಿಸುವುದು ಬಹಳ ಕಡಮೆಯಾಗುತ್ತಿದೆ. ಹೆಚ್ಚು ಪ್ರದೇಶವನ್ನು commercial crops ಬೆಳೆಯುವುದಕ್ಕೆ ಉಪಯೋಗಿಸುತ್ತಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಅವರ ತಿದ್ದುಪಡಿಯ ವಿಷಯ ಮಾತ್ರ ಮಾತನಾಡಬೇಕು.....

ಅಧ್ಯಕ್ಷರು.—ತಿದ್ದುಪಡಿಗೆ ಮಾತ್ರ ಅನ್ವಯಿಸುವಂತೆ ಮಾತನಾಡಿದರೆ ಒಳ್ಳೆಯದು.

ಶ್ರೀ ಎ. ಎಸ್. ನಾರಾಯಣರಾಯರು.—ಹಾಗೆಯೇ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಸಾಮಾನ್ಯವಾಗಿ ಕೆಲವು ವಿಷಯಗಳನ್ನು ಹೇಳಿದುದರಿಂದ ನಾನು ನಾಲ್ಕು ಮಾತು ಹೇಳಿ ಪುಷ್ಟೀಕರಿಸುತ್ತೇನೆ. ಹೆಚ್ಚು ಬೆಳೆಯುವುದಿಲ್ಲ, ಹತೋಟಿ ಬೇಕೆಂದು ಯಾರೂ ಇಚ್ಛಿಸುವುದಿಲ್ಲ. ಪಟ್ಟಣಗಳಿಗೆ ಮಾತ್ರ ಇದು ಅವಶ್ಯಕ, ಇದನ್ನು ಜಾರಿಯಲ್ಲಿಡಬೇಕಾಗಿದೆ, ಏಕೆಂದರೆ ಅಲ್ಲಿ ಬೆಳೆಯುವುದಿಲ್ಲವೆಂದು ಹೇಳಿದರು. ಆದರೆ ನಾನು ಪಟ್ಟಣಗಳ ಜನರ ಪರವಾಗಿ ಮಾತನಾಡುವುದಾದರೆ ಅವರೂ ಕೂಡ ಪಡಿತರ ಬೇಕೆಂದು ಹೇಳುವುದಿಲ್ಲ. ಇದು ಅನಿವಾರ್ಯವಾಗಿ ತಾತ್ಕಾಲಿಕವಾಗಿ ಜಾರಿಗೆ ಬಂತು; ಆದಷ್ಟು ಬೇಗ ಹೋಗಬೇಕು, ಇದನ್ನು ತೆಗೆದುಹಾಕಬೇಕು ಎನ್ನುವುದು ಪಟ್ಟಣಗಳ ಜನರ ಅಭಿಪ್ರಾಯವೆಂದು ನಾನು ಹೇಳುತ್ತೇನೆ. ನಮಗೆ ಕೊರತೆ ಬೀಳತಕ್ಕ 1,40,000 ಟನ್ನಿನಷ್ಟು ಆಹಾರ ಪದಾರ್ಥಗಳನ್ನಾದರೂ ಕೇಂದ್ರ ಸರ್ಕಾರದವರು ಒದಗಿಸಿ ಕೊಡಬೇಕೆಂದು ಪ್ರಾರ್ಥಿಸಬೇಕು. ಈಗ ಕೇಂದ್ರಸರ್ಕಾರದವರು ಪಡಿತರ ಪ್ರಮಾಣವನ್ನು 9 ಔನ್ಸ್ ಮಾಡಿದ್ದಾರೆ. ಅದರಲ್ಲಿ ಮುದರಾನು ಸರ್ಕಾರದವರು 7 ಔನ್ಸ್ ಅಕ್ಕಿಯನ್ನು ಕೊಡುತ್ತೇವೆಂದು ತಿಳಿಸಿದ್ದಾರೆ. ಆದರೆ ನಮ್ಮಲ್ಲಿ ಐದು ಅಥವ ಆರು ಔನ್ಸ್ ಅಕ್ಕಿ ಕೊಡುತ್ತಾರೆ. ಇದರಲ್ಲಿಯೂ ಪೂರ್ತಿಯಾಗಿ ಸಿಕ್ಕುವುದಿಲ್ಲ. ಬತ್ತ ಹೊಟ್ಟು ತೆಗೆದು ಹಾಕಿದರೆ ಒಂದು ಔನ್ಸಿನಷ್ಟು ಕಡಿಮೆಯಾಗುತ್ತದೆ. ನಮ್ಮ ಮುಖ್ಯ ಆಹಾರ ಅಕ್ಕಿ, ಇದನ್ನು 7 ಔನ್ಸಿನಷ್ಟಾದರೂ ಕೊಡಬೇಕು. ಇದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು. ಇದಕ್ಕಾಗಿ ಕೇಂದ್ರ ಸರ್ಕಾರದವರು ನಮ್ಮ ಸಂಸ್ಥಾನಕ್ಕೆ ಅವಶ್ಯಕವಾಗಿರುವ 1,40,000 ಟನ್ ಆಹಾರವನ್ನೊದಗಿಸಬೇಕೆಂದು ಹೇಳಿ ಈ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.–Amendment moved:–

" That while holding that decontrol should be the ultimate policy of the State, this Assembly on further consideration of the present food situation in the country recommends to the Mysore Government to urge on the Union Government the imperative need of supplying at least 1,40,000 tons of foodgrains to Mysore for the year 1951, out of which at least 50,000 tons should be rice

(MR. SPEAKER.)

to enable the State Government to maintain and continue the present standard system of food control and rationing."

Sri Kadidal MANJAPPA (Shimoga District—General).—There are two amendments standing in my name. May I move both of them?

Mr. SPEAKER.—Yes.

Sri Kadidal MANJAPPA.—Sir, I beg to move :

"That this House is of the opinion that the State Government should request the Central Government to withdraw the Gur Control Order."

"That this House is of the opinion that the policy of subsidising the issue price of foodgrains be immediately discontinued by this Government."

ಸ್ವಾಮಿ, ಯಾವ ಹತೋಟಿ ಆಜ್ಞೆಯಾಗಲಿ ಯಶಸ್ವಿಯಾಗಿ ನಡೆಯಬೇಕಾದರೆ ಜನರಲ್ಲಿ ಪ್ರಾಮಾಣಿಕತೆ ಮತ್ತು ನೀತಿ ಇರಬೇಕು. ನಮ್ಮ ದೇಶದಲ್ಲಿ ಈಗಿರುವ ಪರಿಸ್ಥಿತಿಯಲ್ಲಿ, ಹತೋಟಿ ಆಜ್ಞೆಗಳ ಇದಕ್ಕಿಂತಲೂ ಹೆಚ್ಚು ಸಮರ್ಪಕವಾಗಿ ನಡೆಯುವುದಿಲ್ಲವೆಂಬುದು ನನ್ನ ಖಚಿತವಾದ ಸಿದ್ಧಾಂತ. ಹೋದ ಅಕ್ಟೋಬರ್ ತಿಂಗಳಲ್ಲಿ ಭಾರತ ಸರ್ಕಾರದವರು ಬೆಲ್ಲದ ಹತೋಟಿಯ ಆಜ್ಞೆಯನ್ನು ಆರ್ಡಿನೆನ್ಸ್ ಆಗಿ ಹೊರಡಿಸಿದರು. ಅವರು ಇದನ್ನು ಹೊರಡಿಸುವುದಕ್ಕೆ ಮುಂಚಿತವಾಗಿ ಸಂಸ್ಥಾನಗಳ ಸರ್ಕಾರಗಳ ಅಭಿಪ್ರಾಯವನ್ನು ಕೇಳಿಲ್ಲವೆಂಬುದು ನನಗೆ ಗೊತ್ತು. ಅದಕಾರಣ ನಾನು ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾಗಿರುವ ಶ್ರೀಮಾನ್ ಕೆ. ಎಂ. ಮುನ್ಷಿಯವರಿಗೆ ಒಂದು ಕಾಗದವನ್ನು ಬರೆದು ಇಂಥ ಆಜ್ಞೆಯನ್ನು ಏಕಾಏಕಿ ಹೊರಡಿಸಿ ಸರ್ಕಾರವನ್ನೂ ಕಾಂಗ್ರೆಸ್ಸಿನವರನ್ನೂ ಜನರು ದೂರುವುದಕ್ಕೆ ಅವಕಾಶ ಕೊಡಬೇಡಿ, ನೀವು ಯಾವ ಇಂತಹ ಆಜ್ಞೆಯನ್ನು ಮಾಡಿದರೂ ಜನರು ನಮ್ಮ ಸರ್ಕಾರವನ್ನು ದೂರ ತ್ಯಾರೆ ಎಂದು ಅದರಲ್ಲಿ ತಿಳಿಸಿದೆ. ಅದಕ್ಕೆ ಅವರು ಜವಾಬು ಬರೆದು ಇದು ಬಹಳ ಸೂಕ್ಷ್ಮ ವಾಪ ಕಾನೂನು ಎಂದು ತಿಳಿಸಿದರು. ಒಂದು ಆರ್ಡಿನೆನ್ಸ್ ಮಾಡಬೇಕಾದರೆ ಪ್ರಾಂತ ಸರ್ಕಾರಗಳನ್ನು ಅವರು ಕೇಳುವುದು ಸೂಕ್ತ. ಹಾಗೆ ಮಾಡದೆ ಅವರೇ ಒಂದು ಪರಮಾವಧಿ ಬೆಲೆಯನ್ನು ನಿರ್ಧಾರ ಮಾಡಿ ಜನರಲ್ಲರುವ ಬಡಾಸ್ತಾನನ್ನು ವಶಪಡಿಸಿಕೊಳ್ಳಬೇಕೆಂದು ಆರ್ಡಿನೆನ್ಸ್ ಹೊರಡಿಸಿದರೆ ಅದರಿಂದ ಏನು ಪರಿಣಾಮ ಬಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಯಾವಾಗ ಈ ಆಜ್ಞೆಯನ್ನು ಅವರು ಹೊರಡಿಸಿದರೋ ಇದ್ದ ದಾಸ್ತಾನೆಲ್ಲವೂ ನೆಲಮಾಳಿಗೆಗಳಿಗೆ ಹೋಯಿತು. ನಮ್ಮ ಮಲೆನಾಡಿನಲ್ಲಿ ಕಾಫಿ ಮಾಡುವುದಕ್ಕೆ ಬೆಲ್ಲ ಎಲ್ಲದೆ ಪೆಪ್ಪರ್‌ಮೆಂಟನ್ನು ಉಪಯೋಗಿಸಿ ಕಾಫಿ ಮಾಡುತ್ತಿದ್ದಾರೆ. ಅಲ್ಲಿನ ಜನರಿಗೆ ಕಾಫಿ ಬಿಡುವುದು ಕಷ್ಟ. ಈ ಆಜ್ಞೆ ಪ್ರಕಾರ ಸರ್ಕಾರದವರು ಜೆಲ್ಲ ಇಂಪೀರಿಯರ್ ಮಣ ಒಂದಕ್ಕೆ 22 ರೂಪಾಯಿ ಎಂದು ಗೊತ್ತು ಮಾಡಿದರು. ಆದರೆ ಈ ಆಜ್ಞೆ ಜಾರಿಗೆ ಬಂದಮೇಲೆ ನಮ್ಮ ಕಡೆಯ ಸ್ಥಳೀಯ ಮಣಕ್ಕೇ 25 ರೂಪಾಯಿವರೆಗೆ ಕಾಳಸಂತೆಯಲ್ಲಿ ಬೆಲ್ಲದ ಬೆಲೆ ಏರಿತು. ಎಲ್ಲಾದರೂ ದಾಸ್ತಾನಿದ್ದರೆ ಅದನ್ನು ವಶಪಡಿಸಿಕೊಂಡು ಅದನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿಸುತ್ತೇವೆ ಎಂದು ಮಂತ್ರಿಗಳು ಹೇಳಿದರು. ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಬೆಲ್ಲವನ್ನೂ ಹೊರಡಿಸುವ ವ್ಯವಸ್ಥೆಯನ್ನೇನೂ ಮಾಡಿಲ್ಲ. ಸರ್ಕಾರ ಒಂದು ಬೆರೆಯನ್ನು ಗೊತ್ತುಮಾಡಿ, ದಾಸ್ತಾನು ಸಿಕ್ಕಿದರೆ ಅದನ್ನು ವಶಪಡಿಸಿಕೊಂಡು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿಸಿ ಎಂದು ಹೇಳಿದ್ದಾರೆ. ಇದು ಯಶಸ್ವಿಯಾಗಿ ನಡೆಯುತ್ತದೆಯೆ! ದಾಸ್ತಾನಿಟ್ಟಿರುವುದು ಸರ್ಕಾರದವರಿಗೆ ತಿಳಿದರೆ ವಶಪಡಿಸಿಕೊಳ್ಳುತ್ತಾರೆಂಬುದನ್ನು ಜನ ತಿಳಿದುಕೊಂಡು ಬೆಲ್ಲವನ್ನು ಹೊರಕ್ಕೇ ತೆಗೆದಿಲ್ಲ, ಎಲ್ಲವೂ ಮಾಯವಾಗಿ ನೆಲಮಾಳಿಗೆಯಲ್ಲದೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಈಗೇನೂ ಬೆಲ್ಲಕ್ಕೆ ತೊಂದರೆಯಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಕಡೆ ಈಗಲೂ ತೊಂದರೆಯಿದೆ. ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಬೆಂಗಳೂರು ಜಿಲ್ಲೆ, ಮಂಡ್ಯ ಜಿಲ್ಲೆಗಳಲ್ಲಿ ಸಿಕ್ಕಬಹುದು. ಇತರ ಜಿಲ್ಲೆಗಳಲ್ಲಿ ಸಿಕ್ಕುವುದಿಲ್ಲ.

Sri K. PUTTASWAMY.—Our information is that Shimoga is consuming more gur now (laughter.)

Sri M. L. NANJARAJ URS (Mysore District—General).—For illicit distillation!!

ಶ್ರೀ ಕಡಿದಾಳ್ ಮಂಜಪ್ಪನವರು.—ಯಾವ ಹತೋಟಿ ಆಜ್ಞೆಗಳೂ ಬೇಕಾಗಿಲ್ಲವೆಂಬ ಭಾವದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ಹತೋಟಿ ಆಜ್ಞೆ ಜಾರಿಗೆ ಬಂದದ್ದರಿಂದಲೇ ಈ ತೊಂದರೆಗಳೆಲ್ಲಾ ಬಂದಿರುವುದು. ಅದಕಾರಣ ಎಷ್ಟು ಜಾಗ್ರತೆ ಈ ಬೆಲ್ಲದ ಹತೋಟಿ ಆಜ್ಞೆಯನ್ನು ವಾಪಸು ತೆಗೆದುಕೊಂಡರೆ ಅಷ್ಟು ಜನರಿಗೂ ಸರ್ಕಾರಕ್ಕೂ ಒಳ್ಳೆಯದು. ಆದುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕೆಂದು ನಮ್ಮ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ ಈ ನಿರ್ಣಯದ ಸಂಬಂಧವಾಗಿ ಮಾತನಾಡುವುದಾದರೆ, ಯಾವ ವ್ಯಾಪಾರಮಾಡಿದರೂ ಕೂಡ ವ್ಯಾಪಾರಿ ತಾನು ನಷ್ಟಮಾಡಿಕೊಂಡು ವ್ಯಾಪಾರ ಮಾಡುವುದಿಲ್ಲ. ಆದರೆ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ 1943ನೇ ಇಸವಿಯಿಂದಲೂ ಕೊಳ್ಳುವವರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆಹಾರ ಧಾನ್ಯವನ್ನು ಹೆಚ್ಚು ಬೆಲೆಯಲ್ಲಿ ಕೊಂಡು ಕಡಿಮೆ ಬೆಲೆಯಲ್ಲಿ ಮಾರುತ್ತಾ ಇದ್ದಾರೆ. ಸರ್ಕಾರದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದ್ದರೆ ಆ ರೀತಿ ಮಾಡಬಹುದಾಗಿತ್ತು. ಅದು ಬಡವರ ದೃಷ್ಟಿಯಿಂದ ಮಾಡುವುದೂ ಕೂಡ ನ್ಯಾಯವಾಗಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಸಂಸ್ಥಾನವು ಇಷ್ಟು ಭಾರಿ ಹಣವನ್ನು ನಷ್ಟವಾಡಿಕೊಂಡು ಆಹಾರದ ಇಲಾಖೆಯನ್ನು ನಡೆಸುವುದು ನ್ಯಾಯವೇ ಎಂಬ ಪ್ರಶ್ನೆಯನ್ನು ವಿಮರ್ಶೆ ಮಾಡಬೇಕಾದ್ದು ಅತ್ಯಾವಶ್ಯಕವಾಗಿ ಪರಿಣಮಿಸಿದೆ. 1943 ರಿಂದ ಆಹಾರದ ಇಲಾಖೆಯ ಬಗ್ಗೆ ನಮ್ಮ ಸಂಸ್ಥಾನಕ್ಕೆ ಸುಮಾರು 10½ ಕೋಟಿ ರೂಪಾಯಿ ನಷ್ಟವಾಗಿದೆ. ಈ 10½ ಕೋಟಿ ರೂಪಾಯಿಯನ್ನು ಸರಿದೂಗಿಸುವುದಕ್ಕೆ ಸಾಧ್ಯವಿಲ್ಲ ಎಂಬುದು ಎಲ್ಲರ ಅಭಿಮತ. ಕೊಳ್ಳುವ ಬೆರೆಯನ್ನು ಹೆಚ್ಚಿಸಿದರೆ ಪುನ್ನಾನದಲ್ಲಿರುವವರಿಗೆ ತೊಂದರೆಯಾಗುತ್ತದೆ ಎಂಬುದನ್ನು ನಾನು ಸಂಪೂರ್ಣವಾಗಿ ಅರಿತಿದ್ದೇನೆ. ಆದರೆ ಪಟ್ಟಣದವರ ಸಲುವಾಗಿ ಪ್ರತಿವರ್ಷವೂ ಸುಮಾರು 1½ ಕೋಟಿ ರೂಪಾಯಿನ್ನು ನಷ್ಟಮಾಡಿಕೊಳ್ಳಬಹುದೋ ಎಂಬ ಪ್ರಶ್ನೆಯೂ ಕೂಡ

ಅದರ ಜೊತೆಯಲ್ಲಿ ಉದ್ಭವಿಸುತ್ತದೆ. ಇಷ್ಟು ಧಾರಣೆ ವಾಸಿ ಇದ್ದಾಗ್ಯೂ ಕೂಡ ವ್ಯವಸಾಯವು ಒಂದು ಸುಭದ್ರವಾದ ಕಸುಬು ಆಗಿಲ್ಲ. ಇನ್ನಾವ ಕಸುಬು ಮಾಡಲೂ ಸಾಧ್ಯವಿಲ್ಲದವರು ಮಾತ್ರ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಇದ್ದರಿಂದ ವ್ಯವಸಾಯ ಕಷ್ಟಕರವಾಗಿದೆ. ಪಟ್ಟಣದವರಿಗೆ ಯಾವ ರೀತಿ ಇತರ ಸಾಮಗ್ರಿಗಳನ್ನು ಎಂದರೆ ಬಟ್ಟೆ ಮತ್ತು ಆಹಾರ ದವಸಗಳನ್ನು ಹತೋಟಿ ದರದಲ್ಲಿ ಒದಗಿಸುತ್ತಾ ಇದ್ದೀರೆಯೊ ಅದೇ ದರದಲ್ಲಿ ಹಳ್ಳಿಯವರಿಗೆ ಬೇಕಾದ್ದನ್ನು ಒದಗಿಸಲು ಈ ದಿನ ಸಾಧ್ಯವಾಗಿಲ್ಲ. ಕಬ್ಬಿಣ ಮತ್ತಿತರ ವಸ್ತುಗಳನ್ನು ಏನೋ ಹತೋಟಿ ಮಾಡಿದ್ದೀರಿ. ಆದರೆ ಆ ಹತೋಟಿ ದರದಲ್ಲಿ ಹಳ್ಳಿಯವರಿಗೆ ಬೇಕಾದ ಪದಾರ್ಥಗಳು ಸಿಕ್ಕುತ್ತವೆಯೇ ಇಲ್ಲವೇ ಎಂಬುದನ್ನು ಯಾರಾದರೂ ತಿಳಿದರೆ ಅನೇಕರಿಗೆ ಸಿಕ್ಕುತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಅಧ್ಯಕ್ಷರು.—ನೀವು ದರ ಹೆಚ್ಚು ಮಾಡಬೇಕೆಂಬ ವಿಚಾರದಲ್ಲಿ ಹೇಳುತ್ತಾ ಇಲ್ಲ. ಸಬ್‌ಸಿಡಿ ಕೊಡುವುದನ್ನು ತಪ್ಪಿಸಬೇಕೆಂದು ಹೇಳುತ್ತಿದ್ದೀರಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಬ್‌ಸಿಡಿ ತಪ್ಪಿಸಬೇಕಾದರೆ, ಮಾರುವ ಬೆಲೆಯನ್ನು ಹೆಚ್ಚು ಮಾಡಬೇಕಾಗುತ್ತದೆ.

Sri Kadidal MANJAPPA.—What I am saying is that the essential articles which the raiyat needs have not been supplied at the control rates whereas foodgrains are being supplied at the control rates to town dwellers though the Government are incurring loss to the extent of 1½ crores of rupees every year.

ಒಂದುವರೆ ಕೋಟಿ ರೂಪಾಯನ್ನು ಪಟ್ಟಣದವರ ನಿಮಿತ್ತವಾಗಿ ಖರ್ಚುಮಾಡಿ ಅವರ ಭಾರವನ್ನು ಸಂಸ್ಥಾನದ ಎಲ್ಲಾ ಜನರ ಮೇಲೆ ಹೊರಿಸುವುದು ನ್ಯಾಯವಲ್ಲ. ಆದರಲ್ಲೂ ದೇಶದ ಹಣ ಕಾಸಿನ ಪರಿಸ್ಥಿತಿ ಸಮರ್ಪಕವಾಗಿದ್ದರೆ ಆರೀತಿ ಮಾಡಬಹುದಾಗಿತ್ತು.

ಇನ್ನೊಂದು ಅಂಶವೇನೆಂದರೆ, ಹಿಂದೂಸ್ಥಾನದಲ್ಲಿ ಯಾವ ಸಂಸ್ಥಾನದಲ್ಲೂ ಕೂಡ ಹೆಚ್ಚು ದರದಲ್ಲಿ ಆಹಾರ ಧಾನ್ಯವನ್ನು ಕೊಂಡುಕೊಂಡು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿಲ್ಲ. ಈಗಿರತಕ್ಕ ಪರಿಸ್ಥಿತಿಯಲ್ಲಿ ಒಂದು ವೇಳೆ ಸರ್ಕಾರದವರು ಆಹಾರ ದವಸಗಳನ್ನು ಕೊಂಡುಕೊಂಡ ದರದಲ್ಲೇ ಮಾರಾಟ ಮಾಡಿದಾಗ್ಯೂ ಕೂಡ ಬಾಕಿ ಸಂಸ್ಥಾನಗಳಲ್ಲಿರತಕ್ಕ ಧಾರಣೆಗಳಿಗಿಂತ ಇಲ್ಲಿ ಜಾಸ್ತಿಯಾಗುವುದಿಲ್ಲ. ಮದರಾಸಿನಲ್ಲಿ ಸರ್ಕಾರದವರು ಯಾವ ದರದಲ್ಲಿ ಅಕ್ಕಿಯನ್ನು ಅಥವಾ ಇತರ ಆಹಾರದವಸಗಳನ್ನು ಕೊಡುತ್ತಾ ಇದ್ದಾರೆಯೋ ಅದಕ್ಕಿಂತಲೂ ಕಡಿಮೆಯಾಗುತ್ತದೆ. ಆದ್ದರಿಂದ ನಮ್ಮ ಸಂಸ್ಥಾನದಲ್ಲಿ ಹಣ ಕಾಸಿನ ಪರಿಸ್ಥಿತಿ ಇಷ್ಟು ತೀರ ಕೆಟ್ಟು ಹೋಗಿರುವಾಗ ನಷ್ಟವಾಡಿಕೊಂಡು ಆಹಾರ ದವಸಗಳನ್ನು ಸರಬರಾಯಿ ಮಾಡುವ ರೀತಿಯನ್ನು ನಾನು ಒಪ್ಪುವುದಿಲ್ಲ. ಕೊಂಡುಕೊಂಡ ದರದಲ್ಲೇ ಮಾರಾಟ ಮಾಡುವುದನ್ನು ಜಾರಿಗೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

Mr. SPEAKER.—Amendment moved:—

"That this House is of the opinion that the State Government should request the Central Government to withdraw the Cur. Control Order immediately."

"That this House is of the opinion that the policy of subsidising the issue price of foodgrains be discontinued immediately by this Government."

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ನನ್ನ ತಿದ್ದುಪಡಿ ಈ ರೀತಿ ಇದೆ:

"That in the opinion of this House all Controls on the movement of foodgrains within the State should forthwith be abolished without however removing the fixation of maximum prices and the restrictions regarding the hoarding and profiteering of foodgrains."

ಈ ತಿದ್ದುಪಡಿಯನ್ನು ನಾನು ಸೂಚಿಸುವುದಕ್ಕೆ ಇಷ್ಟ ಪಡಲಿಲ್ಲ. ಕಾರಣ ಇಷ್ಟೆ. ಕೇಂದ್ರ ಸರ್ಕಾರದವರಿಗೆ ಈ ಪ್ರಶ್ನೆ ಸಂಬಂಧಪಡುವುದರಿಂದ ನಾವು, ಇಲ್ಲಿ ಈ ತರಹ ಒಂದು ತಿದ್ದುಪಡಿಯನ್ನು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇಷ್ಟು ಹೇಳಿ ನಾನು ಇದನ್ನು ಸೂಚಿಸುವುದಿಲ್ಲ.

ಅಧ್ಯಕ್ಷರು.—ಸದಸ್ಯರು ಮಾತನಾಡುವುದಕ್ಕೆ ಒಂದು ಕಾರಾವಧಿ ಇಲ್ಲದಿದ್ದರೆ ಬಹಳ ಜನ ಮಾತನಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಇರತಕ್ಕ ಕಾಲದಲ್ಲಿ ಒಬ್ಬೊಬ್ಬರು 10 ನಿಮಿಷ ತೆಗೆದುಕೊಳ್ಳಬಹುದು.

The Hon'ble Sri K. CHENGALA. RAYA REDDY.—Government will require about half an hour. The balance of the time may be distributed.

***Mushir-ul-Mulk J. MOHAMED IMAM** (Chitaldrug *cum* Tumkur—Muslim).—Sir, I am very glad that some Hon'ble Members have brought before this House very useful and timely amendments and I must congratulate them. I heartily support those amendments which deal with the abolition of controls and rationing.

Mr. SPEAKER.—Sri G. Veerappa has not moved his amendment.

Janab J. MOHAMED IMAM.—I heartily support the abolition of controls and rationing immediately. This House has been dealing with the food situation for a long time. On every occasion there is a debate on the food situation. On every occasion the Minister for Food demanded our co-operation during the whole year and the Members have heartily co-operated in the food production drive, in the distribution of rations and in several measures brought by Government.

* Indicates that speeches have not been revised by members concerned.

(JANAB J. MOHAMED IMAM.)

But what is the result today? As time proceeds, as years roll by, we are in a hopeless position. It is in a mess. The Hon'ble Minister is asking us to sacrifice. It is quite clear, the position is very critical and very precarious. It has been pointed out that the Centre is prepared to give only 75 thousand tons whereas we require about 140 thousand tons. There is also the other report that the ration will be reduced. This is bound to result in partial starvation among the people. My friend Sri T. Subramanya was advocating 'miss a meal a day.'

The Hon'ble Sri K. CHENGALARAYA REDDY.—A 'miss a meal a day!' (laughter).

Janab J. MOHAMED IMAM.—Miss one meal a day. I think the Home Minister is aiming at the same thing.

Hon'ble Sri H. C. DASAPPA.—Miss a meal a week.

Janab J. MOHAMED IMAM.—Anyway, this is an unfortunate position. Why is this unfortunate position created? Of course, it has been said that Government are trying their best and adopting a vigorous policy to make the State self-sufficient in food. Secondly, the State has no hand either to import foodgrains or to control the movement of foodgrains or to take any step that is necessary in the interest of the State. The whole thing is in the hands of the Centre. Thirdly, the Centre has taken the responsibility to provide foodgrains to various States after importing from abroad. I think I may or may not be correct if I say that before, the States had autonomy and they themselves were importing foodgrains directly from countries outside.

The Hon'ble Sri T. MARIAPPA.—It is not so. Always the States depended upon the Centre for foreign imports of foodgrains, even prior to integration.

Janab J. MOHAMED IMAM.—I do not know correctly. Anyhow, I stand corrected. Now the distribution, rationing, the control measures, everything is in the hands of the Centre and they may consult the local situation or they may not. Fourthly, there are these control measures and on account of these factors, the State will have to suffer. There is deficiency not only in millets and wheat but also in rice. Now, within the limited time I have before me I am not going into the details of the food production. Of course, Government are spending a lot of money. They have got a 3-year programme to reach self-sufficiency and are adopting various measures. In the three-year programme, already two years have passed but I am sorry to say that the food production policy adopted by Government has not materialised. It was stated year by year that by 1951 the whole country would reach a stage of self-sufficiency by the measures adopted by the States to grow more food. Crores of rupees have been spent but the situation has least improved. My only conclusion is, all the efforts and money spent on food production, I would not say wasted, has not materialised in any way. Of course the Minister tried his best; he got a number of tractors, he got a number of bulldozers, and he even tried to grow ragi in the compound of the Residency. But not a pound of extra grain has been grown. (Interruption.) In spite of every effort, we have not solved this problem to any appreciable extent. I think the situation has become worse and worse. We see a huge deficit; there is no rice, there is no millet, the rations are going to be reduced. So, Sir, in my opinion, this policy of food production will not result in any appreciable way. The whole thing requires to be reorientated. Only suffice it for me to say that the present policy adopted by the Government to grow more food is not practicable; it is more idealistic than practical. I am an agriculturist and I know the conditions before the war and now. Sir, prior to 1939 the seasonal conditions were the same. We were growing practically the same quantity of millets as we are growing now. We were growing the same quantity of rice. Perhaps the population has been increased by ten per cent. Of course, there would be good rainfall sometimes and sometimes there would be poor rainfall. But, how is it the whole normal structure is changed?

The Hon'ble Sri T. MARIAPPA.—You were getting rice from Burma and particularly surplus areas have gone away to Pakistan.

Janab J. MOHAMED IMAM.—I am speaking of Mysore. So far as paddy was concerned I agree, but our State was a surplus area in ragi. We were even exporting ragi. Now, how is it we have to import thousands of tons of millets whereas in the normal conditions we were exporting it. The whole difficulty has been caused by too much of interference by the Government. It is all due to control.

The Hon'ble Sri T. MARIAPPA.—But you were the author of that. It was introduced in 1943 August and then from 1944 January.

Janab J. MOHAMED IMAM.—If I am the author of the present scheme I own my mistake.

But give me power to remove controls. (Laughter).

The Hon'ble Sri T. MARIAPPA.—During 1946, when Sri Siddappa had something to do with the Government, they had imported 240 lakhs of tons.

Sri L. SIDDAPPA (Shimoga District—General).—In 1949 when you were in power these controls were very necessary, but after gaining some experience, we find that these controls would lead us nowhere.

Janab J. MOHAMED IMAM.—When the Government adopted these control measures, they had a big responsibility. Now we have controls on every commodity; we have got controls on food, cloth and on every possible commodity that is needed by us. What does control mean? 'Control' means that the Government have taken the entire responsibility of feeding and clothing and providing all the necessary amenities of the people. The whole responsibility of maintaining the mankind lies on the Government. If the Government have failed to give the necessary quantity of food, cloth, iron and so on, it must be concluded that they have failed in their control policy and there is every justification for the removal of the controls. I think the Government have realised the futility or the draw backs and disadvantages of continuing the controls, as can be seen at the Bombay Conference which was attended by all the Ministers. There the majority were of the opinion that control and procurement should be removed from deficit areas, whereas they might be retained in some sections.....

The Hon'ble Sri T. MARIAPPA.—It was not so.

Janab J. MOHAMED IMAM.—I read paper reports that the majority was of that opinion. Let them make a beginning.

The Hon'ble Sri T. MARIAPPA.—The resolution that was passed at Bombay was to follow the policy of giving power to the States to make slight adjustment in particular areas after obtaining the concurrence of the Central Government.

Janab J. MOHAMED IMAM.—Anyhow, they have commenced the relaxation of the control measures. But when a person is responsible for a certain policy, he does not want to admit its futility. They have made a beginning and I hope they will pursue it futher and try it. So far as I am concerned, I am optimistic. I say that as soon as all the controls are removed, many of these difficulties, all this waste of money, all this propaganda, all the mischief caused by controls will disappear; the country will adjust itself, the society will adjust itself. Previously we were short of rice. What were we doing? We were importing from Bezwada, Kaveri, Trichinopoly and Krishna and we were importing rice from Rangoon, Siam and China. Who were doing this? Merchants; not one; hundreds and thousands of merchants. Supposing we decontrol paddy procurement. Instead of Government undertaking the importation of paddy, there will be thousands of merchants who will go abroad and they know how to procure paddy; they know at what rate they will have to import rice in hundreds and thousands of tons and the prices will not be high. There will be a healthy competition amongst them.

The Hon'ble Sri T. MARIAPPA.—My friend forgets that conditions in Burma

(THE HON'BLE SRI T. MARIAPPA-)

are entirely different. Even there the Burma Government are in sole charge of allotting foodgrains to other countries.

Janab J. MOHAMED IMAM.- I think Burma is in a position to export rice.

ಯಾವ ಕೆಲಸವನ್ನು ಯಾವನಿಗೆ ಕೊಡಬೇಕೋ, ಆ ಕೆಲಸವನ್ನು ಅವನಿಗೇ ಕೊಡಬೇಕು. ಬಡಗಿಗೇ ಮನೆ ಕಟ್ಟುವ ಕೆಲಸ ಕೊಟ್ಟಂತಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮನೆ ಯನ್ನು ಕಟ್ಟಲು ಬಡಗಿಗೆ ಕೊಡದೆ ಮತ್ತೆ ಯಾರಿಗೆ ಕೊಡಬೇಕು?

ಜನಾಬ್ ಜೆ. ವ ಹಮದ್ ಇಮಾಂರವರು.—ಬಡಗಿ ಕೆಲಸ ಉಕ್ಕಸಾಲಿಗನಿಗೂ, ಉಕ್ಕಸಾಲಿಗನ ಕೆಲಸ ಬಡಗಿಗೂ ಕೊಟ್ಟಹಾಗಾಗಿದೆ. ಅಂದರೆ ವರ್ತಕತನ ಯಾರಿಗೆ ಸರಿಹೋಗುತ್ತದೋ ಅಂಥ ವರ್ತಕರಿಗೇ ಆ ಕೆಲಸವಿರಬೇಕು, ರಾಜ್ಯಭಾರಮಾಡುವ ಚೈತನ್ಯ ಯಾರಿಗಿರುತ್ತದೋ ಅವರೇ ಆಡಳಿತ ನಿರ್ವಹಿಸಬೇಕು.

If the Government want to become the merchant, the purchaser, the grower and everything else, that makes so much confusion. There is another harmful effect, that is, inflation of prices. The price of everything is going up year to year. The price to-day of every commodity is much more than before. What is it due to? It is due to controls and nothing else. These controls are the source of all evils; they are the cause of the eating away of all our reserves. With these words, I oppose the control measures.

*ಶ್ರೀ ಎಚ್. ಎಂ ಚನ್ನಬಸಪ್ಪನವರು (ಮೈಸೂರು ಜಿಲ್ಲೆ).— ಸ್ವಾಮಿ, ಈ 'ಹತೋಟಿ ಆಜ್ಞೆಗಳು' ಆಜ್ಞೆಗಳಲ್ಲ, ಇವೆಲ್ಲ ಬಹಳ ಆತ್ಮಘಾತುಕವಾದವುಗಳು. ಈ ವಿಷಯವನ್ನು ನಾನು ಇಂದೇನೂ ಹೊಸದಾಗಿ ಹೇಳುತ್ತಿಲ್ಲ, ಪ್ರಾರಂಭದಿಂದಲೂ ಇದನ್ನೇ ಹೇಳುತ್ತಾ ಬಂದಿದ್ದೇನೆ. ಇದು ಆತ್ಮಘಾತುಕವಾದ ನೀತಿ ಎಂಬುದು ನನ್ನ ಒಬ್ಬನ ಅಭಿಪ್ರಾಯವೇನಲ್ಲ, ಇಡೀ ದೇಶದ ಅಭಿಪ್ರಾಯವೇ ಹಾಗಿರುತ್ತೆ. ಆದರೆ ಈ ಅಂಶ ಸರ್ಕಾರದವರ ಗಮನಕ್ಕೆ ಇದುವರೆಗೂ ಬಂದಿರಲಿಲ್ಲ ವೆಂದೂ ಈಗ ತಾನೆ ಇವರ ದೃಷ್ಟಿಗೆ ಬಂದಿದೆಯೆಂದೂ ಗೋಚರವಾಗುತ್ತಿದೆ. ಅಲ್ಲಿಗೂ ಕೂಡ ಇದೊಂದು ಶುಭ ಸೂಚನೆಯೆ. ಮಾನ್ಯ ಸದಸ್ಯರೆಲ್ಲ ದಯವಿಟ್ಟು ಕ್ಷಮಿಸಬೇಕು, ಈ ಆಹಾರದ ಸಮಸ್ಯೆ, ಅಷ್ಟು ಹಗುರ ವಾದ ವಿಚಾರವಲ್ಲ. ಇದು ಬಹಳ ಮಹತ್ವವಾದಂಥ ಸಮಸ್ಯೆ. ದೇಶದ ನಾನಾ ಮೂಲೆ ಮೂಲೆಗಳಲ್ಲಿರ ತಕ್ಕ ಸಹಸ್ರಾರು ಜನರಿಗೆ ಆಬಾಲವೃದ್ಧ ರಾದಿಯಾಗಿ, ಹೆಂಗಸರು, ಮಕ್ಕಳು, ಹೀಗೆ ಕೊಂದರಗೀಡಾಗಿದ್ದಾರೆಂಬುದನ್ನೆಲ್ಲಾ ತಿಳಿಸತಕ್ಕ ಬಗ್ಗೆ ನಾನು ನನಗೆ ಕೂಟ್ಟಿರತಕ್ಕ ಕಾಲಾವಧಿಗಿಂತ ಅಲ್ಪ ಸ್ವಲ್ಪ ಕಾಲ ವನ್ನು ಹೆಚ್ಚಾಗಿ ತೆಗೆದುಕೊಂಡರೆ, ಆ ಬಗ್ಗೆ ನನ್ನನ್ನು ಅಧ್ಯಕ್ಷರು ಕ್ಷಮಿಸಬೇಕೆಂದೂ, ಮಾನ್ಯ ಸದಸ್ಯರು ಅದಕ್ಕೆ ನನ್ನನ್ನು ಮನ್ನಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಈ ಆಹಾರ ನಿಯಂತ್ರಣಾಜ್ಞೆಗಳೆಲ್ಲವೂ 1943 ನೆ ಇಸವಿಯ ಆದಿಭಾಗದಲ್ಲಿ ಬಂದವು. ಯುದ್ಧದ ಸಂಬಂಧ ದಲ್ಲಿ ಉಂಟಾದ ಅನಿವಾರ್ಯಗಳ ದೆಶೆಯಿಂದ ಆಹಾರ ಸಾಮಗ್ರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ನಿರಾತಂಕವಾಗಿ ಸಾಗಲು ತೊಂದರೆಗಳಿದ್ದುದ ರಿಂದ ಹಂಗಾಮಿಯಾಗಿ ಕೇವಲ ಕೆಲವು ಕಾಲ ಗಳವರೆಗೆ ಮಾತ್ರ ಈ ಆಜ್ಞೆಗಳನ್ನು ಸರ್ಕಾರದವರು ಜಾರಿಗೆ ತಂದಿದ್ದರೆಂದು ಜನರು ಭಾವಿಸಿದ್ದರು. ಆಗ್ಯೆ ಆ ನೀತಿಯು ಕೂಡ ಬಹಳ ಅವಶ್ಯವೆಂದೇ ಭಾಸವ ರಾಗಿತ್ತು. ಕಾರಣ ದೇಶದ್ರೋಹತಕ್ಕ ಬಡಬಗ್ಗರು ಅನ್ನವಿಲ್ಲದೆ ಸತ್ತು ಹೋಗುತ್ತಾರೆಂಬ ಒಂದು ದೃಷ್ಟಿ ಯಿಂದಲೂ, ಮತ್ತು ಆಗಿದ್ದ ಸರ್ಕಾರ ಜನರಿಗೆ ಜವಾ ಬ್ದಾರರಾಗಿಲ್ಲದೆ, ಬೇಜವಾಬ್ದಾರಿಯಾದ ಸರ್ಕಾರ ವಾಗಿದ್ದುದರ ದೆಶೆಯಿಂದಲೂ, ಹಾಗೆಲ್ಲ ಮಾಡಲಾ ಯಿತು. ಆದರೆ ಇಂದಿರುವ ಸರ್ಕಾರ ಜವಾಬ್ದಾರಿ ಯುತವಾಗಿದ್ದಾಗ್ಯೂ ದೇಶಕ್ಕೆ . . . . .

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ವಿಚಾರಗಳೆಲ್ಲಾ ಈಗೇಕೆ ಬೇಕು?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I put this one question to those in power. ಈಗ ಹೊಸದಾಗಿ ರಾಜ್ಯಾಂಗ ಜಾರಿಗೆ ಬಂದ ಮೇರೆ, ಅಂದರೆ ಈಗ ಕಾನೂನು ಹಾಲೀ ಜಾರಿಯಿಲ್ಲರುವ ಪ್ರಕಾರ, ಆದಕ್ಕನುಸಾರವಾಗಿ ನಿಮ್ಮ ಆಡಳಿತ ನಡೆಯು ತ್ತಿದೆಯೇ ಎಂಬುದನ್ನು ತಾವು ಆಲೋಚನೆ ಮಾಡಿ ನೋಡಿ. ಆದರೆ ನಾನೇನೂ ವಕೀಲನಲ್ಲ. ತಾವಾ ದರೋ ಎಲ್ಲರೂ ವಕೀಲರಿದ್ದೀರಿ, ಆಲೋಚನೆ ಮಾಡಿ.

"Equality of status and opportunity" ಅಂದರೆ,

ಹೊಸ ರಾಜ್ಯಾಂಗದ ಪ್ರಕಾರ ಎಲ್ಲರಿಗೂ ಎಲ್ಲಾ ಜಾಗದಲ್ಲೂ ಸರಿಯಾದ ದರ್ಜೆ ಮತ್ತು ಸದವಕಾಶ ಒಂದೇ ಸಮನಾಗಿ ಇರಬೇಕಾದ್ದು ಅತ್ಯಗತ್ಯ. ರಾಜ್ಯಾಂಗದ 14ನೆಯ ಆರ್ಟಿಕರ್‌ನಲ್ಲಿ ಈ ರೀತಿ ಹೇಳಿದೆ:—

"The State shall not deny to any person equality before the law or the equal protection of the laws within the territory of India."

ಇದರ ಪ್ರಕಾರ ಈಗ ಹತೋಟಿಯನ್ನು ಮುಂದುವರಿಸು ವುದರಿಂದ ದೇಶದಲ್ಲಿ ಅನ್ನವಿಲ್ಲದಿರುವ ಪ್ರತಿಯೊಬ್ಬ ಮನುಷ್ಯನಿಗೂ ಅನ್ನವನ್ನೊದಗಿಸಬೇಕು. ಹಾಗೆ ಅನ್ನ ಕೊಡುವುದರಲ್ಲಿ ಮನುಷ್ಯ ಮನುಷ್ಯನಿಗೆ ವ್ಯತ್ಯಾಸ ಮಾಡಿದರೆ ಈ ಕಾನೂನು ದೇಶದಲ್ಲಿರಕೂಡದು. ಕಾನೂನು ಪ್ರಕಾರವಾಗಿ ಜನಸಾಮಾನ್ಯರಲ್ಲಿ ಅನ್ನ ವಿಲ್ಲದಿರುವವರಿಗೆ ಎಷ್ಟು ಆಹಾರ ಕೊಡುತ್ತೀರೋ ಅಷ್ಟನ್ನು ಎಲ್ಲರಿಗೂ ದೇಶದಲ್ಲೆಲ್ಲಾ ಒಂದೇ ಸಮವಾಗಿ ಕೊಡತಕ್ಕುದು. ನ್ಯಾಯವಾದುದು. ಇದಕ್ಕೆ ಧಕ್ಕೆ ತರುವ ಯಾವ ಶಾಸನವೇ ಆಗಲಿ ಈ ದೇಶದಲ್ಲಿರಕೂಡದೆಂದು ಹೇಳುವುದಕ್ಕೆ ಈ ರಾಜ್ಯಾಂಗದ ಪ್ರಕಾರ ಅಧಿಕಾರವಿದೆ. ಈಗಿರುವ ಕಾನೂನು ಪ್ರಕಾರ ಜಮೀನಿಲ್ಲದಿರುವವರಿಗೆ ವಿನಾ, ಅನ್ನವಿಲ್ಲದಿರುವವರಿಗೆ ಅವರು ಪಟ್ಟಣಗರಾಗಿದ್ದರೆ ಅನ್ನವನ್ನು ಕೊಡುತ್ತಿದ್ದೇವೆ. ಅದೇ ಜಮೀನಿಲ್ಲದೆ ಹಳ್ಳಿಗಳಲ್ಲಿ ವಾಸ ಮಾಡಿ ಕೊಂಡು ಅನ್ನವಿಲ್ಲದೇ ಇರುವವರಿಗೆ ಆಹಾರವನ್ನು ಕೊಡುತ್ತಿಲ್ಲ. ಇದು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಮಾನ್ಯ ಗೃಹಮಂತ್ರಿಗಳು ಹೌದಿಲ್ಲವೆಂದು ಹೇಳುವ ಶಕ್ತಿಯಿದ್ದರೆ ಎಷ್ಟು ನಿಂತು ಹೇಳಲಿ. ಮನುಷ್ಯ ಮನುಷ್ಯನಿಗೆ ಅವಕಾಶವನ್ನು ಭಿನ್ನ ಮಾಡತಕ್ಕದ್ದು, ಅವರಿಗಿರುವ ಒಂದು ಹಕ್ಕನ್ನು ಕಡಮೆ ಮಾಡತಕ್ಕದ್ದು ಪ್ರಕೃತಕಾಲಕ್ಕೆ ಹೊಸ ರಾಜ್ಯಾಂಗದ ಪ್ರಕಾರ ಸಾಧು

ವಲ್ಲ. ಈಗ ಮಾತಿನಲ್ಲಿನ ರಾಜ್ಯಾಂಗದ ದೃಷ್ಟಿಯಿಂದ ಸರಿಯಾದ ನೀತಿಯನ್ನನುಸರಿಸಿಲ್ಲವೆಂದು ಹೇಳಿ ಆ ದೃಷ್ಟಿಯಿಂದ ಏಮರ್ಶೆ ಮಾಡುವುದು ಆವಶ್ಯಕ.

ಈ ಕಾನೂನು ಬಂದ ಮೇಲೆ ಸರ್ಕಾರ ಯಾವತ್ತೂ ವ್ಯವಸಾಯದ ಕಡೆ ಹೆಚ್ಚು ಗಮನಕೊಡುವುದಕ್ಕೆ ಬದಲಾಗಿ ರೇವಾಪೇಪಿ ಮಾಡುವ ನೀತಿಯನ್ನನುಸರಿಸುವುದು ಸರಿಯಿಲ್ಲ. ಈಗ ವರ್ತಕರು ಮಾಡುವಂತೆ ಶೇಖರಣೆ ಮತ್ತು ಹಂಚಿಕೆ ಕೆಲಸವನ್ನು ಸರ್ಕಾರ ದವರು ಕೈಕೊಂಡು ನಿರ್ವಹಣೆ ಮಾಡುತ್ತಿರುವುದರಿಂದ ಸರ್ಕಾರದ ಮೇಲೆ ನಾನಾ ವಿಧವಾದ ಆರೋಪಣೆಗಳು ಬರುತ್ತಿವೆ. ಕೆಲವರು ಸರ್ಕಾರದ ನೀತಿಯನ್ನು ಅನುಮೋದಿಸುತ್ತಲೂ ಮತ್ತೆ ಕೆಲವರು ವಿರೋಧಿಸುತ್ತಲೂ ಇದ್ದಾರೆ. ಇನ್ನೊಂದು ಕಡೆ ರಾಜಕೀಯ ಪಕ್ಷಗಳು ಇನ್ನೂ ಹೆಚ್ಚಿನ ಹೆಚ್ಚಳಕ್ಕೇಕೆಂದು ಒತ್ತಾಯ ಮಾಡುತ್ತಿದ್ದಾರೆ. ರಾಜಕೀಯವಾಗಿ ರಾಜಕೀಯ ಸಂಪಾದನೆ ಮಾಡುವವರು ನಮ್ಮನ್ನು ಶೋಷಣೆ ಮಾಡುವುದಕ್ಕೆ ಶುರು ಮಾಡಿದ್ದಾರೆ. ಈಗ ಆಹಾರವಿಲ್ಲದಿರುವವರ ಕೂಗು ಸರ್ಕಾರಕ್ಕೆ ಮುಟ್ಟುವುದಕ್ಕೆ ಮಿಗಿಲಾಗಿ ಆಹಾರವಿರುವವರ ಮತ್ತು ಪ್ರಭಾವಶಾಲಿಗಳ ಕೂಗು ಮೊದಲು ಕೇಳಿ ಬರುತ್ತಿದೆ. ಇದುವರೆಗು ಸಾಲದೆಂದು ತಮ್ಮ ಪ್ರಭಾವವನ್ನು ಅನೇಕವಾಗಿ ಬೀರುತ್ತಿದ್ದಾರೆ. ಆಹಾರವೆನ್ನುವುದು ಪ್ರತಿಯೊಬ್ಬ ಮನುಷ್ಯನಿಗೂ ಬೇಕಾದ ವಸ್ತುವಾಗಿರುವುದರಿಂದ ಹೇಗಾದರೂ ಮಾಡಿ ತನ್ನ ಜೀವಕ್ಕೆ ಬೇಕಾದಷ್ಟನ್ನು ಒದಗಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸುತ್ತಿದ್ದಾರೆ. ಎಷ್ಟೇ ಖರ್ಚಾದರೂ, ಯಾವುದೇ ಒಂದು ಕಾನೂನಿಗೆ ವಿರೋಧವಾದರೂ ಗಮನಿಸದೆ ಪ್ರತಿಯೊಬ್ಬ ವ್ಯಕ್ತಿಯೂ ಎಲ್ಲಾ ರೀತಿಯಲ್ಲಿಯೂ ಸಂಪಾದನೆ ಮಾಡಲು ಪ್ರಾರಂಭ ಮಾಡಿದ್ದಾನೆ. ಹೀಗಿರುವಾಗ ಸರ್ಕಾರದವರು ಮಾಡಿರುವ ಕಾನೂನು ಪ್ರಕಾರ ಎಷ್ಟುಮಟ್ಟಿಗೆ ನಡೆಯಬೇಕೋ ಅಷ್ಟುಮಟ್ಟಿಗೆ ಪ್ರಭಾವಶಾಲಿಗಳು ನಡೆಯುತ್ತಿದ್ದಾರೆಯೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಇದುವರೆಗೆ ಸರ್ಕಾರದವರು ಅನುಸರಿಸಿರುವ ಕಾರ್ಯನೀತಿಯಿಂದ ಯಾವ ಉದ್ದೇಶ ಸಾಧನೆ ಮಾಡಬೇಕೆಂದು ಇದ್ದರೋ ಆ ಉದ್ದೇಶವು ಎಷ್ಟಮ್ಟು ಸಾಧನೆಯಾಗಿಲ್ಲ ಎಂದು ಅವರು ಕೊಟ್ಟಿರುವ ಅಂಕಿ ಅಂಶಗಳಿಂದಲೇ ಪುಷ್ಟೀಕರಿಸುವುದಕ್ಕೆ ಸಿದ್ಧವಾಗಿದ್ದೇನೆ. ಹೆಚ್ಚುಕಾಲ ತೆಗೆದುಕೊಳ್ಳದೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಅದನ್ನು ಸ್ವಲ್ಪ ಯೋಚನೆ ಮಾಡೋಣವಾಗಲಿ. 1943—44ರಲ್ಲಿ ಸಂಸ್ಥಾನಾಮಳೆ ಎಷ್ಟು ಹಿಡುವಳಿ ಜಮೀನಿತ್ತು, ಈಗ ಎಷ್ಟು ಇದೆ ಎಂದು ನೋಡಿದರೆ ಈಗ 5 ಲಕ್ಷ ಎಕರೆ ಹಿಡುವಳಿಯಲ್ಲಿದೆ. ಈಗ ಬಂಜರು ಜಮೀನು ಹೆಚ್ಚು 6 ಲಕ್ಷ ಚಿಲ್ಲರೆ ಎಕರೆಗಳಷ್ಟಾಗಿವೆ. ಇದನ್ನು ನೋಡಿದರೆ ಜಮೀನನ್ನು ಹೆಚ್ಚಾಗಿ ಪಡೆಯಿಕೊಳ್ಳಬೇಕೆಂಬ ಒಂದು ಆಶೆ ಇದೆಯೇ ಹೊರತು ವ್ಯವಸಾಯದ ಮೇಲೆ ಆಸಕ್ತಿಯಿಲ್ಲ ಎಂದು ಕಂಡು ಬರುತ್ತದೆ.

ಎರಡನೆಯದು ದೇಶದಲ್ಲಿ ಬತ್ತ, ರಾಗಿ, ಜೋಳ ಮುಂತಾದ ಆಹಾರ ಪದಾರ್ಥಗಳ ಉತ್ಪತ್ತಿಯು 1943—44 ರಿಂದ ಇದುವರೆಗೆ 8,39,344 ಎಕರೆ ಗಳಷ್ಟು ಕಡಮೆಯಾಗಿವೆ. ಬತ್ತ, 1,05,701 ಎಕರೆ, ರಾಗಿ 5 ಲಕ್ಷ ಚಿಲ್ಲರೆ ಎಕರೆ, ಜೋಳ ಒಂದು ಲಕ್ಷ 70 ಸಾವಿರ ಎಕರೆ ಬೆಳೆವಣಿಗೆ ಕಡಿಮೆಯಾಗಿದೆ. ಆರು ವರ್ಷಗಳಲ್ಲಿ ಇಷ್ಟು ಕಡಮೆಯಾಗಿವೆ. ಇದರ ಜೊತೆಗೆ ನಮ್ಮ ಖರ್ಚು ಕಡಮೆಯಾಗಿದೆಯು ಈ ಎಂಟು ವರ್ಷಗಳಲ್ಲಿ ಆಹಾರವನ್ನು ಉತ್ಪತ್ತಿ ಮಾಡಿ ಸಮರ್ಪಕವಾಗಿ ಆಹಾರವನ್ನೊದಗಿಸಲು ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂಬುದನ್ನು ಗಮನಿಸೋಣ. ನೀರಾವರಿ ಕೆಲಸಗಳನ್ನು ಹೆಚ್ಚು ಮಾಡಿ ನೀರನ್ನೊದಗಿಸಿ ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡುವುದಕ್ಕಾಗಿ 1943—44 ರಿಂದ 1949—50ರವರೆಗೆ 350·09 ಲಕ್ಷ ರೂಪಾಯಿಗಳು ಖರ್ಚಾಗಿವೆ. ಆಹಾರವನ್ನು ಹೆಚ್ಚಾಗಿ ಬೆಳೆಯುವ ಯೋಜನೆಗಾಗಿ ಮತ್ತು ಸಬ್ಸಿಡಿಗಾಗಿ 1039·18 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಒಟ್ಟು 13 ಕೋಟಿ 89 ಲಕ್ಷ 27 ಸಾವಿರ ರೂಪಾಯಿಗಳನ್ನು ಇದುವರೆಗೆ ಬಲಹಾಕಿದ್ದೇವೆ. ನನಗೆ ಕಾಲಾವಕಾಶ ವಿದ್ದರೆ ಇವೆಲ್ಲವೂ ಬಹಳ ಅನಾವಶ್ಯಕವೆಂದು ನೂರಿಸಿಯಾವ ವಿಧವಾಗಿ ಖರ್ಚಾಗಿದ್ದೆಯೆಂಬ ತೀರ್ಮಾನಿಸುತ್ತಿದ್ದೆ. ಇದರ ಪರಿಣಾಮವಾಗಿ 4 ಲಕ್ಷ 11 ಸಾವಿರ ಪಲ್ಲ ಇನ್ನೂ ಕಡಮೆಯಾಗಿದೆ. ಒಂದು ಕಡೆ ಹಣ ಯಥೇಚ್ಛವಾಗಿ ಖರ್ಚಾಗುತ್ತಿದೆ. ಆದರೆ ಪರಿಸ್ಥಿತಿಯೇನಾದರೂ ಉತ್ತಮವಾಗಿದೆಯೇ ಒಂದು ನೋಡಿದರೆ ಆಹಾರ ದವಸವನ್ನು ಬೆಳೆಯುವ ಜಮೀನು 6 ಲಕ್ಷ ಎಕರೆ ಕಡಮೆಯಾಗಿವೆ. ಆಹಾರದ ಉತ್ಪನ್ನ ಆವಶ್ಯಕತೆ ಎಷ್ಟಿತ್ತೋ ಈ ದಿವಸವೂ ಅಷ್ಟೇ ಇದೆ; 14 ಲಕ್ಷ 13 ಸಾವಿರ ಪಲ್ಲ ಮಾತ್ರ ಇದೆ. ಹಿಂದೆ ಸರ್ಕಾರದವರು ಎಷ್ಟು ಶೇಖರಿಸುತ್ತಿದ್ದರೋ ಇಲ್ಲಿಯವರೆಗೆ ಸ್ವಲ್ಪ ಹೆಚ್ಚು ಕಡಮೆ ಅಷ್ಟೇ ಇದೆ. ಅತ್ಯಲ್ಪವಾದ ಶೇಖರಣೆ ಮಾತ್ರ ಆಗುತ್ತಿದೆ. ಒಟ್ಟು ಅಕ್ಕಿ, ರಾಗಿ, ಬತ್ತ, ಜೋಳ ಎಲ್ಲಾ ಸೇರಿ 17 ಲಕ್ಷ 17 ಸಾವಿರ ಪಲ್ಲವರೆಗೆ ಶೇಖರಣೆಯಾಗುತ್ತಿದ್ದು ಈ ದಿವಸ 12 ಲಕ್ಷ ಮಾತ್ರ ಆಗಿದೆ ಹೋದ ವರ್ಷ 11 ಲಕ್ಷ ಚಿಲ್ಲರೆ ಶೇಖರಣೆಯಾಗಿತ್ತು. ಅಂದರೆ 1943ನೆಯ ಇಸವಿಯಲ್ಲಿ ವಸೂಲಾಗಿದ್ದ ಧಾನ್ಯದಲ್ಲಿ ಮುಕ್ಕಾಲು ಭಾಗ ಕೂಡ ಆಗುತ್ತಿಲ್ಲ.

ಶ್ರೀ ಎಸ್. ರಂಗರಾವ ಯ್ಯನವರು (ಮೈಸೂರು ಜಿಲ್ಲೆ).—ತಾವೇ 300 ಎಕರೆ ಪಾಳು ಬಿಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—We are transacting serious business involving an expenditure of crores of rupees and the lives of millions of people. Therefore seriousness during the debate is necessary.

It has given a big shake up, a terrible shake up.

ಈ ಹತ್ತೋಟಿ ಆಜ್ಞೆಗಳು ನಿಯೋ ತಪ್ಪೋ ಅಂತೂ ಜಾರಿಗೆ ಬಂದಿವೆ. ಇವನ್ನು ಎಲ್ಲಿಯವರೆಗೆ ಇಟ್ಟುಕೊಂಡು ಹೋಗುವುದು? ಈ ಆಜ್ಞೆಗಳನ್ನು ನಾವು ಜಾರಿಯಲ್ಲಿಟ್ಟುಕೊಂಡಿರುವಾಗ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವೆ ಎಂದು ಯೋಚಿಸಬೇಕು. ಸ್ವಾಮಿ, ನಾನು ಬಹಳ ವಿಷಾದದಿಂದ ಹೇಳುತ್ತೇನೆ, ಎಲ್ಲಿಯವರೆಗೆ ಈ ಆಜ್ಞೆಗಳು ಜಾರಿಯಲ್ಲಿರುತ್ತವೆಯೋ ಅಲ್ಲಿಯವರೆಗೆ ದೇಶದ ರಾಜ್ಯಾಡಳಿತ ಸರಿಯಾಗಿ ನಡೆಯುವುದಿಲ್ಲ, ರೀತಿ ನೀತಿಗಳೆಲ್ಲವೂ ಭ್ರಷ್ಟವಾಗಿ ಹೋಗಿವೆ, ರಾಜ್ಯಾಡಳಿತದ ತಳಹದಿಯೇ ಇವುಗಳಿಂದ ಅಳ್ಳಾಡಿಹೋಗಿದೆ, ನೀತಿಯು ಪತನವಾಗಿದೆ. ಇದ ಜನರಲ್ಲಿ ಮಾತ್ರವಲ್ಲ. ಸರ್ಕಾರದವರಲ್ಲಿ, ರಾಜ್ಯಾಡಳಿತವಲ್ಲಿ ಆಹಾರ ಸಂಬಂಧವಾಗಿ ಯಾರು ಯಾರು ಕೆಲಸಮಾಡುತ್ತಿದ್ದಾರೋ ಅವರಲ್ಲಿ ನೀತಿ ಬಹಳ ಕೆಳಮಟ್ಟಕ್ಕೆ ಕೊಳಗಿತ ಎಂಬುದನ್ನು ತಾವೂ ಒಪ್ಪಿಕೊಳ್ಳದೆ ವಿಧಿಯಿಲ್ಲ.

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

It is a question of fact. No Government can dare say it is not so.

(Question, Question, from Treasury Benches)

Sri H. M. CHANNABASAPPA.— Excuse me Sir. We are on the liquidation of morals.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲರಲ್ಲಿಯೂ ಹೀಗಿದೆಯೆಂದು sweeping ಆಗಿ ಹೇಳಿದರೆ ಅದನ್ನು ಯಾರೂ ಒಪ್ಪುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಯಾರ್ಯಾರು ಅಧಿಕಾರಿಗಳನ್ನು ಈ ಕೆಲಸಕ್ಕೆ ನೇಮಿಸಿದ್ದೀರೋ ಅವರು. ಜೇನು ತುಪ್ಪವನ್ನು ತೆಗೆಯುವಾಗ ತಾನು ಜೇನನ್ನು ಮುಟ್ಟಬೆಬುವುದಿಲ್ಲವೆಂದು ಹೇಳುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— Unqualified ಆಗಿ exceptions ಇಲ್ಲದೆ ಆಹಾರ ಇಲಾಖೆಯಲ್ಲಿ ಯಾರ್ಯಾರು ಅಧಿಕಾರಿಗಳಿದ್ದಾರೋ ಅವರೆಲ್ಲರೂ ಹೀಗೆ ಎಂದು ಹೇಳುವುದು ಸರಿಯಲ್ಲ.

Sri H. M. CHANNABASAPPA.— That is my honest conviction. That is my honest opinon.

The Hon'ble Sri H. C. DASAPPA.— We do not agree with you.

Sri G. A. ACHARYA (Bangalore District—General).—He may be appointed as the official liquidator!

Sri H. M. CHANNABASAPPA.—I do not like to be interrupted in the middle. You may differ, I have no objection.

The Hon'ble Sri H. C. DASAPPA.— I may say that a sweeping statement like that will not help the discussion of this subject in this House.

Sri H. M. CHANNABASAPPA.—I know it will not help unless you people make up your mind to mean business and remove these controls. They must be removed as early as possible.

The Hon'ble Sri H. C. DASAPPA.— You are at liberty to say that. But you cannot say all officers in the State are corrupt.

Sri H. M. CHANNABASAPPA.—If you say all are not corrupt, let me agree; I revise my opinion Sir. There may be some honest officers. But I am against such officers who are corrupt.

ಅದರಿಂದ ಈಗ ಈ ಹತೋಟಿ ಆಜ್ಞೆಗಳು ಎಲ್ಲಿಯವರೆಗೆ ಇರಬೇಕೆಂಬುದು ಪ್ರಶ್ನೆ. ಈಗ ದೇಶದಲ್ಲಿ ಈ ಹತೋಟಿ ಆಜ್ಞೆಗಳು ಇರಬೇಕೆ ಅಥವಾ ಹೋಗಬೇಕೆ ಎಂಬ ಬಗ್ಗೆ ಸರ್ಕಾರದವರು gallop poll ಕೈಗೆದುಕೊಳ್ಳುವುದಾದರೆ, ಅದರಿಂದ ಜನಾಭಿಪ್ರಾಯ ಪಡೆಯುವುದಾದರೆ ನೂರಕ್ಕೆ 95ಕ್ಕಿಂತ ಹೆಚ್ಚು ಜನರು ಈ ಹತೋಟಿ ಆಜ್ಞೆಗಳಿಂದ ದೇಶಕ್ಕೆ ಹಿತವಲ್ಲವೆಂದು ಅಭಿಪ್ರಾಯ ಕೊಡುತ್ತಾರೆ. ಇಂತಹ ಅಭಿಪ್ರಾಯ ಬಂದ ಮೇಲೆ, ಪ್ರಜಾ ಸರ್ಕಾರವಾದುದರಿಂದ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಲೇಬೇಕು. ಆದಕಾರಣ ನನ್ನ ಅಭಿಪ್ರಾಯ ಈ ವಿಷಯದಲ್ಲಿ ಸರಿಯಾಗಿಲ್ಲವೆಂದು ಕಂಡುಬಂದರೆ ದೇಶದ ಜನರ ಅಭಿಪ್ರಾಯಪಡೆದಾದರೂ ಈ ಆಜ್ಞೆಗಳನ್ನು ರದ್ದು ಮಾಡಬೇಕು. ಇಂಥಾ ದಿನ ರದ್ದು ಮಾಡುತ್ತೇವೆಂದು ಒಂದು ಗುರಿಯನ್ನಿಟ್ಟು ಕೊಳ್ಳಬೇಕು. ಎಲ್ಲಿಯವರೆಗೆ ಕೇವಲ ಹತ್ತು ಹನ್ನೆರಡು ಲಕ್ಷ ಜನರ ಸುಖಕ್ಕಾಗಿ, ಇವರ ಅನುಕೂಲಕ್ಕಾಗಿ ದೇಶದ ಎಲ್ಲ ಜನರ ಹಣವನ್ನು ಈ ರೀತಿ ಖರ್ಚು ಮಾಡುವುದು? ಇದು ಖಂಡಿತವಾಗಿಯೂ ಸರಿಯಾದ ನೀತಿಯಲ್ಲ. ಸರ್ಕಾರದವರು ಸಬ್‌ಸಿಡೈಸ್ ಮಾಡುವ ನೀತಿ ಸರಿಯಲ್ಲವೆಂದೂ, ಇದನ್ನು ನಿಲ್ಲಿಸಬೇಕೆಂದೂ 1943-44ನೆಯ ಇಸವಿಯಿಂದಲೂ ಸಭೆಯಲ್ಲೂ ಹೊರಗೂ ಹೇಳಿಕೊಂಡೇ ಬಂದಿದ್ದೇವೆ. ನಾನು ಮೊದಲೇ ಹೇಳಿದಂತೆ ಇದಕ್ಕೆ ಒಂದು ನಿರ್ದಿಷ್ಟ ಕಾಲವನ್ನು ಗೊತ್ತುಮಾಡಬೇಕು. ಅಷ್ಟರಲ್ಲಿ ಅಂಕಿ ಅಂಶಗಳು ಸರಿಯಾಗಲು ಆಗದೇ ಇರಲಿ ಹತೋಟಿ ಆಜ್ಞೆಗಳು ಹೋಗಲೇಬೇಕು. ಇದಕ್ಕಾಗಿ ಏನೇನು ವ್ಯವಸ್ಥೆ ಬೇಕೋ ಅದನ್ನೆಲ್ಲಾ ಮಾಡಬೇಕು. ಜನರೂ ಆ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಅವರಿಗೆ ತಿಳಿವಳಿಕೆ ಕೊಡಲು ಏನು ಕೆಲಸ ಮಾಡಬೇಕೋ ಅದನ್ನೂ ಪ್ರಾರಂಭ ಮಾಡಬೇಕು.

ಈಗ ಹೆಚ್ಚು ಬೆಳೆಯಲು ಏನೇನು ಯೋಜನೆಗಳನ್ನು ಮಾಡಿದ್ದಾರೆಯೋ ಅವುಗಳಿಂದ ದೇಶಕ್ಕೆ ಸ್ವಲ್ಪವೂ ಪ್ರಯೋಜನವಾಗಿಲ್ಲವೆನ್ನುವುದರಲ್ಲಿ ಸ್ವಲ್ಪವೂ ಭಿನ್ನಾಭಿಪ್ರಾಯಪಡುವುದಕ್ಕೆ ಕಾರಣವಿಲ್ಲ. ಆಹಾರ ಬೆಳೆಯುವವರಿಗೂ ಉತ್ಸಾಹವಿಲ್ಲ, ಆದರೆ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮ ಸರಿಯಾಗಿಲ್ಲ, ಉತ್ಸಾಹವಿಲ್ಲವೆನ್ನುವುದು ಸರಿಯಲ್ಲ. ನಿಮ್ಮ approach ಸರಿಯಾಗಿಲ್ಲ, ಅಷ್ಟೆ. ಇದನ್ನು ಒಪ್ಪುವುದಾದರೆ ನಿಜವಾಗಿಯೂ ಹೆಚ್ಚು ಆಹಾರ ಬೆಳೆಯುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಸರ್ಕಾರಕ್ಕೆ ನನ್ನ ಮನವಿ ಇಷ್ಟೆ, ಸರ್ಕಾರದವರು ನಾವು ಭಾರತ ಸರ್ಕಾರದ ಅಂಗವಾಗಿರುವಾಗ ಅವರೊಡನೆ ಹೊಂದಿಕೊಂಡು ಹೋಗಬೇಕೆಂದು ಹೇಳಿದರೆ ಅದಕ್ಕೆ ನಾನು ಹೇಳುವುದಿಷ್ಟೆ: ಭಾರತ ಸರ್ಕಾರದ ನೀತಿಯನ್ನು ರೂಪಿಸುವುದರಲ್ಲಿ ನಮಗೆ ಪ್ರಭಾವಯುತವಾದ ಪಕ್ಷದೆಯೆಂಬುದನ್ನು ಮರೆಯದಾರದು. ಪಂಡಿತ ನೆಹರೂ ರವರೂ We have not gained the virtues of the past. We have not secured the virtues of the present ಎಂದು ಹೇಳಿದ್ದಾರೆ: ಹಿಂದಿನ ನೀತಿಯನ್ನು ನಾವು ಪಡೆದಿಲ್ಲ. ಭಾರತ ಸರ್ಕಾರ ಸರಿಯಾದ ನೀತಿಯನ್ನನುಸರಿಸಲು ಅವರ ಅಭಿಪ್ರಾಯವನ್ನು ರೂಪಿಸಲು ತಕ್ಕ ತಿಳಿವಳಿಕೆಯನ್ನು ನಾವು ಕೊಟ್ಟರೆ ಅದು ಅನ್ಯಥಾ ಭಾವಿಸುವುದಿಲ್ಲ. ನಮಗೆ ಎಷ್ಟು ದೇಶಾಭಿಮಾನವಿದೆಯೋ, ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕೆಂಬ ಇಚ್ಛೆ ಇದೆಯೋ ಅವರಿಗೂ ಅಷ್ಟೇ ಇದೆ. ಅದುದರಿಂದ ನಾವು ಈ ಆಹಾರ ನೀತಿಯನ್ನು ಪರಿಶೀಲಿಸಿ ಬೇರೆ ನೀತಿಯನ್ನು ರೂಪಿಸಿ ಹತೋಟಿಯನ್ನು ತೆಗೆದು ಹಾಕಬೇಕೆಂದು ಅವರ ಮನಸ್ಸಿನಲ್ಲಿ ಹುಟ್ಟುವಂತೆ ಅವರಿಗೆ ತಿಳಿಸದೇ ಇದ್ದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂದು ಖಂಡಿತವಾಗಿಯೂ ಹೇಳುತ್ತೇನೆ.

ಶ್ರೀ ಬಿ. ಜಿ. ಬೋರಣ್ಣಗೌಡರು (ಹಾನಗಲ್).— ಸ್ವಾಮಿ, ಆಹಾರದ ವಿಚಾರವಲ್ಲಿ ಯಾವ ನೀತಿಯನ್ನು

ನರಿಸಬೇಕೆಂಬ ಬಗ್ಗೆ ನಲಹೆ ಯಾವ ರೀತಿ ಕೊಡಬೇಕೆಂದು ನಾವು ಯೋಚನೆ ಮಾಡಬೇಕಾದ ಪರಿಸ್ಥಿತಿಯೊದಗಿದೆ. ಆಹಾರವನ್ನು ಯಾವ ರೀತಿ ಹೊರಗಿನಿಂದ ತರಿಸುತ್ತಿದ್ದೇವೆ, ನಾವು ಎಷ್ಟು ಬೆಳೆಯುತ್ತಿದ್ದೇವೆ ಎಂಬ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈಗ ವಿವರಣೆ ಕೊಟ್ಟಿದ್ದಾರೆ. ಈ ಹೊತ್ತು ದೇಶದಲ್ಲಿ ಯಾವ ಕಷ್ಟ ವಿದೆಯೋ ಅದನ್ನು ಯಾವ ರೀತಿಯಿಲ್ಲಿ ಹೋಗಲಾಡಿಸುವುದು ಎಂಬ ವಿಚಾರದಲ್ಲಿ ನಲಹೆ ಕೊಡುವುದು ನಮ್ಮ ಉದ್ದೇಶವಾಗಿರಬೇಕು. ಹಾಗಿಲ್ಲದೆ ಬರೀ ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ. ಸುಮ್ಮನೆ ಆವೇಶದಿಂದ ಭಾಷಣ ಮಾಡಿದರೆ ದೇಶದ ಪರಿಸ್ಥಿತಿಯನ್ನು ಸುಧಾರಿಸಲು ಏನೂ ಪ್ರಯೋಜನವಾಗುವುದಿಲ್ಲ. ಹಿಂದೆ ಮಂತ್ರಿಗಳಾಗಿದ್ದ ಜನಾಬ್ ಇಮಾಂರವರೂ ಶ್ಲಾಘಿಸಿದ್ದಪ್ಪ ನವರೂ ಕೆಲವು ಟೀಕೆಗಳನ್ನು ಮಾಡಿದರು. ಆಹಾರ ಹತೋಟಿ ಪ್ರಾರಂಭ ಮಾಡಿದಾಗಿನಿಂದ ಇದುವರೆಗೆ ನಮ್ಮಾರು ಒಂಬತ್ತು ಹತ್ತು ಕೋಟಿ ರೂಪಾಯಿ ಇದಕ್ಕಾಗಿ ಸರ್ಕಾರದಿಂದ ಖರ್ಚಾಗಿದೆ. ಇದು ಜನರಿಗೆ ಆಹಾರವನ್ನೊದಗಿಸುವುದಕ್ಕೆ ಮಾಡಿರುವ ಒಂದು ಖರ್ಚು. ಇನ್ನು ನಮ್ಮದು deficit ಪ್ರದೇಶವಾದುದರಿಂದ ಇದನ್ನು ಸರಿಪಡಿಸಲು ಆಹಾರ ಯೋಜನೆಗಳಿಗೆ ಪೂರ್ಣ ಅವಕಾಶ ಕೊಡಲು ಎಲ್ಲೆಲ್ಲ ಅವಕಾಶವಿದೆಯೋ ಅಲ್ಲೆಲ್ಲಾ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಮ್ಮಾರು ಒಂಬತ್ತು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ ಇದರಿಂದ ನಮ್ಮ ಕಷ್ಟ ಅರ್ಧ ಮುಕ್ಕಾಲು ಕಡಿಮೆಯಾಗುತ್ತಿದ್ದಿತು. ಈ ಹೊತ್ತು ಹೆಚ್ಚು ಬೆಳೆ ಬೆಳೆಯಲು ಭೇಕಾದಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಆಹಾರ ಪದಾರ್ಥಗಳನ್ನು ಕೊಂಡು ಕ್ಕೊಲು ಹೆಚ್ಚು ಹಣ ಖರ್ಚು ಮಾಡಿ ಕಡಿಮೆ ಬೆಲೆಗೆ ಜನರಿಗೆ ಮಾರುವುದರಿಂದ ಇಷ್ಟು ಹೆಚ್ಚು ಖರ್ಚಿಗೆ ಅವಕಾಶವಾಗಿದೆ. ಹಿಂದಿನವರು ಮಾಡಿದ ನೀತಿಯನ್ನು ಈಗಲೂ ಅನುಸರಿಸುತ್ತಿದ್ದಾರೆ, ಆದರಿಂದ ಹೀಗಾಗಿದೆಯೆಂದು ನನ್ನ ಅಭಿಪ್ರಾಯ. ಈ ಹೊತ್ತು ನನ್ನ ನಲಹೆ ಇಷ್ಟೆ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ. ಅದಕ್ಕೆ ನಾವೇ ಜವಾಬ್ದಾರರೋ ಸರ್ಕಾರದವರೇ ಜವಾಬ್ದಾರರೋ ಹೇಳುವುದಕ್ಕಾಗುವುದಿಲ್ಲ. ಎಷ್ಟೋ ತೊಂದರೆಗಳಿವೆ, ಅಧಿಕಾರ ವರ್ಗದಲ್ಲಿರುವ ಕೆಲವರೂ ಕಾರಣರಿರಬಹುದು. ಆದರೆ ಅವರನ್ನು ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ. ಅವರು ಕೆಟ್ಟವರೇ ಆದರೂ ಅವರೇ ಒಳ್ಳೆಯವರೆಂದು ಹೇಳಿ ಅವರಿಂದ ಒಳ್ಳೆಯ ಕೆಲಸ ಮಾಡಿಸಬಹುದು. ಸಾಮಾನ್ಯವಾಗಿ ಚಿಕ್ಕ ಚಿಕ್ಕ ಅಧಿಕಾರಿಗಳು ಕೆಲವರು ಲಂಚ ರುಷುವತ್ತುಗಳನ್ನು ತೆಗೆದುಕೊಳ್ಳುತ್ತಾರೆಂದರೆ ಇದು ಎಲ್ಲರಿಗೂ ಅನ್ವಯಿಸುವುದಿಲ್ಲ. ತಪ್ಪು ಮಾಡಿದವರನ್ನು ಮಾಡಿದರೆಂದು ಹೇಳಬಹುದು, ಅದು ಬಿಟ್ಟು ಮಾಡಿದವರು ಮಾಡದೇ ಇರುವವರು ಎಲ್ಲರೂ ಇದ್ದರೆ ಎಲ್ಲರೂ ಹೀಗೆಂದು ಹೇಳುವುದಕ್ಕಾಗುವುದಿಲ್ಲ. ಲಂಚ, ಕಾಳಸಂತೆ ಇರಬಹುದು. ಎಂದ ಮಾತ್ರಕ್ಕೇ ಇಡೀ ಇಲಾಖೆಯಲ್ಲರುವ ವರನ್ನೆಲ್ಲಾ ದೂಷಿಸುವುದು ಸರಿಯಿಲ್ಲ. ಇರುವುದನ್ನು ತಪ್ಪಿಸಲು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಅನೇಕರ ಮೇರೆ ಕೇಸುಗಳನ್ನು ಹಾಕಿದ್ದಾರೆ, ಇಡೀ ಇಲಾಖೆಯವರನ್ನೆಲ್ಲಾ ದೂರುವುದು ನ್ಯಾಯವಲ್ಲ.

Sri H. M. CHANNABASAPPA.—A word of explanation. I have stood corrected. I am only against the corrupt officials of the Department.

Sri B. N. BORANNA GOWDA.—You cannot generalise things.

ನಾನು ಹೇಳುವುದು ಇಷ್ಟೆ. ಇವತ್ತು ನಮಗೆ ಆಹಾರ ದವಸ ಬಹಳವಾಗಿ ಖೋತಾ ಆಗಿದೆ ಪ್ರಕ್ಯೂರ್‌ಮೆಂಟ್ ವಿಚಾರದಲ್ಲಿ ಒಂದು ನಲಹೆ ಕೊಡಲು ಬಯಸುತ್ತೇನೆ. ಈಗ ನೀವು ಅನುಸರಿಸುತ್ತಾ ಇರತಕ್ಕ ನೀತಿ ಸರಿಯಿಲ್ಲ, ಸರ್ಕಾರದವರಿಗೆ ಆಹಾರ ಧಾನ್ಯವನ್ನು ಸರೆಂಡರ್ ಮಾಡಬೇಕೆಂದು ವಿಧಾಯಕವಾಗಿದೆ. ಆದರೆ ರೆವಿನ್ಯೂ ಇನ್‌ಸ್ಪೆಕ್ಟರು ಅಥವಾ ಶ್ಯಾನುಭೋಗರು ನಿಗದಿ ಮಾಡಿದ ಮೇರೆ ಅದನ್ನು ವಸೂಲು ಮಾಡಿಕೊಳ್ಳಬೇಕಾದ್ದು ಸರ್ಕಾರದವರ ಕರ್ತವ್ಯ. ಇವತ್ತು ಆ ರೀತಿ ವಸೂಲಾಗುತ್ತಿಲ್ಲ ಎಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಎಲ್ಲೆ ವಸೂಲಾಗುತ್ತಿಲ್ಲವೋ ಅಂಥ ಕಡೆ 10 ಕ್ಲೇಸುಗಳನ್ನು ಹಾಕಿದರೆ ಎಲ್ಲಾ ಕಡೆಯೂ ನಲೀಸಾಗಿ ವಸೂಲಾಗುತ್ತದೆ ಎಂದು ನಲಹೆ ಮಾಡುತ್ತೇನೆ. ಇದು ಸರಿಯಾಗಿ ನಡೆಯುತ್ತಿಲ್ಲ. ದೊಡ್ಡವರು ಎಂತಹೋ ಅಥವಾ ಪ್ರಭಾವಯುತರಾದವರು ಎಂತಹೂ ಅಲ್ಲಲ್ಲಿ ವಿನಾಯಿತಿಕೊಡುತ್ತಾ ಇದ್ದೀರಿ. ಆ ನೀತಿ ಸರಿಯಾದ್ದಲ್ಲ. ಇನ್ನೊಂದು ವಿನೆಂದರೆ ಸಿಟಿಗಳಲ್ಲದ್ದುಕ್ಕೊಂಡು ಹೊರಗಡೆ ಜಮೀನು ಆಬಾದು ಮಾಡಿಸುತ್ತಿರುವವರಿಗೂ ರೇಷ್ ಕೊಡುತ್ತಿದ್ದೀರಿ. ಅದನ್ನು ಅವರು ಬ್ಲ್ಯಾಕ್ ಮಾರ್ಕೆಟ್‌ಗೆ ಕಳುಹಿಸುತ್ತಾರೆ. ಅದ್ದರಿಂದ ಜಮೀನು ಇರತಕ್ಕವರಿಗೆ ರೇಷ್ ಕೊಡುವುದಲ್ಲ ಎಂದು ಸರ್ಕಾರದವರು ಸಾರಬೇಕು. ಅಲ್ಲದ ಒಂದು ಎಕರೆ ಜಮೀನು ಇರಲಿ ಅಥವಾ 10 ಎಕರೆ ಜಮೀನು ಇರಲಿ ಯಾರು ಲಾಭದಾಯಕವಾದ ಬೆಳೆಗಳನ್ನು ಬೆಳೆಯುತ್ತಾರೋ ಅಂಥವರಿಗೂ ಸಹ ರೇಷ್ ಕೊಡಬಾರದು. ಲಾಭದಾಯಕವಾದ ಬೆಳೆಗಳನ್ನು ಬೆಳೆಯಬಾರದೆಂದು ಅಲ್ಲ, ಆದರೆ ಆಹಾರ ಧಾನ್ಯಗಳು ಅವಶ್ಯಕವಾಗಿ ಬೇಕಾಗಿರುವಾಗ ಅಂತಹ ಬೆಳೆಗಳನ್ನು ಬೆಳೆಯುವುದಕ್ಕೆ ಏಕೆ ಪ್ರೋತ್ಸಾಹ ಕೊಡಬೇಕು? ಅವರೂ ಸಹ ದೇಶಕ್ಕೆ ಬೇಕಾದ ಆಹಾರ ಧಾನ್ಯವನ್ನು ಬೆಳೆಯತಕ್ಕ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಒಬ್ಬ ಸದಸ್ಯರು.—ಮಳೆ ಬರದಿದ್ದಕ್ಕೆ ಏನು ಮಾಡಬೇಕು?

ಶ್ರೀ ಬಿ. ಎನ್. ಬೋರಣ್ಣಗೌಡರು.—ಮಳೆ ಬರದಿದ್ದರಿಯಾಯಿತಿ ಕೊಟ್ಟೇ ಕೊಡುತ್ತಾರೆ. ಮಳೆ ಬರದಿದ್ದರೂ ಬೆಳೆಯಿರಿ ಎಂದು ಹೇಳುತ್ತೇನೆಯೆ? ಇನ್ನೊಂದು ನಲಹೆ ಏನೆಂದರೆ, ಈಗ ಪಡಿತರ ಹಂಚುವ ರೀತಿಯಲ್ಲಿ ಅನಾವಶ್ಯಕವಾಗಿ ಕೆಲವು ತೊಂದರೆಗಳಿವೆ. ಕೆಲವರಿಗೆ ಸ್ಪೆಷಲ್ ಕೋಟಾ ಕೊಡುತ್ತೀರಿ. ಅದನ್ನು ಖಂಡಿತವಾಗಿಯೂ ನಿಲ್ಲಿಸಬೇಕು, ಕೊಡಬಾರದು. ಹೋಟೇಲುಗಳಿಗೆ ರೇಷ್ ಕೊಡುತ್ತೀರಿ. ಅದನ್ನು ನಿಲ್ಲಿಸಬೇಕು ಇದ್ದರೆ ಖಂಡಿತವಾಗಿಯೂ ದೇಶದಲ್ಲಿ ಆಹಾರದ ಪರಿಸ್ಥಿತಿ ಉತ್ಕಟಾವಸ್ಥೆಗೆ ಬರುತ್ತದೆ ಎಂದು ಹೇಳುತ್ತೇನೆ. ಹೋಟೇಲುಗಳಿಗೆ ರೇಷ್ ಕೊಡುವುದರಿಂದ ಅದು ಇವತ್ತು ಬ್ಲ್ಯಾಕ್ ಮಾರ್ಕೆಟ್‌ಗೆ ತಿರುಗಿದೆಯೋ ನಮ್ಮ ಪರಿಸ್ಥಿತಿ ಹೀಗೆ ಆಗಿದೆ. ಮೊದಲು ಹೋಟೇಲುಗಳಲ್ಲಿ ಇಡ್ಲಿ ದೋಸೆ ಮಾಡಕೂಡದೆಂದು ಆಜ್ಞೆ ಮಾಡಿದ್ದಿರಿ. ಒಳ್ಳೆಯದಾಗಿತ್ತು. ಈಚೆಗೆ ಅದು ಪ್ರಯೋಜನವಿಲ್ಲ ಎಂದು ಯೋಚನೆ ಮಾಡಿ ಆ ಹತೋಟಿಯನ್ನು ತೆಗೆದುಹಾಕಿದಿರಿ. ಅದು ಹೇಗಾದರೂ ಆಗಲಿ ಹೋಟೇಲುಗಳಿಗೆ ಕೋರ್ಟು ಮುಂತಾದ ಕಡೆಗಳಲ್ಲಿ ವ್ಯವಹಾರ ಇರುವವರು ಬರುತ್ತಾರೆ. ಅಂತಹವರಿಗೆ ಅನಾನುಕೂಲವಾಗುತ್ತದೆ ಎಂದು ರೇಷ್ ಕೊಡುತ್ತೇವೆ ಎಂದು ಹೇಳಿದರೂ ಸಹ

(ಶ್ರೀ ಬಿ. ಎಸ್ ಬೋರಣ್ಣಗೌಡರು.)

ಅದರಿಂದ ಅನೇಕ ಅನರ್ಥಗಳಿಗೆ ಕಾರಣವಾಗುತ್ತದೆ. ಆದಕಾರಣ ಹೊಜೇಲುಗಳಿಗೆ ರೇಷ ಕೊಡಕೂಡದು.

ಶ್ರೀ ಬಿ. ಸಹಾಯ್ಯರು.—ಹೊಜೇಲುಗಳನ್ನು ಮುಚ್ಚಬೇಕು ಎಂದು ಹೇಳುತ್ತೀರಾ?

ಶ್ರೀ ಬಿ. ಎಸ್. ಬೋರಣ್ಣಗೌಡರು.—ಅದು ಬೇರೆ ಮಾತು. ಈ ರೀತಿ ರಚನಾತ್ಮಕ ಸಲಹೆಗಳನ್ನು ಕೊಟ್ಟು ನಮ್ಮ ಸಹಾಯ ನೀಡಬೇಕು. ಡೀಕಂಟ್ರೋಲ್ ಮಾಡಬೇಕೆಂದರೆ ಮಾಡೋಣ. ಆದರೆ ಕೇಂದ್ರ ಸರ್ಕಾರದವರು ನಮಗೆ ಕಳಿಸಿಕೊಡುತ್ತಿರುವ ಆಹಾರಧಾನ್ಯಗಳನ್ನು, ನಮ್ಮಲ್ಲಿ ಬೇಕಾದಷ್ಟು ಆಹಾರಧಾನ್ಯ ಇದೆ, ಡೀಕಂಟ್ರೋಲ್ ಮಾಡಿದ್ದೀರಿ, ಕೊಡುವುದಿಲ್ಲ ಎಂದರೆ ಆಗ ನಮ್ಮ ಪರಿಸ್ಥಿತಿ ಏನು ಎಂಬುದನ್ನು ಯೋಚನೆ ಮಾಡಬೇಕು. ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದವರನ್ನು ಹೆಚ್ಚಾಗಿ ಕೊಡಿ ಎಂದು ಕೇಳಿಕೆಗೆದುಕೊಂಡು ನಮ್ಮ ದೇಶದಲ್ಲಿ ಬೆಳೆಯುತಕ್ಕ ಆಹಾರವನ್ನು ಕೇರಿಸಿ ಹಂಚಿಕೆ ಮಾಡಬೇಕಾಗಿದೆ. ಈಗ ಕೆ. ಜಿ. ಎಫ್, ಬೆಂಗಳೂರು, ಮೈಸೂರು ಮತ್ತು ದಾವಣಗೆರೆ ಈ ನಾಲ್ಕು ಭಾಗಗಳಿಗೆ ಒಂದು ಸೇರು ಸಹ ಬರದಂತೆ ನೋಡಿಕೊಳ್ಳಬೇಕು. ಈ ರೀತಿ ಆಹಾರಧಾನ್ಯಗಳನ್ನು ರವಾನಿಸುವುದರ ಬಗ್ಗೆ ಸರ್ಕಾರದ ಅಭಿಪ್ರಾಯ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಹೀಗೆ ಏನಾದರೂ ಮಾಡಿಕೊಂಡು ನಮ್ಮ ಕಾಲಮೇಲೆ ನಾವು ನಿಂತುಕೊಳ್ಳುತ್ತೇವೆ ಎಂಬ ಧೈರವಸ ಬರುವವರೆಗೂ, ಪರರ ಆಶ್ರಯ ಬೇಕಾಗಿಲ್ಲ ಎನ್ನುವವರೆಗೂ ಡೀಕಂಟ್ರೋಲ್ ಮಾಡಕೂಡದು. ಮಾಡಿದ ಪಕ್ಷದಲ್ಲಿ ದೇಶದ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗುತ್ತದೆ. ಜನಗಳು ಆಹಾರವಿಲ್ಲದೆ ಸಾಯುತ್ತಾರೆ. ಶ್ರೀಮಂತರೇನೋ ಬ್ಲ್ಯಾಕ್ ಮಾರ್ಕೆಟ್ ಅಥವಾ ಇನ್ನಾವುದಾದರೂ ರೀತಿಯಲ್ಲಿ ಬೇಕಾದಷ್ಟು ಹಣ ಸಂಪಾದಿಸಿರುತ್ತಾರೆ. ಅವರಿಗೆ ಏನೂ ಕಷ್ಟವಿಲ್ಲ. ಈಗ ಹಣದ ಚಿಬ್ಬರ ಬಹಳ ಹೆಚ್ಚಾಗಿದೆ. ಅವರು ಇನ್ನೂ ಸಂಪಾದಿಸಬೇಕೆಂಬ ದೃಷ್ಟಿಯಿಂದ ಆಹಾರ ಧಾನ್ಯಗಳನ್ನು ಕ್ರೋಢೀಕರಿಸಿ ಬ್ಲ್ಯಾಕ್ ಮಾರ್ಕೆಟ್ ಮಾಡುತ್ತಾರೆ. ಹಾಗೆ ಮಾಡುವವರ ಮೇಲೆ ಕಣ್ಣು ಹಾಕಿ ಆಹಾರ ದವಸವನ್ನು ವಶಪಡಿಸಿಕೊಳ್ಳಬಹುದು, ಸರ್ಕಾರದವರು ಎಷ್ಟು ಜನರನ್ನು ಹಿಡಿಯುವುದಕ್ಕೆ ಆಗುತ್ತದೆ. ಶಿಬ್ಬಂದಿ ಇದ್ದರೂ ಈಗ ಎಷ್ಟೋಜನ ಪಾನನಿರೋಧ ಜಾರಿ ಮಾಡಿರುವ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಇಳಿಸುತ್ತಲೇ ಇದ್ದಾರೆ. ಅದನ್ನು ನಿಲ್ಲಿಸಬೇಕೆಂದು ಎಷ್ಟೋ ಪ್ರಯತ್ನ ಪಟ್ಟರೂ ಸಾಧ್ಯವಾಗಿಲ್ಲ. ಕಳ್ಳರು ಯಾವ ರೀತಿಯಾದರೂ ಕದ್ದುಕುಡಿದೇ ಕುಡಿಯುತ್ತಾರೆ, ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಡೀಕಂಟ್ರೋಲ್ ಮಾಡಿದರೆ ದೇಶದ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗುತ್ತದೆ. ಮುಂದೆ ಅಂಥ ಪರಿಸ್ಥಿತಿ ಒದಗದೇ ಇರಲಿ ಎನ್ನುವ ದೃಷ್ಟಿಯಿಂದ ಇಷ್ಟು ಸಲಹೆ ಕೊಟ್ಟು ಈ ವಿಚಾರಗಳಲ್ಲಿ ತಮ್ಮ ಅಭಿಪ್ರಾಯ ಸೂಚಿಸಬೇಕೆಂದು ಪ್ರಾರ್ಥಿಸುತ್ತೇನೆ.

*Janab MOHAMED HANIEF (Bangalore—Muslim).—Mr. Speaker, Sir, no exception can be taken to the activities of the Government with regard to securing increased foodstuffs in this county. All the expenditure on that side cannot also be taken exception to. It is certainly justifiable. At the present moment, from the figures obtaining, it would be seen that a larger acreage has been brought under cultivation and in order to make it fruitful tanks have been restored and major irrigation projects have been improved and improved methods of cultivation are also adopted. In spite of all this there is a shortage of food in the country and Government have been attempting to make good that shortage by importing foodstuffs from outside. The question is what is the reason for this shortage? I say that the reason for this shortage is this. On the food problem two independent agencies are working; one is the Government and the other is the black-marketeer. Government took up the work of procurement of supplies in order to see that all the people of India are given their allotted measure of food. In their way came the merchant, the black-marketeer. Before the Government took up this task he was the master of the situation. He satisfied the demand; he supplied the demand and moved it from one part of the country to another and he took all measures to see that the demand of a particular territory was satisfied and he did it out of profit motive. Profit motive still dominates, and continues and the blackmarketeer is able to make good the deficiency in the supply of foodstuffs to the individual citizen. There is a general impression in the country that what the Government are not able to give, the black-marketeer is able to give. It is only a question of money so that the deficiency that is probably taken from the figures given to us by the Government does not appear to be a correct figure. For, a good bit of the supply comes from the blackmarketeer. If there was deficiency, wherefrom this supply is made and from what source? It is by the black-marketeer. The impression in the country at the present moment is that there is no deficiency on the side of production but there is certainly deficiency on the side of distribution. Every honest attempt that is being made by Government to secure proper distribution is hampered by the black-marketeer adopting his own way. The result has been what it is. Government no doubt are attempting

to put down blackmarketting by imposing fines and even imprisonment. But the profit motive is so strong that it defies law.

The Hon'ble Sri T. MARIAPPA.—We have even detained certain persons.

Janab J. MOHAMED HANIEF.—But whatever measures Government are adopting to discourage this blackmarketting, they have not been successful. For various reasons it is not for me to detail them at the present moment. All the same, this difficulty continues and will continue, so long as the controls are there, so long as the Government is continuing the rationing and take upon its shoulders the responsibility of supplying food to all. The reason is, every time there is control, there is the segregation of the production and the blackmarketers bring it out only when it yields a good bit of profit. I say that it is impossible for the Government to discourage the blackmarketing unless the people co-operate with the Government to get over this difficulty. So long as that state of affairs prevails this difficulty continues. What then is the solution Sir? It is decontrol. If you decontrol and if you leave the people to themselves, well, they will adjust themselves. For a time there will be hardship; it may be for six months or a year and but they will adjust, themselves. By this the responsibility shouldered by the Government will have been lifted. Probably the Government hesitate to decontrol because the hierarchy, the departments that are working are probably sailing over the ship and the ship will go down if this is removed. There may be so many forces working upon the Government. But, I ask the Government of India and this Government to take courage in their hands and decontrol the whole thing to-day. Well, the movement of control is there, because of the controls. Sir, the movement of foodgrains has also proved to a large extent a failure, for procurement is not possible in this part of the country where communication is not easy, so that procurement is not free from danger and the officers sent out for procurement in any sense will not be safe, as the people that live there grow more for themselves and will not permit procurement. We can get over that by removing from the minds of the people that they will have sufficient food for themselves and their children and that is by lifting the control. There is a general sense in the mind of the people as a whole that this system of control and rationing has not worked successfully. I do not want to go into the reasons. The one reason why this system is unsatisfactory is the difficulty of communication, difficulty of taking produce from them. Therefore decontrol is the only solution. This control, I must say, is going to help the existence of blackmarketing. It is the blackmarketeer that is sustaining us and giving us something. Remove the control, the black-marketeer will disappear and the normal course of business will come into being and the problem will be to a large extent solved Sir, you cannot remove blackmarketing; remove the control, blackmarketing will be removed and the food problem will be solved to a large extent.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಸರ್ಕಾರದವರು 1' 50ನೆಯ ಇಸವಿಯಲ್ಲಿ ನಮ್ಮ ನಂಸ್ಥಾನದಲ್ಲಿನ ಆಹಾರದ ಸ್ಥಿತಿ ಹೇಗಿತ್ತು ಮತ್ತು ಮುಂದೆ 1951ನೆಯ ಸಾಲಿನಲ್ಲಿ ಹೇಗಿರುತ್ತದೆಂಬುದನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಆಹಾರದ ಸರಬರಾಯಿಯ ವಿಚಾರದಲ್ಲಿ ನಾನು ಮುಖ್ಯವಾಗಿ ಹೇಳುವುದಾದರೆ ನಾವು ಎಷ್ಟು ಯೋಜನೆ ಮಾಡುತ್ತಾ ಹೋದರೂ ಕೂಡ ನಮ್ಮ ಕಂಟ್ರೋಲ್ ಆಜ್ಞೆಗಳೆಲ್ಲಾ ಕೇವಲ ಕಾಗದದ ಮೇಲಿರುತ್ತವೆಯೇ ಹೊರತು ಅವುಗಳನ್ನು ಪ್ರಾರಿಯಲ್ಲಿಡುವುದು ಬಹಳ ಕಷ್ಟದ ಕೆಲಸವೆಂದು ಹೇಳುತ್ತೇನೆ. ಇದರಲ್ಲಿ ಹೇಳಿರುವಂತೆಯೇ 'ಎ' ಕ್ಲಾಸಿನವರು 9 ಔನ್ಸ್‌ನಂತೆಯೇ 'ಬಿ' ಕ್ಲಾಸಿನವರು 12 ಔನ್ಸ್‌ನಂತೆಯೇ ಊಟ ಮಾಡಿದ್ದರೆ ಈ ಸಭೆಯ ಅಂಗಣಕ್ಕೆ ಸದಸ್ಯರು ಯಾರೂ ಬರುವುದಕ್ಕೇ ಸಾಧ್ಯವಿರುತ್ತಿರಲಿಲ್ಲ! ಬರೀ 9 ಔನ್ಸ್ ತಿನ್ನುವವರೇ ಇಲ್ಲಿ ಬೇಕೆಂದು ಹೇಳಿದ್ದರೆ ಪ್ರಾಯಶಃ ಇಂದು ಇಲ್ಲಿರುವವರೆಲ್ಲರೂ ಜ್ವರನಲ್ಲರಬೇಕಾಗುತ್ತದೆ. ಏಕೆಂದರೆ, ಖಂಡಿತವಾಗಿಯೂ ನಾವೆಲ್ಲರೂ ಕಂಟ್ರೋಲ್ ಆಜ್ಞೆಯಂತೆ ನಡೆದು ಕೂಳ್ಳಬೇಕೆಂದರೆ ಪ್ರತಿಯೊಂದು ಮನೆಯಲ್ಲೂ ಒಂದು ತ್ಯಾಸನ್ನಿಟ್ಟುಕೊಂಡು ಊಟಕ್ಕೆ ಮುಂಚೆ ತೂಕ ಮಾಡಿ ಊಟವಾದ ಮೇಲೆ ಮತ್ತೆ ತೂಕ ಮಾಡಿ ಯಾರು ಹೆಚ್ಚು ಊಟ ಮಾಡಿರುತ್ತಾರೋ ಅವರನ್ನೆಲ್ಲಾ ಜೈಲಿಗೆ ಕಳುಹಿಸಬೇಕಾಗುತ್ತದೆ. ಹಾಗಿಲ್ಲದೆ ಇದ್ದರೆ ನೀವುಹೇಳುವಂತೆ 'some how adjust' ಮಾಡಿಕೊಂಡು ಹೋಗಬೇಕೆಂದು ನೀವು ಕೊಟ್ಟದ್ದು 6 ಔನ್ಸ್ ಆಗಲಿ, 10

(ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.)

ಬಿಕಾಸ್ ಆಗಲಿ ಹೊಂದಿಕೊಂಡು ಹೇಗೆ ಹೋಗುವುದು? ನೀವೇ ಕಳ್ಳತನ ಮಾಡಿ ಎಲ್ಲಾದರೂ ತನ್ನಿ ಎಂದು ಹೇಳಿ ಕೊಡುತ್ತಿದ್ದೀರಿ. ಕಳ್ಳತನಕ್ಕೆ ಅವಕಾಶ, ಉತ್ತೇಜನ ನೀವೇಕೊಡುತ್ತಿದ್ದೀರಿ. ಹಾಗಿಲ್ಲದೆ ಎಲ್ಲೆಲ್ಲಿ ಯಾವ್ಯಾವ ರೈತ ಎಷ್ಟು ಬೆಳೆಯುತ್ತಿದ್ದಾನೋ ಅದನ್ನೆಲ್ಲಾ ಕತ್ತು ಕೊಂಡು ಒಂದು ದೇಶದಲ್ಲಿ ಎಲ್ಲರೂ ಒಂದೇ ಸಮಾನಾಗಿ ತಿನ್ನಬೇಕು, ಎಲ್ಲರೂ ಬದುಕಬೇಕು ಎಂದು ಹೇಳಿ ಎಲ್ಲರಿಗೂ 6 ಬಿಕಾಸ್ ಕೊಡುತ್ತಿದ್ದೀರೇನು? ಅದಿಲ್ಲದೆ ಹೋದಮೇಲೆ ಇದೆಂಥಾ ಕಂಟ್ರೋಲು!! ಇದರಲ್ಲಿ ಖಂಡಿತ ನ್ಯಾಯವಿಲ್ಲ! ಆದ್ದರಿಂದ ತಾವು ಮುಖ್ಯವಾಗಿ ಒಂದು ಕೆಲಸಮಾಡಬೇಕು. ಆಹಾರ ಮಂತ್ರಿಗಳು ಡೆಲ್ಲಿಗೆ ಕಾರ್ಬಾರಿನ್ಸಿಗೆ ಹೋಗುತ್ತಾರೆ. ಅಲ್ಲಿ ಅವರು ಈ ಸಲ ವಾದರೂ 1951—52ನೆಯ ಇಸವಿಗೆ ಏನೇ ಆಗಲಿ ಕಂಟ್ರೋಲನ್ನು ತೆಗೆದೇ ತೆಗೆಯಬೇಕು, ದೇಶದಲ್ಲಿ ಜನರು ಸಾಯಲಿ ಬದುಕಲಿ ಈ ನಿರ್ಧಾರವನ್ನು ಬದಲಾಯಿಸುವುಎಲ್ಲವೆಂದು ಒಂದು ತೀರ್ಮಾನ ಮಾಡಬೇಕು. ನಮ್ಮ ದೇಶದಲ್ಲಿ ಹಿಂದೆಯೂ ಬೇಕಾದಷ್ಟು ಬರ ಬಂದಿತ್ತು. ಆದರೂ ಈ ಹತೋಟಿಗಳಿಲ್ಲದೆ ಹೋಗಲಿಲ್ಲವೇನು? ಹಾಗೆಯೇ ಈಗಲೂ. 1943ನೆಯ ಇಸವಿಯಲ್ಲಿ ಬಂತು ಈ ಕಂಟ್ರೋಲು. ಮಧ್ಯೆ ಸ್ವಲ್ಪ ಕಾಲ ಬಿಟ್ಟು ಬಿಟ್ಟು ಮತ್ತೆ ಹಾಕಿದಿರಿ. ಏತಕ್ಕೆ? ದರಗಳು ವಿಪರೀತ ಜಾಸ್ತಿಯಾಯಿತೆಂದು ಹೇಳಿದಿರಿ! ಆದರೆ ವಾಸ್ತವವಾಗಿ ನೀವು ಕಂಟ್ರೋಲ್ ತೆಗೆದ ದಿವಸ ದರ ಹೇಗಿತ್ತು, ಮತ್ತೆ ಹಾಕಿದ್ದು ಎಷ್ಟಿತ್ತು ಮತ್ತು ಈಗ ಎಷ್ಟಿದೆಯೆಂಬುದನ್ನು ಸ್ವಲ್ಪ ನೋಡಿ. ನೀವು ಕಂಟ್ರೋಲ್ ತೆಗೆದ ದಿವಸ ಪಲ್ಲಾಕ್ಕೆ 43 ರೂಪಾಯಿಗಳಿತ್ತು. ಮತ್ತೆ ಹಾಕುವ ತಾರೀಖಿನವರೆಗೆ 48, 49, 50 ರೂಪಾಯಿನ ವೊಳಗೇ ಇತ್ತು. ಶಿರಾಬ, ಸಾಗರ, ದಾವಣಗೆರೆ, ಚಿಕ್ಕಬಳ್ಳಾಪುರ ಮುಂತಾದ ಕಡೆಗಳಲ್ಲೆಲ್ಲಾ 50 ರೂಪಾಯಿನಂತೆ ಬೇಕಾದಷ್ಟು ಸಿಕ್ಕುತ್ತಿತ್ತು, ಅಂಥಾದ್ದು ಆಹಾರದ ಮೇಲೆ ಕಂಟ್ರೋಲ್ ಎಂದು ಹೇಳಿದ ಕೂಡಲೇ ಬ್ಲಾಕ್ ಮಾರ್ಕೆಟ್ ಪ್ರಾರಂಭವಾಯಿತು. ಬ್ಲಾಕ್ ಮಾರ್ಕೆಟ್ಟಿನ ದರವೇ ಈಗಿನ ನಿಜವಾದ ದರವೆನ್ನಬೇಕು. ಏಕೆಂದರೆ ಜನರಿಗೆ ಈಗ ಸಿಕ್ಕುವುದೇ ಅದೇ ದರದಲ್ಲಿ. ಅದರಂತೆ ಈಗ 120 ರೂಪಾಯಿ ದರವಿದೆ! ತೆಗೆದುಕೊಳ್ಳದೆ ಇದ್ದರೆ ವಿಷಯವಿಲ್ಲ. ಬೆಲ್ಲ ಆರು ರೂಪಾಯಿನಂತೆ ಹತೋಟಿ ಮಾಡಿದಿರಿ. ಎಲ್ಲೂ ಬೆಲ್ಲವೇ ಸಿಕ್ಕದಂತಾಯಿತು. ಬ್ಲಾಕ್ ಮಾರ್ಕೆಟ್ಟಿನಲ್ಲಿ ಧಾರಣೆ ಪೊದಲಿಗೆ ಒಂದಕ್ಕೆರಡರಷ್ಟಾಯಿತು. ನನ್ನನ್ನೇ ಒಬ್ಬ ಬಂದು ಕೇಳಿದ್ದಕ್ಕೆ, "ಏನು ಮಾಡುವುದು 5 ರೂಪಾಯಿಯಾದರೂ ತೆಗೆದುಕೊಳ್ಳಬೇಕು, ಹೇಗಾದರೂ ನಿನಗೆ ಕೊತ್ತಂಬರಿಯಲ್ಲಿ ದುಡ್ಡು ಬಂದಿವೆಯೆಲ್ಲಾ!" ಎಂದೆ. ಕಂಟ್ರೋಲ್ ಬರುವುದರಿಂದ ಹೀಗೆಲ್ಲಾ ಆಗುವುದಕ್ಕೆ ಅವಕಾಶವಾಗುತ್ತೆ.

ಆಮೇರೆ ಇನ್ನೊಂದೇನೆಂದರೆ, ಈಗ ವರ್ಷೆ ವರ್ಷೆ ನಮ್ಮಲ್ಲಿ ಬೋತಾ 14 ಲಕ್ಷ ಪಲ್ಲಗಳೆಂದು ಹೇಳುತ್ತಲೇ ಇದ್ದೀರಿ. ಈ ಅಂಕಿ ನಿಮಗೆ ಹೇಗೆ ಬಂತೋ ಅರ್ಥವಾಗುವುದಿಲ್ಲ ನಮಗೇಕೆ ಈ ಶ್ಯಾನುಭೋಗರ ಲೆಕ್ಕ ನಂಬಿಕೊಂಡು ಕೆಲಸ ಮಾಡುವ ಗ್ರಹಚಾರ ಬಂದಿದೆಯೋ ಕಾಣೆ! ಹೆಚ್ಚಿಗೆ ಆಹಾರೋತ್ಪತ್ತಿಗಾಗಿ ನಡೆಸಿದ ಕಾರ್ಯಕ್ರಮದ ಫಲವಾಗಿ ನಮ್ಮ ಸಂಸ್ಥಾನದಲ್ಲಿ ಒಟ್ಟು ಸಾಗುವಳಿಗೆ ಬಂದಿರುವುದು 52 ಲಕ್ಷ ಎಕರೆಯೆಂದು ಹೇಳಿದ್ದೀರಿ. ಆದರೆ ಇಲ್ಲಿ ಆಹಾರ ಪದಾರ್ಥಗಳ ಬೆಳೆಯಾಗಿರುವ ಪ್ರದೇಶವೆಷ್ಟೆಂಬುದಕ್ಕೆ ಕೊಟ್ಟಿರುವ ಅಂಕಿಗಳನ್ನು ನೋಡುವುದಾದರೆ 1949-50 ರಲ್ಲಿ 32 ಲಕ್ಷ ಎಕರೆಗಳಿದ್ದುದು 1950—51 ರಲ್ಲಿ 29 ಲಕ್ಷ ಎಕರೆಗಳಿಗೆ ಇಳಿಯಿತು. ವರ್ಷವರ್ಷವೂ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಯೂ ಇನ್ನೂ 30 ಲಕ್ಷ ಎಕರೆ ಕಡಮೆಯಿಯಾತೆಂದರೆ ಏನು ಹೇಳೋಣ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಖುಷ್ಕಿ ಪ್ರದೇಶದ ಲೆಕ್ಕವನ್ನು ತೆಗೆದುಕೊಳ್ಳಿ. ತರೀ ಪ್ರದೇಶದಲ್ಲಾದರೆ ಮಳೆ ಬೆಳೆ ಆಗದಿರುವ ಕೆಲವು ಪ್ರದೇಶಗಳು ಬಿಟ್ಟು ಹೋಗುತ್ತವೆ. ಉದಾಹರಣೆಗೆ ಈ ಸಾರಿ ಕೋಲಾರದ ಕಡೆಯಲ್ಲಿ ಮಳೆಯಾಗಲಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಅಂತೂ ಈ Grow more food ಯೋಜನೆ ಇಟ್ಟುಕೊಂಡು ವರ್ಷ ವರ್ಷಕ್ಕೆ ಮೂರು ನಾಲ್ಕು ಲಕ್ಷ ಎಕರೆಗಳು ಇಳಿಯುವಂತೆಯೇ ಕಾಣುತ್ತಿದೆ!! ಇದೇನು ಆಹಾರ ಬೆಳೆಯುವ ಯೋಜನೆಯೋ ಅಥವಾ ಹಣ ಸಂಪಾದನೆಯ ಯೋಜನೆಯೋ ಕಾಣೆ; ಅಂತೂ, ಏನೇ ಆಗಲಿ 1951—52ರ ಹೊತ್ತಿಗೆ ಈ ಕಂಟ್ರೋಲ್‌ಗಳನ್ನೆಲ್ಲಾ ತೆಗೆದುಬಿಡಿ; ಹಾಗಿಲ್ಲದಿದ್ದರೆ ರೈತರಿಂದೆಲ್ಲವನ್ನೂ ಪೂರ್ತಿ ಕಿತ್ತುಕೊಂಡುಬಿಟ್ಟು ನರಿಯಾನಿ ಕಂಟ್ರೋಲ್ ವಿಧಿಸಿ ಯಾರೊಬ್ಬರೂ ನೀವು ಹೇಳಿದ 12 ಬಿಕಾಸ್‌ಗಳಿಗಿಂತ ಹೆಚ್ಚಿಗೆ ತೆಗೆದುಕೊಳ್ಳಕೂಡದೆಂದು ಮಾಡಿ ಅದು ಸರಿಯಾದ ಕಂಟ್ರೋಲು.

ಶ್ರೀ ಎಂ. ಎರ್. ನಂಜರಾಜ ಅರಸಿನವರು.—Impracticable; ಹಾಗೆ ಮಾಡಿದರೆ ರೈತರು ಯಾರೂ ಬೆಳೆಯುವುದಕ್ಕೇ ಆಗುವುದಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಸ್ವಾಮಿ, ಇನ್ನೊಂದು ವಿಚಾರವೇನೆಂದರೆ ಹೋದ ಸಾಲಿನಲ್ಲಿ ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿದ್ದ 43 ಲಕ್ಷ ರೂಪಾಯಿಗಳ ಗ್ರಾಂಟ್ ಸಾಲದೆ ಅವರ ಮೇಲೆ 3 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ತಾವು ಖರ್ಚು ಮಾಡಿದ್ದೀರಿ. ಆದರೆ ಈಗ ಮತ್ತೆ ಈ ವರ್ಷ ಅದರ ಮೇಲೆ ಇನ್ನೂ 1 ಕೋಟಿ ಹೆಚ್ಚಾಗಿ ಖರ್ಚು ಆಗುವ ಸ್ಥಿತಿ ಬಂದಿದೆ. ಅಂದರೆ ನಾನು ಹೇಳ ತಕ್ಕದ್ದು ಹೀಗೆ ಖರ್ಚು ಮಾಡಬೇಡಿ ಎಂದಲ್ಲ. ತಾವು ಮಾಡತಕ್ಕ ಖರ್ಚನ್ನು ಸರಿಯಾದ ಮಾರ್ಗದಲ್ಲಿ ಮತ್ತು ನ್ಯಾಯವಾದ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತಿದ್ದೇನೆ ಅಷ್ಟೆ. ಈ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆ ಸಿದ್ಧಿಸುವುದಾಗಿದ್ದರೆ, ಅದು ಮೊದಲು ಮರೆನಾಡಿನಲ್ಲೇ ಏನಾ, ಮೈದಾನದಲ್ಲಲ್ಲಾ. ಆದ್ದರಿಂದ ತಾವು ಮರೆನಾಡಿನಲ್ಲಿರತಕ್ಕ ಕೆರೆಗಳನ್ನು ಮೊದಲು ಅಭಿವೃದ್ಧಿ ಮಾಡಿಸತಕ್ಕದ್ದು ಅತ್ಯಗತ್ಯ. ಹಾಗೆ ಮಾಡಿದಲ್ಲಿ ಅಲ್ಲಿ ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಆದರೆ ಮೈದಾನಪ್ರದೇಶದಲ್ಲಿರುವ ಕೆರೆಗಳನ್ನು ಜೀರ್ಣೋದ್ಧಾರ ಮಾಡಬಾರದೆಂದು ನನ್ನ ಅಭಿಪ್ರಾಯವಲ್ಲ. ಈ ಬಗ್ಗೆ ಮರೆನಾಡಿಗೆ ಹೆಚ್ಚು ಹಣ ಸಹಾಯಮಾಡಿ ಎಂದು ನಾನು ತಿಳಿಸುತ್ತೇನೆ.

ಈ ಸಂಬಂಧವಾಗಿ ಒಂದು ವಿಚಾರವನ್ನು ನಾನು ಈಗ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ಹೆಚ್ಚು ಆಹಾರ ಬೆಳೆಯಬೇಕಾಗಿದ್ದರೆ ನಮಗೆ ಇಂಜನಿಯರಿಂಗ್ ಇಲಾಖೆಯವರ ಸಹಾಯ ಅತ್ಯಗತ್ಯವಾಗಿರುತ್ತೆ. ಅದಿಲ್ಲದೆ ಇದನ್ನು ಅಭಿವೃದ್ಧಿಗೆ ತರಲು ಸಾಧ್ಯವೇ ಇಲ್ಲ. ಆದರೆ ಈಗ ಹಾಲೇ ಈ ಇಲಾಖೆಯವರು ಈ ಬಗ್ಗೆ ಏನೂ ಮುತವರ್ಜಿ ವಹಿಸಿ ಕೆಲಸ ಮಾಡುತ್ತಿಲ್ಲ. ಎಕ್ಸೆಕ್ಯೂಟಿವ್ ಅಸಿಸ್ಟೆಂಟ್ ಇಂಜನಿಯರ್‌ಗಳು ಯಾವ ಕೆರೆಗಳ ಜೀರ್ಣೋದ್ಧಾರ ಕಾರ್ಯದಲ್ಲೂ ಅಸಕ್ತಿ ವಹಿಸಿ ಬೇಗ ಬೇಗ ಕೆಲಸ

ಮಾಡುತ್ತಿಲ್ಲ. ಕೆಲಸ ಮಾಡಿದರೂ ಸಂಬಳ ಬರುತ್ತೆ, ಮಾಡದೆ ಇದ್ದರೂ ತನ್ನ ಸಂಬಳ ತನಗೆ ಬಂದೇ ಬರುತ್ತೆಂಬ ಭಾವನೆಯಿಂದ, ಹತ್ತಾರು ವರ್ಷಗಳ ಹಿಂದೆಯೇ ಆಗಬೇಕಾಗಿದ್ದ ಕೆಲಸಗಳು ಇನ್ನೂ ಹಾಗೇ ಮುಳುಗಿ ಬಿದ್ದಿರುತ್ತವೆ. ಅವರಲ್ಲೂ ಬಹಳ ಯೋಗ್ಯರಾದಂಥ ಕೆಲವು ಅಸಿಸ್ಟೆಂಟ್ ಇಂಜನಿಯರುಗಳಿದ್ದಾರೆ. ಆದರೆ ಇಂಥವರಿಗೆ ಸರಿಯಾದ ಉತ್ತೇಜನವಿಲ್ಲ. ಇವರ ಮೇಲೆ ಕೆಲಸಕ್ಕೆ ಬಾರದ ಇತರರು ಹೇಳುವ ಚಾಡಿ-ಕ್ಷುದ್ರಗಳಿಂದ, ಅವರು ತಮ್ಮ ಶ್ರದ್ಧೆಗೆ ತಕ್ಕಂತೆ ತಮ್ಮ ನೌಕರಿಯಲ್ಲಿ ಯಾವ ಉತ್ತೇಜನವೂ ದೊರೆಯದೆ, ಅನರ್ಹರಾದವರಿಗೇ ಪ್ರಮೋಷನ್ ಇತ್ಯಾದಿಗಳು ಸಿಕ್ಕುತ್ತಿರುವುದರಿಂದಲೂ, ಕೆಲಸ ಸರಾಗವಾಗಿ ನಡೆಯುವಂತಾಗಿದೆ. ತಾವು ಇಲ್ಲಿ ಎಷ್ಟು ಬರುಸಾಗಿ ಭಾಷಣಮಾಡಿ, ಆಹಾರ ಶಾಖಾ ಕಮಿಷನರು ಎಷ್ಟೇ ಬರುಸಾಗಿ ಪ್ರಚಾರ ಮಾಡಿಸಲಿ, ಅದರಿಂದೇನೂ ಆಹಾರ ಹೆಚ್ಚಾಗಿ ಬೆಳೆದಂತಾಗಲಿಲ್ಲ. ಈಗ ಈ ಆಹಾರ ಧಾನ್ಯಗಳನ್ನು ಬೆಳೆಯತಕ್ಕವರ ಪೈಕಿ ಬತ್ತ ಬೆಳೆಯುವಂಥ 'ಮಹಾ ಪಾಪಿಗಳು' ಬೇರೊಬ್ಬರಿಲ್ಲ. ಬತ್ತಕ್ಕೆ ಪರ್ಸಾಲ್ ಒಂದಕ್ಕೆ 20 ರೂಪಾಯಿ ಧಾರಣೆ ನಿಗದಿ ಮಾಡಿದ್ದೀರಿ. ಆದೇ ರೀತಿ ರಾಗಿಗೂ ಕೂಡ ಪರ್ಸಾಲ್‌ಕ್ಕೆ 20 ರೂಪಾಯಿಗಳನ್ನು ನಿಗದಿಮಾಡಿದ್ದೀರಿ. ಇವರೆಲ್ಲರಿಗಿಂತಲೂ ಆ ಕೊತ್ತಂಬರಿ ಬೆಳೆಯತಕ್ಕವನ ಜೀವನವೇ ಸಾವಿರ ಪಾಲಿಗೂ ರೇಸಾಗಿದೆ. ಒಂದು ಎಕರೆಗೆ ಆತನು 10 ಪಲ್ಲ ಬೆಳೆದರೆ ಸಾಕು, ಆತನಿಗೆ ಒಂದು ಸಾವಿರ ರೂಪಾಯಿ ಸಂಪಾದನೆ ಸಿಕ್ಕಿಬಿಡುತ್ತೆ. ಅದಕ್ಕೆ ಕಂಟ್ರೋಲಿಲ್ಲ, ಮತ್ತೊಂದಿಲ್ಲ, ಮಗದೊಂದಿಲ್ಲ. ಹೀಗಾಗಿ ತಾವು ಈ ಕಂಟ್ರೋಲ್ ಆಜ್ಞೆಗಳನ್ನು ತಂದು ರೈತಾಪಿ ಜನರನ್ನು ತಿರುವು—ಮುರುವು ಅಂದರೆ 'ತಲೆ ಕೆಳಕು' ಮಾಡಿಬಿಟ್ಟಿದ್ದೀರಿ. ಬುದ್ಧಿವಂತನಾದ ರೈತ ಹಣವಂತನಾದ, ಬಡರೈತ ಕೆಟ್ಟ. ಅಷ್ಟೇ ಈ ನಿಮ್ಮ ಕಂಟ್ರೋಲ್ ಆಜ್ಞೆಗಳಿಂದ ದೇಶಕ್ಕಾದ ಉಪಕಾರ. ಹೀಗಾಗಿ ಅನೇಕರು ಈಗ ತಮ್ಮ ಹೊಟ್ಟೆಬಟ್ಟೆಗೆ ಅವಶ್ಯಕವಾದ ರಾಗಿ ಇತ್ಯಾದಿ ಬೆಳೆಗಳನ್ನು ಬೆಳೆಯದೆ ಕೇವಲ ದುಡ್ಡಿನ ಮತ್ತು ಲಾಭದ ಬೆಳೆಗಳನ್ನೇ ಬೆಳೆಯಲು ಒಂದು ವಿಧವಾದ ಪ್ರೋತ್ಸಾಹ ಅವರಿಗೆ ಕಲ್ಪಿಸಿಕೊಟ್ಟಂತಾಗಿದೆ. ಅದರಿಂದಲೇ ಈಗ ಎಲ್ಲ ನೋಡಲು ಈ ಕಡಲೆಕಾಯಿ ಬೆಳೆಯು ತನ್ಮಯವಾಗಿ ಹೋಗಿದೆ. ಅದನ್ನು ಬೆಳೆಯುವವನು ಇಂದು ಹಣವಂತನಾಗಿಯೂ ಇದ್ದಾನೆ ಮತ್ತು ಬಹಳ ಮರುವಾಗಿಯೂ ಇದ್ದಾನೆ. ಆಹಾರ ಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದರೆ ಯಾರು ಕೇಳುತ್ತಾರೆ? ಅದು ಹೇಗೆ ಸಾಧ್ಯ?

Sri V. S. NARAYANA RAO.—Sri Tirumal Rao, Deputy Food Minister, has given a suggestion.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—I do not want to say anything about that now. ಕೇಂದ್ರ ಸರ್ಕಾರದವರು ಹೇಳಿರಬಹುದು. ಅವರು ಕೂಡ ಅದನ್ನು ಜಾರಿಗೆ ತಂದಿರಬಹುದು. ಆದರೆ ಅವರೂ ನಮ್ಮಂತೆ ಜನರು; ಅವರೇನೂ ದೇವರಲ್ಲ; ಅವರು ಹೇಳಿದ್ದನ್ನೆಲ್ಲಾ ದೇವರ ವಾಕ್ಯವೆಂದೇನೂ ನಾವು ಭಾವಿಸಬೇಕಾದ್ದಿಲ್ಲ. ಅವರೇನೋ ಈಗ ಬೆಲ್ಲಕ್ಕೆ ಕಂಟ್ರೋಲ್ ಹಾಕಿದ್ದಾರೆ. ಆದರೆ ಅವರು ಹೇಳಿದ ಮಾತ್ರಕ್ಕೇ ಇವತ್ತಿಗೆ ಇಲ್ಲಿಯೂ ಅದನ್ನು ಜಾರಿಗೆ ತರಬೇಕಾಗಿತ್ತು? ಅವರು ಇದರಂತೆ ನೀವೂ ನಿಮ್ಮಲ್ಲಿ ಜಾರಿಗೆ ತನ್ನಿ ಎಂದು ಹೇಳಿರಬಹುದು. ಅದಕ್ಕೆ ಇವರು ಅದನ್ನು ಜಾರಿಗೆ ತರತಕ್ಕ ಅವಶ್ಯಕತೆ ನಮಗಿಲ್ಲವೆಂದು ಹೇಳಬೇಕಾಗಿತ್ತು. ಇದನ್ನು ಜಾರಿಗೆ ತಂದಿರತಕ್ಕವರು ಯಾರೇ ಆಗಿರಲಿ, ಇಂದು ನಾನು ಹೇಳುತ್ತಿರುವುದರ ಮಹತ್ವ ಅವರಿಗೆ ಇಂದಲ್ಲಾ ಇನ್ನು 10 ವರ್ಷಗಳ ಮೇಲಾದರೂ ಗೆ ತಾಗೇ ಆಗುತ್ತದೆ. ಈ ಬಗ್ಗೆ ತಾವೇನಾದರೂ ಇದು ಮಾನ್ಯ ಮುನ್ಷಿಯವರಿಂದ ಬಂದಿರುವ ಕಾರಣ, ಅದರ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಬೇಕೆಂದು ಭಾವಿಸಿರಬಹುದು. ಅದರೆ ನಾನಂತೂ ಈ ಬಗ್ಗೆ ಅವರಿಗೆ ಖಂಡಿತ ನನ್ನ ಸಂತೋಷವನ್ನು ವ್ಯಕ್ತಪಡಿಸಲಾರೆ. ಈ ವಿಚಾರ ನಿಮಗೂ ಅವರಿಗೂ ಮುಂದೆ ಗೊತ್ತಾಗುತ್ತದೆ.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ) —ಸ್ವಾಮಿ, ಈ ದಿವಸ ನಡೆಯುತ್ತಿರುವ ಭಾಷಣಗಳೆಲ್ಲವೂ ಕೂಡ ಏಕೋ ಕೊಂಚ ಭಾವೋದ್ರೇಕಗಳಿಂದ ಕೂಡಿರುವಂತೆ ತೋರುತ್ತಿದೆ. ಹೀಗೊಂದು ಭಾವೋದ್ರೇಕಪೂರಿತವಾದ ಭಾಷಣಗಳನ್ನು ಮಾಡಿದ ಮಾತ್ರದಿಂದಲೇ ಈ ಆಹಾರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವೆಂದು ಅವರು ಭಾವಿಸಿರುವಂತೆ ನನಗೆ ಹೊಳೆಯುತ್ತಿದೆ. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿರುತ್ತೆ. ಈ ವಾದ ಸರಣಿ ಹೇಗಿದೆಯೆಂದರೆ—ಯುದ್ಧ ಭೂಮಿಯಲ್ಲಿ ಅಪಘಾತಕ್ಕೊಳಗಾಗಿ ಹೆದರಿಹೋಗಿರುವ ಮನುಷ್ಯ, ಹಿಂದೂಮುಂದೂ ಆಲೋಚನೆ ಮಾಡದೆ, ತನ್ನ ಎದುರು ಸೈನ್ಯದ ಪೆರೇಲೆ, ತನ್ನ ಕೋಪೋದ್ರೇಕ ಭಾವದಿಂದ ಬಿದ್ದಂತೆ ಆಗಿದೆ. ಅಂದರೆ ಆತನು ಹಾಗೆ ತನ್ನ ಕೇವಲ ಒಂದು ಕೋಪೋದ್ರೇಕ ಭಾವದಿಂದ ಹಾಗೆ ಎದುರು ಸೈನ್ಯದ ಮೇಲೆ ಬಿದ್ದುದರಿಂದ, ಆತನಿಗೆ ಜಯ ಲಭಿಸೀತೇನು? ಖಂಡಿತ ಇಲ್ಲ. ಆದರೆ ಆತನು ತನ್ನ ಜಯವನ್ನು ತಾನು ಹೊಂದಲೇಬೇಕಾಗಿದ್ದರೆ, ತಾನು ಎಲ್ಲಾ ಪರಿಸ್ಥಿತಿಗಳನ್ನೂ ಕೂಲಂಕಷವಾಗಿ ಗಮನಿಸಿ, ಸಮಯ ನೇಳೆಗಳನ್ನು ಕಾದು ಕೆಲಸಮಾಡಬೇಕಾದ್ದು ಉಚಿತ. ಆದುದರಿಂದ ಹೀಗೆ ಒಂದು ಭಾವೋದ್ರೇಕದಿಂದ ಭಾಷಣ ಮಾಡಿದ್ದರಿಂದೇನೂ ಪ್ರಯೋಜನವಾಗಲಾರದೆಂದು ನಾನು ಸೂಚಿಸಬೇಕಾಗಿದೆ.

ಈಗ ನಮ್ಮ ದೇಶದಲ್ಲಿರತಕ್ಕ 80 ಲಕ್ಷ ಜನಸಂಖ್ಯೆಯಲ್ಲಿ ಸುಮಾರು 60 ಲಕ್ಷ ಜನರು ಈ ಆಹಾರ ಸಾಮಗ್ರಿಗಳನ್ನು ಬೆಳೆಯದೆ ಬೇರೆ ಉದ್ಯೋಗಗಳಲ್ಲಿದ್ದುಕೊಂಡು ತಮ್ಮ ಹೊಟ್ಟೆ ಹೊರೆಯುತ್ತಿರುವುದಾಗಿ ಈಗತಾನೆ ಮಾನ್ಯ ಆಹಾರ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಅಂದಮೇಲೆ ದೇಶದಲ್ಲರತಕ್ಕ ಜನಸಂಖ್ಯೆಯಲ್ಲಿ ನಾಲ್ಕನೆಯ ಒಂದು ಭಾಗದ ಜನರು ಬೆಳೆದಂಥ ದವಸಧಾನ್ಯಗಳನ್ನು ನಂಬಿ ದೇಶದಲ್ಲರುವ ನಾಲ್ಕರಲ್ಲಿ ಮೂರು ಪಾಲು ಜೀವನಮಾಡಬೇಕಾಗಿದೆ. ಅಂದಮೇಲೆ ಈ ಹೆಚ್ಚು ಆಹಾರ ಬೆಳೆಯಬೇಕೆಂಬುದು ಎಷ್ಟರಮಟ್ಟಿಗೆ ಮುಂಜಾವರಿದಿದೆಯೆಂಬುದು ತಾನೇ ಗೊತ್ತಾಗುತ್ತದೆ. ಪರಿಸ್ಥಿತಿ ಹೀಗಾಗಿ ಕೆಲಸ ಮಾಡತಕ್ಕ ಜನರೆಲ್ಲರೂ ಬಂದು ಪಟ್ಟಣ ಸೇರುತ್ತಿರುವಾಗ ಸುಮ್ಮನೆ ನಾವು ಸರ್ಕಾರದವರನ್ನು ದೂಷಿಸಿದ್ದರಿಂದೇನು ಪ್ರಯೋಜನ? ಆದರೆ ಎಷ್ಟೊಪ್ಪು ಜನರು ಈ ಭಾಗದಲ್ಲಿ ಹಿಂದೆಲ್ಲ ಮುತವರ್ಜಿವಹಿಸಿ ವ್ಯವಸಾಯ ನಡೆಸುತ್ತಿದ್ದರೋ ಈಗ ಅದಕ್ಕಿಂತಲೂ ಹೆಚ್ಚು ಸಂಖ್ಯೆ ಜನರು ಈ ಕೆಲಸದಲ್ಲಿ ಕಾರ್ಯೋನ್ಮುಖರಾಗದಿದ್ದರೆ ಈ ಅಭಾವ ನಮಗೆ ಎಂದಿಗೂ ಕೊನೆಗಾಣುವುದಿಲ್ಲ. ಹೀಗೆಲ್ಲಾ ಜನರು ಈ ಕಡೆಯನ್ನೇ ಬಹಳ ಆಲಕ್ಷ್ಯಮಾಡಿದ್ದರಿಂದ ವ್ಯವಸಾಯ ಮಾಡುತ್ತಿದ್ದ ಜಮೀನೇ ಆದೆಷ್ಟೋ ಲಕ್ಷ ಎಕರೆ ಪಾಳು ಬಿದ್ದಿದೆಯೆಂದು ಆಗಲೇ ತಿಳಿಸಿದರು. ಸರ್ಕಾರದವರು

(*ಶ್ರೀ ಎ. ಭೀಮಪ್ಪನಾಯಕರು.)

ಈ ಬಗ್ಗೆ ಏನಾದರೂ ಕಾರ್ಯಕ್ರಮ ಕೈಗೊಂದರೆ ಈ ಬಂಜರ್ ಭೂಮಿಗಳಲ್ಲಿ ವ್ಯವಸಾಯಕ್ಕೆ ಅನುಕೂಲ ಪಡಿಸಲು ಅವರು ಪ್ರಯತ್ನಪಟ್ಟರೆ, ಅದಕ್ಕೂ ಮಾನ್ಯ ಸದಸ್ಯರು ತಕರಾರು ಒಡ್ಡಿ, ಈಗ ಅದೇ ಮಾನ್ಯ ಸದಸ್ಯರು ಈ ಸಂಬಂಧವಾಗಿ, 'ನೀವೇಕೆ ಕಾರ್ಯಕ್ರಮ ಕೈಗೆತ್ತಿಕೊಳ್ಳಲಿಲ್ಲ' ಎಂದು ಟೀಕೆ ಮಾಡುತ್ತಿರುವುದು ಒಂದಕ್ಕೊಂದು ತೀರಾ ಅಸಮಂಜಸವಾಗಿವೆ. ಹೀಗೆ ಮಾನ್ಯ ಸದಸ್ಯರು ಮಾಡಿರತಕ್ಕ ಭಾಷಣಗಳು ಒಂದುಕಡೆ hot ಆಗಿದ್ದರೆ ಮತ್ತೊಂದು ಕಡೆ cold ಆಗಿದೆ. ಹೀಗೆ ಅವರು ಒಂದೇ ಸಂದರ್ಭದಲ್ಲಿ hot & cold ಆಗಿ ವಾದ ಮಾಡಿದ್ದಾರೆ. ಅದೇ ರೀತಿ ಮಾನ್ಯ ಹನೀಫ್ ರವರೂ ಕೂಡ ವಾದಿಸಿದ್ದಾರೆ "Gross misuse of public fuuds" ಆ ಅರ್ಥವೆಲ್ಲ ಶಬ್ದಗಳಲ್ಲಿ ಅಡಕವಾಗಿರುತ್ತದೆ. ಆದರೆ ಆ ರೀತಿಯಾಗಿ ಹಣ ನಮ್ಮನೆ ದುರ್ವಿನಿಯೋಗವಾಗಿ ಹೋಗುತ್ತಿದೆಯೆಂದು ಯಾರೂ ಭಾವಿಸುವಾರದು. ಒಂದು ಕೆರೆ ಕಟ್ಟಿಸಿದರೆ, ಒಂದು ಬಾವಿ ತೆಗೆಸಿದರೆ, ಒಂದು ವಿದ್ಯುಚ್ಛಕ್ತಿ ಶಕ್ತಿ ತಯಾರುಮಾಡಿಸಿಕೊಟ್ಟರೆ, ಅದರಿಂದ ಕ್ರಮೇಣ 'ಈ ಹೆಚ್ಚು ಆಹಾರ ಬೆಳೆಯಬೇಕೆಂಬ' ಯೋಜನೆಗೆ ಸಹಾಯವಾಗಿಯೇ ಆಗುತ್ತೆ. ಆದರೆ ಮಗು ಹುಟ್ಟಿದ 3 ವರ್ಷದಲ್ಲೇ, ಅದು 4 ಮಕ್ಕಳನ್ನು ಹುಟ್ಟಿಸಿ, ಅವರನ್ನೆಲ್ಲಾ ದುಡಿಯಲಿಕ್ಕೆ, ಬೇಸಾಯ ಮಾಡಲಿಕ್ಕೆ ಕಳುಹಿಸಿ ಕೊಡಬೇಕಾಗಿತ್ತೆಂದು ಹೇಳಿದ ರೀತಿ ವಾದ ಮಾಡಿದ್ದಾರೆ. ಹಾಗೆ ಹೇಳುವುದಕ್ಕೂ, ಕೇಳುವುದಕ್ಕೂ ಒಂದು ಅವಧಿ ಬೇಡವೇ? ತಕ್ಷಣ ಕಾಲಾವಕಾಶ ಎಲ್ಲದೆ ಬೆಳಗ್ಗೆ ಬಿತ್ತಿದರೆ, ಸಾಯಂಕಾಲಕ್ಕೆ ಫಲ ಬರುವುದಿಲ್ಲ. ಈ ಅಂಶವನ್ನು ನಾವು ಮರೆಯಬಾರದು. ಈ ಆಹಾರ ಪಡಿತರದಲ್ಲೇ ಜೀವನ ಜರುಗಿಸಬೇಕೆಂಬ ಆಸೆ ಆಕಾಂಕ್ಷೆಗಳು ಯಾರಿಗೂ ಇಲ್ಲ. ಈ ರಂಪು ರೇಜಿಗೆಗಳನ್ನೆಲ್ಲಾ ಸರ್ಕಾರದವರು ತಮ್ಮ ತಲೆಗೆ ಹಚ್ಚಿಕೊಂಡು, ಈ ಒಂದು ದೊಡ್ಡ ಜವಾಬ್ದಾರಿಯನ್ನು. ಸಾರ್ವಜನಿಕರಿಗೆ ನಾವು ಆಹಾರ ಒದಗಿಸುತ್ತೇವೆಂಬ ಒಂದು ದೊಡ್ಡ ಪ ಹತ್ಕಾರ್ಯಕ್ಕೆ ನಿಷ್ಕಾರಣವಾಗಿ ಯಾರೂ ಅಸೆಪಡುವುದಿಲ್ಲ. ಹಾಗೆ ಮಾಡಲಿಕ್ಕೆ ಅವರಿಗೆ ಹುಚ್ಚೇನೂ ಹಿಡಿದಿಲ್ಲ. ಈ ಬಗ್ಗೆ ಅವರು ಜವಾಬ್ದಾರಿ ವಹಿಸಿದ್ದಾರೆ—ನಾವು ವಹಿಸಿಲ್ಲ. ಇಷ್ಟೇ ಅವರಿಗೂ, ನಮಗೂ ಇರಲ್ಲರತಕ್ಕ ವ್ಯತ್ಯಾಸ. ಹೀಗೆ 80 ಲಕ್ಷ ಜನಸಂಖ್ಯೆಯಲ್ಲಿ 60 ಲಕ್ಷ ಜನಸಂಖ್ಯೆ ಕೇವಲ ಕೊಂಡು ತಿನ್ನುತ್ತಿರುವ ಸಂದರ್ಭದಲ್ಲಿ ಏಕಾಏಕಿಯಾಗಿ ಇದನ್ನು ತೆಗೆದುಹಾಕಬೇಕೆಂದರೆ ಹೇಗೆ ಸಾಧ್ಯ? ಅದಕ್ಕೂ ಬಹಳ ಆಲೋಚನೆಮಾಡತಕ್ಕದ್ದಿದೆ. ಹಾಗೇನಾದರೂ ಅವರು ಏಕದಂ ಇದನ್ನು ತೆಗೆದುಬಿಟ್ಟು, ಅದರಿಂದೇನಾದರೂ ಅನಾನುಕೂಲವಾದರೆ ಆಗಲೂ ನೀವೇ ಪುನಃ ಟೀಕೆಗೂ ಅವಕಾಶಮಾಡಿಕೊಳ್ಳುತ್ತೀರಿ. ಹೀಗೆ ತೆಗೆಯುವುದಕ್ಕೂ ಕೂಡ ಒಂದು ನಿರ್ದಿಷ್ಟವಾದ ಕಾಲ ಬೇಕೇ ಬೇಕು.

ಹಿಂದೆ ಇದೇ ರೀತಿ ಒಂದಾವರ್ತಿ ಬಟ್ಟೆಯ ಮೇಲೆ ಕಂಟ್ರೋಲ್ ಅನ್ನು ಜನರ ಒತ್ತಾಯಕ್ಕಾಗಿ ತೆಗೆದು ಹಾಕಿದನಂತರ, ಜನರಿಗೆ ಬಟ್ಟೆಯೇ ಸಿಕ್ಕದಂತಾಗಿ ಸಿಕ್ಕಿದರೂ ಒಂದಕ್ಕೆ ನಾಲ್ಕು ಐದರಷ್ಟು ಹೆಚ್ಚು ಬೆಲೆ ಕೊಡಬೇಕಾದ ಸಂದರ್ಭಗಳೊದಗಿ, ಆಗ ಪುನಃ ಬಟ್ಟೆಗೆ ಕಂಟ್ರೋಲ್ ಹಾಕಬೇಕಾಗಿ ಬಂದ ಪ್ರಸಂಗ ತಮ್ಮೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಹೀಗೆ ಅರೋಚನೆ ಮಾಡದೆ ಕಂಟ್ರೋಲ್‌ಗಳನ್ನು ಏಕ್‌ದಂ ತೆಗೆದು ಬಿಟ್ಟಾಗಲೂ ದೇಶದಲ್ಲಿ ಬಹಳ ಅನಾಹುತಗಳಾಗುವ ಸಂಭವ ಉಂಟು. ಈಗ ಜನರಾದರೋ ಕೇವಲ ರಾಗಿ ದಾಯಕವಾದ ಬೆಳೆಗಳನ್ನೇ ಬೆಳೆಯಲು ಪ್ರಾರಂಭ ಮಾಡಿದ್ದರಿಂದ ಆಹಾರದ ಅಭಾವಕ್ಕೆಂದೇ ಕಾರಣವಾಗಲಿಲ್ಲ, ಆ ಹತ್ತಿ, ಬೆಳೆ ಸಹ ಸಾಕಷ್ಟಿಲ್ಲದ ಹೋಗಿ ಈಗ ಅದರ ಬೆಲೆ ಮಣ ಒಂದಕ್ಕೆ 28—30 ರೂಪಾಯಿಗಳ ತನಕ ಏರಿಹೋಗಿದೆ. ಹಾಗೂ ಒಂದುವೇಳೆ ಈಗ ಕಡಲೆಯಕಾಯಿ ಧಾರಣೆ ಹೆಚ್ಚಾಗಿದೆ. ಅದರಿಂದ ರೈತರೆಲ್ಲರೂ ಕೇವಲ ಈ ಒಂದು ಬೆಳೆಯನ್ನೇ ವಿಶೇಷವಾಗಿ ಬೆಳೆಯುತ್ತಿರುವುದರಿಂದ, ಈಗ ಅದಕ್ಕೂ ಪ್ರತಿಬಂಧಕ ಹಾಕೋಣವೆಂದರೆ ನಾಳೆ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಆ ಕಡಲೆಕಾಯಿ ಎಣ್ಣೆಯೇ ಸಿಕ್ಕದಂತಾಗಿ ಹೋದರೆ ಆಗ ನಮ್ಮ ಗತಿಯೇನು? ಆದ್ದರಿಂದ ನಾವು ಕಡಲೆಕಾಯಿಯನ್ನೂ ಬೆಳೆಯಬೇಕು, ಹತ್ತಿಯನ್ನೂ ಬೆಳೆಯಬೇಕು. ಇದರ ಜೊತೆಗೆ ಆಹಾರ ಧಾನ್ಯಗಳಂತೂ ಕೇವಲ ಅವಶ್ಯಕ.

ಆ ಮೇರೆ ಡಾಲರ್ ಸಮಸ್ಯೆ ಬೇರೆ ಇದೆ. ಬಂಗಾರವನ್ನು ಎಲ್ಲೋ ತೆಗೆದುಕೊಂಡು ಹೋಗಿ ಯಾರೋ ಶೇಖರಿಸಿರುವುದರಿಂದ ಡಾಲರ್ ಸಮಸ್ಯೆ ಕಠಿಣವಾಗಿದೆ. ಮೊದಲೇ ಹೇಳಿದ ಹಾಗೆ ವ್ಯವಸಾಯವೇ ಮುಖ್ಯ ಕಸುಬಾಗಿರುವುದರಿಂದ ನಮ್ಮ ದೇಶವನ್ನು ವ್ಯವಸಾಯ ದೇಶವೆಂದು ಹೇಳಿದರೂ ಈ ದಿವಸ ನಮ್ಮ ಜೀವನಕ್ಕೆ ಸಾಕಾಗುವಷ್ಟು ದವಸ ಕೂಡ ನಮ್ಮಲ್ಲಿ ಬೆಳೆಯುವುದಿಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕೈಗಾರಿಕೆಯನ್ನು ಬೆಳೆಯಬೇಕು, ದೇಶದಲ್ಲಿ ಆರ್ಥಿಕಾಭಿವೃದ್ಧಿಯಾಗಬೇಕು ಎಂದು ಹೇಳುತ್ತಾರೆ. ಹೀಗೆ ಆಗಬೇಕಾದರೆ ಬೇಕಾದಷ್ಟು ಹಣ ಬೇಕು; ಹೊರಗಿನಿಂದ ಸಾಮಾನು ಬರಬೇಕು. ನಮ್ಮಲ್ಲಿ ಬೇಕಾದ ಸಾಮಾನು ತಯಾರಾಗುವುದಿಲ್ಲ. ಇದೆಲ್ಲಾ ಆಗಬೇಕಾದರೆ ವಿಶೇಷ ಪ್ರಯತ್ನ ನಡೆಯಬೇಕು. ಆಹಾರಧಾನ್ಯವನ್ನು ಸಾಕಷ್ಟು ಬೆಳೆದೇ ತೀರಬೇಕು. ಹೀಗೆ ನಾನಾ ವಿಧವಾದ ಕಷ್ಟಗಳು ಹೆಚ್ಚಿವೆ. ಸರ್ಕಾರದವರು ಎಲ್ಲಾ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ನಿಜವಾಗಿಯೂ ಆ ವಿಚಾರದಲ್ಲಿ ನಮ್ಮ ಸರ್ಕಾರಕ್ಕೆ ಸಂಪೂರ್ಣ ಸಹಾನುಭೂತಿಯಿದೆ. ಅವರಿಗೆ ಬೆಂಬಲ ಕೊಡುವುದಕ್ಕೆ ಬದಲಾಗಿ "ಸರ್ಕಾರಿ ಅಧಿಕಾರಿಗಳೆಲ್ಲರೂ ಲಂಚಕೋರರು, ನಾವು ಮಾತ್ರ ಸತ್ಯವಂತರು" ಎಂದು ಹೇಳುವವರು ಎದೆ ಮುಟ್ಟಿ ಒಂದು ಸಲ ನೋಡಿಕೊಳ್ಳಬೇಕು. ಹಾಗೆ ಮಾಡಬಾರದು. ತಪ್ಪು ಮಾಡಿದವರಿಗೆ ಕಾನೂನು ಪ್ರಕಾರ ಶಿಕ್ಷೆಯಾಗುತ್ತಿದೆ. ಶ್ರೀ ಚನ್ನಬಸಪ್ಪನವರು ಈ ದಿವಸ ಕುಮಾರಪಾರ್ಕಿನಲ್ಲಿ ಊಟಮಾಡುತ್ತಿದ್ದಾರೆ. ಅವರು ಅಲ್ಲಿ 9 ಮಿನ್ನಿನ ಮೇರೆ ಊಟಮಾಡುವುದಿಲ್ಲವೆಂದು ಹೇಳಿದರೆ ಚೆನ್ನಾಗಿರುತ್ತದೆ.

Sri H. M. CHANNABASAPPA.—I am always eating to my satisfaction. I never asked for the removal of control measures.

ಶ್ರೀ ಎ. ಭೀಮಪ್ಪನಾಯಕರು.—ಒಂದು ನಿರ್ದಿಷ್ಟ ತೀರ್ಮಾನ ಮಾಡೋಣ ಸಭ್ಯವಾದುದ್ದು ಜಾಗ್ರತೆ ಆಹಾರದ ಹತೋಟಿ ಹೋಗಬೇಕು. ಯಾವುದಾದರೂ ಒಂದು ಕಾಲಾವಧಿಯೊಳಗಾಗಿ ಹತೋಟಿ ಹೋಗಬೇಕು ಎಂದು ಪ್ರಯತ್ನ ಮಾಡೋಣ ಆ ಮಧ್ಯೆ ಜನರಿಗೆ ಅನುಕೂಲವಾಗುವ ಕೆಲವು ವ್ಯವಸ್ಥೆ ಕೈಕೊಳ್ಳಬೇಕೆಂದು ಹೇಳೋಣ. ಹಿಂದೆ ಮಾಡಿದ ಒಂದು ವ್ಯವಸ್ಥೆಯಿಂದ ಸ್ವಲ್ಪಮಟ್ಟಿಗೆ ಜನರಿಗೆ ಅನುಕೂಲವಾಯಿತು. ಹಳ್ಳಿಯಲ್ಲಿ ಸಿಕ್ಕದೇ ಇರುವವರಿಗೆ ಸಿಕ್ಕುವಂಥ ಏರ್ಪಾಡು ಮಾಡಬೇಕು ಎಂದು ಶ್ರೀ ಬೋರಣ್ಣಗೌಡರು ಹೇಳಿ

ದರು. ಅದಕ್ಕೆ ಅವಕಾಶ ಮಾಡಬೇಕು. ಎಲ್ಲಿಯವರೆಗೆ ನಮ್ಮ ನೈತಿಕ ಮಟ್ಟವು ಪತನವಾಗಿರುತ್ತದೆಯೋ ಅಲ್ಲಿಯವರೆಗೆ ಕಾಳಸಂತೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ. ಕೊಳ್ಳುವವರು ಮತ್ತು ಕೊಳ್ಳುವವರಲ್ಲದೇ ಇರುವವರು ಅಂದರೆ ಮಾರುವವರು ಕಾಳಸಂತೆ ಮಾಡುತ್ತಲಿಲ್ಲ. ಬರೀ ವರ್ತಕರನ್ನು ಕೆಲವು ಬೈದರು. ಆದರೆ ಅದೆಲ್ಲಾ ಜನತೆಗೆ ಸೇರಿದ್ದು. ಜನತೆ ಒಂದು ನಿರ್ದಿಷ್ಟವಾ ನೀತಿಯನ್ನು ಅನುಸರಿಸಬೇಕು. ಹೊಸನೀತಿಯನ್ನನುಸರಿಸಿ ಹೊಸ ಜನಾಂಗವನ್ನು ನಾವು ತಯಾರಿಸಬೇಕಾಗಿದೆ. ಏನೇ ಆಗಲಿ ಕಾಳಸಂತೆಯಲ್ಲಿ ಕೊಳ್ಳುವುದಿಲ್ಲ ಮತ್ತು ಮಾರುವುದಿಲ್ಲ ಎಂಬ ನೀತಿಯನ್ನು ಅನುಸರಿಸಬೇಕು. ಅದು ಆಗುವವರೆಗೆ ಕಾಳಸಂತೆ ತಪ್ಪಿ ಜನತೆಯು ಉದ್ಧಾರವಾಗುವುದಿಲ್ಲ. ಆ ದೃಷ್ಟಿಯಿಂದ ಸಾಧ್ಯವಾದ ಮಟ್ಟಿಗೆ ಪ್ರಯತ್ನಮಾಡಿ ಕಾಳಸಂತೆಯನ್ನು ನಿಲ್ಲಿಸಬೇಕು. ಹೆಚ್ಚು ಧಾನ್ಯ ಒಂದು ಕಡೆ ಇರುವುದು ಸರಿಯಲ್ಲ. ಹಾಗೆ ಹೆಚ್ಚಾಗಿರುವ ಪ್ರಾಂತದಲ್ಲಿ ಒತ್ತಾಯಮಾಡಿ ಎಷ್ಟು ಅವರಿಗೆ ಬಿಡಬೇಕೋ ಅಷ್ಟನ್ನು ಮಾತ್ರ ಬಿಡುತ್ತಿಲ್ಲ ರಾಜಾಸ್ಥಾನ, ಉತ್ತರ ಪ್ರದೇಶ (U. P.), ಮಧ್ಯ ಪ್ರದೇಶ (C. P.) ಮುಂತಾದ ಕಡೆಗಳಲ್ಲಿ ಹೆಚ್ಚು ಆಹಾರ ಧಾನ್ಯವಿದ್ದರೂ ಅಲ್ಲಿ ಒತ್ತಾಯಮಾಡಿ ಅದನ್ನು ಅವರಿಂದ ತೆಗೆದುಕೊಳ್ಳುತ್ತಿಲ್ಲ. ಇದನ್ನೆಲ್ಲಾ ಇಂಡಿಯಾ ಸರ್ಕಾರದವರು ಮಾಡಬೇಕೆ ದು ತಿಳಿಸಬೇಕು. ಹಾಗೆ ಮಾಡದೇ ಹೋದರೆ ಅವರಿಗೆ ಶಕ್ತಿಯಿದ್ದರೆ ಹತೋಟಿಯನ್ನು ಮುಂದುವರಿಸಿ ಧಾನ್ಯವನ್ನು ಸರಬರಾಯಿ ಮಾಡಲಿ. ಇಲ್ಲದಿದ್ದರೆ ನಮ್ಮಿಂದ ಶಕ್ತಿಯಲ್ಲಿ ನಾವು ಏನು ಬೇಕಾದರೂ ಮಾಡಿಕೊಳ್ಳಲು ಅವಕಾಶ ಕೊಡಲಿ. ಅದಕ್ಕೆ ಅಡ್ಡಿಮಾಡಬಾರದು ಎಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಪ್ರತಿಯೊಂದು ಸಣ್ಣ ವಿಚಾರದಲ್ಲೂ ಇಂಡಿಯಾ ಸರ್ಕಾರದವರು ಕೈ ಹಾಕುವುದಾದರೆ ಎಲ್ಲಾ ಜವಾಬ್ದಾರಿಯನ್ನೂ ಅವರೇ ಹೊತ್ತುಕೊಳ್ಳಬೇಕು, ಹೆಚ್ಚು ಆಹಾರ ಧಾನ್ಯವನ್ನು ಕೊಡಬೇಕು. ಹಾಗಿಲ್ಲದೆ ನಮಗೆ ಬೇಕಾಗಿರುವ 70—80 ಟಿ ಧಾನ್ಯವನ್ನು ಕೊಡುವುದಿಲ್ಲವೆಂದು ಅವರು ಹೇಳಿದರೆ ಅದು ವಿಷಾದಕರ. ಒಂದು ಲಕ್ಷ 40 ಸಾವಿರ ಟಿ ಬೇಕೆಂದು ಕೇಳಿದ್ದಕ್ಕೆ ಕೇವಲ 75 ಸಾವಿರ ಟಿ ಮಾತ್ರ ಕೊಡುವುದಕ್ಕೆ ಒಪ್ಪಿದ್ದಾರೆ ಅದ್ದರಿಂದ ಇನ್ನೂ 75 ಸಾವಿರ ಟಿ ಕೊಡಬೇಕು. ಇಲ್ಲದಿದ್ದರೆ ನಮ್ಮ ದೇಶಕ್ಕೆ ಬಹಳ ತೊಂದರೆ ಎಂದು ಇಂಡಿಯಾ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ Service at cost ವಿಷಯ. ಅದನ್ನು ಎಷ್ಟು ಜಾಗ್ರತೆ ತೀರ್ಮಾನಮಾಡಿದರೆ ಆರ್ಥಿಕ ಪರಿಸ್ಥಿತಿ ಅಷ್ಟು ಜಾಗ್ರತೆ ಉತ್ತಮವಾಗುತ್ತದೆ. ಈಗಾಗಲೆ ನಮ್ಮ ದೇಶದಲ್ಲಾಗಬೇಕಾಗಿರುವ ಅನೇಕ ಕೆಲಸ ಕಾರ್ಯಗಳಿಗೆ ದುಡ್ಡೇ ಇಲ್ಲ. ಬೆಳಗಾದರೆ ಬೆರೆ ಹೆಚ್ಚಿಸಿಕೊಳ್ಳಲು ಅನುಕೂಲವಿಲ್ಲದಿರುವವರಿಗೆ ತೊಂದರೆ ಪಡಿಸುವುದು ನ್ಯಾಯವಲ್ಲ. ಕೊಳ್ಳುವವರಿಗೆ ಸಹಾಯ ಮಾಡಬೇಕು. ಬೆರೆ ಜಾಸ್ತಿಯಾಯಿತೆಂದು ಕೆಲಗು ಬರುವುದಕ್ಕೆ ಅವಕಾಶಕೊಡಬಾರದು. ಅದಕ್ಕೆ ಯಾವ ಬೆರೆಗೆ ಸರ್ಕಾರ ಕೊಳ್ಳುತ್ತದೆಯೋ ಅದೇ ಬೆರೆಗೆ ಮಾರುವಂತೆ ಏರ್ಪಾಡು ಮಾಡಬೇಕು. ಇಂಡಿಯಾ ಸರ್ಕಾರದವರು ಹೊರದೇಶದಿಂದ ಬರುವುದಕ್ಕೆ ಸಬ್ಸಿಡಿ ಕೊಡುತ್ತಿದ್ದಾರೆ. ಆ ಸಬ್ಸಿಡಿ ಮಾತ್ರ ಸಾಕು. ಆದರ ಜೊತೆಗೆ ಮೈಸೂರು ಸರ್ಕಾರದವರು ಸಬ್ಸಿಡಿ ಕೊಡುವುದು ಬೇಡ. ಇಡೀ ಇಂಡಿಯಾದ ಯಾವ ಪ್ರಾಂತದಲ್ಲೂ ಕೂಡ ಆಯಾ ಪ್ರಾಂತ ಸರ್ಕಾರ ಸಬ್ಸಿಡಿ ಕೊಡುವುದಿಲ್ಲ. ಹಾಗಿರುವಾಗ ಮೈಸೂರು ಸರ್ಕಾರದವರೇಕೆ ಅದನ್ನು ಕೊಡಬೇಕು? ಶ್ರೀ ಚಿನ್ನಬಸಪ್ಪನವರು ಬಹು ದಿವಸಗಳಿಂದ ಈ ವಿಚಾರದಲ್ಲಿ ಹೇಳಿರುವುದನ್ನು ನಿಜವಾಗಿಯೂ ಒಪ್ಪಬೇಕು. ಆದರೆ ಎಲ್ಲರೂ ಲಂಡ ಕೋರರೆಂದು ಹೇಳುವ ಹಾಗಿಲ್ಲ. ಅವರು ಯಾವುದು ನ್ಯಾಯ ಎಂದು ಹೇಳುತ್ತಾರೋ ಅದು ನನಗೂ ನ್ಯಾಯವೆಂದು ಕಂಡರೆ ನ್ಯಾಯ ಎಂದು ನಾನೂ ಹೇಳುತ್ತೇನೆ. ಅದನ್ನು ಅನುಸರಿಸಲು ಒಪ್ಪುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ

*ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).— ಸ್ವಾಮಿ, ಈ ಪ್ರಶ್ನೆ ವಿಶ್ವದ ಪ್ರಶ್ನೆ ಎಂಬುದು ಈಗಾಗಲೇ ಸರ್ವರಿಗೂ ವಿದಿತವಾಗಿದೆ. ಇಂಥ ಪ್ರಶ್ನೆಯನ್ನು ಮಾನ್ಯ ಆಹಾರ ಮಂತ್ರಿಗಳು ನಮ್ಮ ಮುಂದಿಟ್ಟಿರುವುದಕ್ಕೆ ಬಹಳ ಸಂತೋಷಪಡುತ್ತೇನೆ. ಅಲ್ಲದೆ ಇದೇ ಸಂದರ್ಭದಲ್ಲಿ ನಮ್ಮ ಮಾನ್ಯ ಸ್ನೇಹಿತರು ತಿದ್ದುಪಡಿಯನ್ನು ಕೂಡ ಮಂಡಿಸಿದರು. ಅದಕ್ಕಾಗಿ ಅವರಿಗೆ ಅಭಿನಂದಿಸಬೇಕಾಗಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಇದರ ಮೇಲೆ ಎಲ್ಲರೂ ಮಾತನಾಡಬಹುದೆಂದು ಅವಕಾಶವಿದ್ದರೂ ಕೂಡ ಕೇವಲ ಎರಡು ಮೂರು ಗಂಟೆಗಳ ಅವಕಾಶ ಮಾತ್ರ ಕೊಟ್ಟು, ಕೆಲವರು ಇಷ್ಟು ನಿಮಿಷದಲ್ಲೇ ಮಾತನಾಡಬೇಕೆಂದು ಹೇಳಿರುವುದು ಸ್ವಲ್ಪ ವಿಷಾದಕರ. ಹಿಂದೆ ಈ ಪ್ರಶ್ನೆಯನ್ನು ಒಂದೆರಡು ದಿವಸವಾದರೂ ದೀರ್ಘವಾಗಿ ಯೋಚನೆ ಮಾಡುತ್ತಿದ್ದೆವು. ಸಂಕ್ಷಿಪ್ತಕ್ಕೆ ಅವಕಾಶವಿಲ್ಲ. ಇದು ಒಂದು ಮುಖ್ಯ ಪ್ರಶ್ನೆಯಾದ್ದರಿಂದ ಹೆಚ್ಚು ಅವಕಾಶ ಕೊಟ್ಟರೆ ನಮ್ಮ ಅಭಿಪ್ರಾಯಗಳನ್ನು ವಿಶದವಾಗಿ ತಿಳಿಸುವುದಕ್ಕೆ ಅವಕಾಶವಾಗುತ್ತದೆ ಎಂಬುದು ಮೊದಲನೆ ಸಲಹೆ.

ಈಗ ಈ ಪ್ರಶ್ನೆ ವಿಚಾರದಲ್ಲಿ ಕೆಲವು ಮಾತನಾಡಿ ಸಂಪೂರ್ಣವಾಗಿ ನಿಯಂತ್ರಣ ಹೋಗಬೇಕು, ಕೂಡಲೆ ಹೋಗಬೇಕು ಎಂದ ಹೇಳಿದ್ದಾರೆ. ಇನ್ನು ಕೆಲವರು ಕೂಡಲೆ ತೆಗೆದರೆ ಅನಾಹುತವೇನಾಗುತ್ತದೆಯೆಂದು ಅಲೋಚನೆಮಾಡಬೇಕೆಂದು ಆ ರೀತಿ ಜವಾಬ್ದಾರಿಯಿಲ್ಲದೆ ಮಾತನಾಡುವುದು ಸರಿಯಲ್ಲ ಎಂದು ಹೇಳಿದ್ದಾರೆ. ಮತ್ತೆ ಕೆಲವರು ಕೂಡಲೆ ತೆಗೆಯುವುದು ಬೇಡ, ಕ್ರಮೇಣ ತೆಗೆಯ ಬೇಕು ಎಂದು ಸಲಹೆ ಮಾಡಿ ಅದು ಎಲ್ಲಿಯವರೆಗೆ ಇರಬೇಕೆಂದು ಸಲಹೆಕೊಟ್ಟಿದ್ದಾರೆ. ಈ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ಅಭಿಪ್ರಾಯವನ್ನು ಖಚಿತವಾಗಿ ತಿಳಿಸಬೇಕೆಂದು ಈ ದಿವಸ ನಾನು ನಿಂತಿದ್ದೇನೆ.

ನಾನು ಹೀಗೆ ಮಾತನಾಡುವಾಗ ಇದೆಲ್ಲವನ್ನೂ ಯೋಚನೆ ಮಾಡಿಲ್ಲ, ಏನೋ ಮಾತನಾಡಬೇಕೆಂದು ಮಾತನಾಡುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಈ ವಿಚಾರವನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿದ್ದೇನೆ. ದೇಶದ ಕಳಿವು ಉಳಿವು ಅಥವಾ ಆಗಹೋಗುಗಳು ಇದನ್ನವಲಂಬಿಸಿವೆ; ದೇಶದ ಪರಿಸ್ಥಿತಿ ಮತ್ತು ಸ್ಯಾಚ್ಯುಟರಿ ರೇಷನಿಂಗ್ ಇರುವ ಪ್ರದೇಶದ ಕಷ್ಟಗಳು, ನಾನ್‌ಸ್ಯಾಚುಟರಿ ರೇಷನಿಂಗ್ ಜಾರಿಯಲ್ಲಿರುವ ಪ್ರದೇಶದ ಕಷ್ಟಗಳು ಇವೆಲ್ಲವನ್ನೂ ತಿಳಿದುಕೊಂಡು ನಾನು ಮಾತನಾಡುತ್ತಿದ್ದೇನೆಂದು ನನ್ನ ಸ್ನೇಹಿತರು ಭಾವಿಸಬೇಕೆಂದು ಮೊದಲು ಪ್ರಾರ್ಥಿಸುತ್ತೇನೆ.

ಮಾನ್ಯ ಮಿತ್ರರು ಹೇಳಿದ ಹಾಗೆ ಈ ಹತೋಟಿ ಮತ್ತು ಪಡಿತರ ವ್ಯವಸ್ಥೆ 1943ನೇ ಇಸವಿಯಲ್ಲಿ

(ಶ್ರೀ ಎ. ಜಿ. ಬಂದೀಗೌಡರು.)

ಜಾರಿಗೆ ಬಂತು. ಅದು ಇಷ್ಟು ದೀರ್ಘಕಾಲ ಜಾರಿಯಲ್ಲಿರುತ್ತದೆಂದು ಯಾರೂ ಭಾವಿಸಿರಲಿಲ್ಲ, ಏಳೆಂಟು ವರ್ಷಗಳಿಂದ ಈ ಹತೋಟಿಗಳನ್ನು ನೋಡುತ್ತಿದ್ದೇವೆ. ಆದಷ್ಟು ಜಾಗ್ರತೆ ಇದು ಹೋಗಬೇಕೆಂದು ಎಲ್ಲರ ಮನಸ್ಸಿನಲ್ಲಿದ್ದರೂ ಕೂಡ ಇದನ್ನು/ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಎಲ್ಲಿಯವರೆಗೆ ಹೀಗೇ ಮುಂದುವರಿಸಿಕೊಂಡು ಹೋಗುವುದು ಎಂಬುದನ್ನು ಯಾರೂ ಹೇಳುತ್ತಿಲ್ಲ. 1951ನೆಯ ಇಸವಿಯಲ್ಲಿ ನಮ್ಮ ಭಾರತದೇಶ ಸ್ವಪರಿಪೂರ್ಣವಾಗಬೇಕೆಂಬ ಸೂಚನೆ ನಮ್ಮ ದೇಶದ ಮುಂದಿತ್ತು. ಅದನ್ನು ಪರಿಪಾಲಿಸಬೇಕಾದರೆ ಏನು ಪ್ರಯತ್ನ ಮಾಡಬೇಕೆ ಬಗ್ಗೆ ಈಗಾಗಲೇ ಅನೇಕ ಕೆಲಸಗಳನ್ನು ಕೈಗೊಂಡಿದ್ದೇವೆ. ಆದರೆ ಈ ಕಾರ್ಯವನ್ನು 1951ನೆಯ ಇಸವಿಯ ಕೊನೆಗೆ ಮುಗಿಸುತ್ತೇವೆಂದು ಯಾರೂ ಹೇಳುತ್ತಿಲ್ಲ. ಆದಕಾರಣ ಈ ಹತೋಟಿಗಳನ್ನು 1951ನೆಯ ಇಸವಿ ಆದ ಮೇಲೂ ಇಟ್ಟುಕೊಳ್ಳುತ್ತಾರೋ ಏನೋ ಎಂಬ ಅನುಮಾನ ಜನರಲ್ಲಿ ಬಂದಿದೆ. ಇವನ್ನು ನಮ್ಮ ಮಾನ್ಯ ಮಂತ್ರಿಗಳು ನಿವಾರಿಸುತ್ತಾರೆಂದು ಭಾವಿಸುತ್ತೇನೆ. ಯಾವ ಕಾರಣದಿಂದಲೇ ಆಗಲಿ ಆಹಾರ ಹತೋಟಿಯನ್ನು ಮುಂದುವರಿಸುವುದು ಸರಿಯಲ್ಲವೆಂದು ಹೇಳುವವರಲ್ಲಿ ನಾನೂ ಒಬ್ಬ. ಈ ವಿಷಯವನ್ನು ಹಿಂದೆ ಅನೇಕ ಸಾರಿ ಅರಿಕೆ ಮಾಡಿದ್ದೇನೆ. ಆದರೆ ಈ ದಿನ ನಾವು ಸ್ವತಂತ್ರವಾಗಿ ಮಾತನಾಡುವುದಕ್ಕೆ ಅನುಕೂಲವಾದ ಒಂದು ವಾತಾವರಣವುಂಟಾಗಿದೆಯೆಂದು ಭಾವಿಸಿ ನಾನು ಖಚಿತವಾದ ಅಭಿಪ್ರಾಯವನ್ನು ಕೊಡುತ್ತಿದ್ದೇನೆ. ಈ ಹತೋಟಿ ಆದಷ್ಟು ಬೇಗ ಸೋಗಬೇಕು. ಇದು ಹೋಗದಿದ್ದರೆ ಅನೀತಿ, ಲಂಚ ರುಷುವತ್ತು ಮುಂತಾದ ಏನೇನು ಕಷ್ಟಗಳಿವೆಯೋ ಅವೆಲ್ಲವೂ ಹೋಗುವುದಿಲ್ಲ. ಖಂಡಿತವಾಗಿ ನಮಗೆ ಒಳ್ಳೆಯದಾಗುವುದಿಲ್ಲ. ಅನೀತಿ ಅಧರ್ಮಗಳನ್ನು ತೊಲಗಿಸಿ ದೇಶದಲ್ಲಿ ಪುನಃ ಧರ್ಮವನ್ನು ಸ್ಥಾಪನೆ ಮಾಡಬೇಕಾದರೆ ಈ ಹತೋಟಿ ಆಜ್ಞೆಯು ಸಂಪೂರ್ಣವಾಗಿ ಹೋಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಅನೇಕರು ಇದು ಅಖಿಲ ಭಾರತ ನೀತಿ, ಇದನ್ನು ನಾವು ಯೋಚನೆ ಮಾಡುವುದು ಕಷ್ಟವೆಂದು ಹೇಳಬಹುದು. ನಾವು ಈ ಹತೋಟಿಯನ್ನಿಟ್ಟುಕೊಂಡಿರಬೇಕು ಇಲ್ಲದಿದ್ದರೆ ಭಾರತ ಸರ್ಕಾರದವರು ನಮಗೆ ಕೋಟಾ ಕೊಡುವುದಿಲ್ಲವೆಂದು ಹೇಳಬಹುದು. ನಮ್ಮ ದೇಶದ ಪರಿಸ್ಥಿತಿಯನ್ನು ಅವರಲ್ಲಿ ನಿವೇದನೆ ಮಾಡಿದರೆ ಬಹುಶಃ ಅವರೂ ಒಪ್ಪಬಹುದೆಂದು ಹೇಳುತ್ತೇನೆ. ಇಂಡಿಯಾ ದೇಶದಲ್ಲೇ ಕೆಲವು ಕಡೆ ಹತೋಟಿ ಇದೆ, ಕೆಲವು ಕಡೆ ಇಲ್ಲ. ಕೆಲವು ಕಡೆ subsidise ಮಾಡುತ್ತಿದ್ದಾರೆ, ಮತ್ತೆ ಕೆಲವು ಕಡೆ ಇಲ್ಲ ; ಕೆಲವು ಕಡೆ procurement ಇದೆ, ಮತ್ತೆ ಕೆಲವು ಕಡೆ ಇಲ್ಲ : ಹೀಗೆ ಬೇರೆ-ಬೇರೆ ಕಡೆ ಬೇರೆ ಬೇರೆ ರೀತಿಯಾಗಿದೆ. ಕೆಲವು ಕಡೆ statutory rationing ಪದ್ಧತಿ ಇದೆ. ಇನ್ನು ಕೆಲವು ಕಡೆ ಇಲ್ಲ ಹೀಗೆ ಇಂಡಿಯಾ ದೇಶದಲ್ಲಿ ನಾನಾ ರೀತಿ ಇರುವಾಗ ನಮ್ಮ ಸಂಸ್ಥಾನದಲ್ಲಿ ಹತೋಟಿಯನ್ನು ತೆಗೆಯಬೇಕೆಂದು ನಾವು ಮನಸ್ಸು ಮಾಡಿದರೆ ಇಂಡಿಯಾ ಸರ್ಕಾರದವರು ಇಡಲೇಬೇಕೆಂದು ಒತ್ತಾಯ ಮಾಡುವುದಿಲ್ಲವೆಂದು ಭಾವಿಸುವವರಲ್ಲಿ ನಾನೂ ಒಬ್ಬ. ಜನವರಿ 14ನೆಯ ತಾರೀಖಿನಿಂದ ರಾಜಾಸ್ಥಾನದಲ್ಲಿ ಹತೋಟಿಯನ್ನು ತೆಗೆದುಹಾಕಿದ್ದಾರೆಂದು ತಿಳಿದುಬಂದಿದೆ. ಹೀಗಿರುವಾಗ ನಮ್ಮ ಮೈಸೂರು ದೇಶದ ಪ್ರಜೆಗಳು ಹತೋಟಿಯನ್ನು ತೆಗೆಯಬೇಕೆಂದು ಇಂಡಿಯಾ ಸರ್ಕಾರವನ್ನು ಕೇಳಿದರೆ ಬಹುಷಃ ಇದಕ್ಕೆ ಒಪ್ಪಬಹುದೆಂದು ಕಾಣುತ್ತದೆ. ಆದುದರಿಂದ ಇಂಡಿಯಾ ಸರ್ಕಾರದ ನೀತಿ ಎಲ್ಲರಿಗೂ ಅನ್ವಯಿಸುವಂತೆ ಮಾಡಿದ್ದಾರೆ. ಹತೋಟಿಯನ್ನು ತೆಗೆದುಹಾಕುವುದಕ್ಕಾಗುವುದಿಲ್ಲವೆಂದು ಭಾವಿಸದೆ ನಮ್ಮ ಪರಿಸ್ಥಿತಿಯನ್ನು ಅವರ ಮುಂದಿಟ್ಟು ಹೇಳಿಕೊಂಡರೆ ಅವರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. 1948ನೆಯ ಇಸವಿಯಲ್ಲಿ ಹತೋಟಿಯನ್ನು ತೆಗೆದೆವು. ಆಗ ಇಂತಹ ಪರಿಸ್ಥಿತಿ ಬಂತು, ದೇಶದಲ್ಲಿ ಅದರಿಂದ ಬಹಳ ಕೆಟ್ಟ ಪರಿಣಾಮವಾಯಿತು ಎಂದು ಮಾನ್ಯ ಸಚಿವರು ಹೇಳಿದರು. ಆಗ ಸರ್ಕಾರದವರು ಸಂಪೂರ್ಣ ಮನಸ್ಸಿನಿಂದ ತೆಗೆಯಲಿಲ್ಲ, ಅರ್ಧ ಮನಸ್ಸಿನಿಂದ ತೆಗೆದರು; ಏನು ತೊಂದರೆ ಬರುತ್ತದೆಯೋ ಏನೋ ಎಂಬ ಅನುಮಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಜನರಾರಾದರೂ ಬಂದು ಹೇಳಿಕೊಂಡರೆ ಪುನಃ ಹಾಕುತ್ತೇವೆ ಎಂಬ ಮನಸ್ಸಿನಿಂದ ತೆಗೆದರು. ಆದ್ದರಿಂದ ಪುನಃ ಬೇಗ ಮತ್ತೆ ಹಾಕಿದರು. ಆದುದರಿಂದ ಹಾಗಾಯಿತು. ಈಗ ಧೈರ್ಯವಾಗಿ ಒಂದೇ ಮನಸ್ಸಿನಿಂದ ತೆಗೆದುಹಾಕಿದರೆ ಅನುಕೂಲವಾಗುತ್ತದೆಂದು ಕಾಣುತ್ತದೆ.

ಇನ್ನು Statutory rationing ಪ್ರದೇಶ, Rural rationing ಪ್ರದೇಶ ಎಂದಿಟ್ಟುಕೊಂಡು ಪಕ್ಷಪಾತ ಮಾಡುತ್ತಿದ್ದಾರೆಂದು ಕೆಲವು ಮಿತ್ರರು ಹೇಳಿದ್ದಾರೆ. ಈಗ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ Statutory rationing ಜಾರಿಯಲ್ಲಿರುವ ಪ್ರದೇಶದಲ್ಲಿ ಕೇವಲ 15 ಲಕ್ಷ ಪ್ರಜೆಗಳಿದ್ದಾರೆ, ಅವರಿಗೆ ಪಡಿತರವನ್ನು ಕೊಟ್ಟೇ ಕೊಡಬೇಕು. ರೂರಲ್ ರೇಷನಿಂಗ್ ಇರುವ ಪ್ರದೇಶದಲ್ಲಿ 40-50 ಲಕ್ಷ ಪ್ರಜೆಗಳಿದ್ದಾರೆ, ಒಟ್ಟು 60 ಲಕ್ಷ ಪ್ರಜೆಗಳಿಗೆ ಆಹಾರ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು 60 ಲಕ್ಷ ಪ್ರಜೆಗಳಿಗೂ ಆಹಾರ ಕೊಡುತ್ತಿಲ್ಲ. ಕೇವಲ 15 ಲಕ್ಷ ಜನರಿಗೆ ಮಾತ್ರ ಕೊಡುತ್ತಿದ್ದಾರೆ. ಮಿಕ್ಕ ಕಡೆಗಳಿಗೂ ಡಿಪೋಗಳನ್ನು ಇಟ್ಟಿದ್ದೇವೆ, ಅಲ್ಲಿಗೆ ಕೊಡುತ್ತಿದ್ದೇವೆಂದು ಅವರು ಹೇಳಬಹುದು. ಆದರೆ ಅನೇಕ ಕಡೆ ವಾರಕ್ಕೆ ಒಂದು ದಿನದ ಆಹಾರವೂ ಆ ಡಿಪೋಗಳಿಂದ ಜನರಿಗೆ ಸಿಕ್ಕುವುದಿಲ್ಲ. ಎಂಟು ದಿನಕ್ಕೆ ಒಂದೆರಡು ಗಂಟೆ ಕಾದು ಕೊನೆಗೆ ಎಂಟಾಣೆ ರಾಗಿಯೂ ಸಿಕ್ಕದೇ ಇರುವವರನೇಕರಿದ್ದಾರೆ, ನಾನು ನೋಡಿದ್ದೇನೆ. ಆದುದರಿಂದ ಎಲ್ಲರಿಗೆಲ್ಲಾ ಪಡಿತರ ಕೊಡುತ್ತಿದ್ದೇವೆಂದು ಹೇಳುವುದು ಸರಿಯಲ್ಲ. ಏನಿದ್ದರೂ Statutory rationing ಇರುವ ಪ್ರದೇಶದ ಹತ್ತು ಹನ್ನೆರಡು ಲಕ್ಷ ಜನರಿಗೆ ಆಹಾರ ಕೊಡುತ್ತಿದ್ದೇವೆಂದು ಹೇಳಿಬಹುದು. ಇದರಿಂದ ದೇಶದಲ್ಲಿ ಏನು ಪರಿಣಾಮವಾಗಿದೆಯೆಂಬುದನ್ನು ನೋಡಬೇಕು. ಶ್ರೀಮಾನ್ ನಾರಾಯಣರಾಯರು ಸಿಟಿಗಳಲ್ಲಿರುವ ಜನರಿಗೂ ಕಂಟ್ರೋಲಿನಿಂದ ಬೇಜಾರಾಗಿದೆ ಕಂಟ್ರೋಲ್ ಆದರೆ ಒಳ್ಳೆಯದೆಂಬ ಭಾವನೆ ಬರುತ್ತಿದೆಯೆಂದು ಹೇಳಿದರು. ಆ ಅಭಿಪ್ರಾಯವನ್ನು ನಾನು ಸ್ವಾಗತಿಸುತ್ತೇನೆ, ಪುಷ್ಟೀಕರಿಸುತ್ತೇನೆ. ನಿಜ, ಅವರಿಗೂ ಬೇಜಾರಾಗಿದೆ. ಏಕೆಂದರೆ, ಈ ದಿವಸ 9 ಔನ್ಸ್, ನಾಳೆ 8 ಔನ್ಸ್, ನಾಳೆದ್ದು 6 ಔನ್ಸ್ ಹೀಗೆ ಮಾಡುವುದರಿಂದಲೂ ದರಗಳು ವ್ಯತ್ಯಾಸವಾಗುತ್ತಿರುವುದರಿಂದಲೂ ರೇಷನಿಂಗ್ ತೆಗೆದರೆ ನಮ್ಮ ಇಷ್ಟ ಬಂದ ಕಡೆ ಹೋಗಿ ಆಹಾರ ಪದಾರ್ಥಗಳನ್ನು ತರಬಹುದು ಅಥವ ಬೇಕಾದಷ್ಟು ಅವಕಾಶ ಕಲ್ಪಿಸಿಕೊಂಡು ಬೇಕಾದಷ್ಟು ಆಹಾರ ಬೆಳೆಯಬಹುದೆಂಬ ಭಾವನೆ ಅವರಿಗೆ ಬಂದಿದೆ. ಅಲ್ಲದೆ ಕೇವಲ ಹತ್ತು-ಹನ್ನೆರಡು

ಲಕ್ಷ ಜನರಿಗೆ statutory rationing ಇಟ್ಟು Rural rationing ಪ್ರದೇಶದಲ್ಲಿ ಬೆಳೆಯಿದೆ ಇರುವ ವಂಗೆ ಸರಿಯಾಗಿ ಆಹಾರ ಕೊಡದೆ, Procurment and Harvest Order ಜಾರಿ ಮಾಡಿ ಜನರನ್ನು ನದೆ ಬಡಿದು ವಸೂಲು ಮಾಡುತ್ತಿದ್ದಾರೆ. ಇದು ಒಳ್ಳೆಯದಲ್ಲ. procurement order ಪ್ರಕಾರ ಯಾವ ಹಳ್ಳಿಯಲ್ಲಾಗಲಿ, ಹೋಬಳಿಯಲ್ಲಾಗಲೀ, ತಾಲ್ಲೂಕಿನಲ್ಲಾಗಲಿ ಎಷ್ಟು ಬೆಳೆಯುತ್ತಾರೆ, ಪ್ರಜಾ ಸಂಖ್ಯೆ ಎಷ್ಟಿದೆ ಎಂಬುದನ್ನು ನೋಡಿ ಅವರಿಗೆ ವರ್ಷಕ್ಕೆ ಆಗುವಷ್ಟು ಆಹಾರ ಧಾನ್ಯವನ್ನು ಬಿಟ್ಟು ಹೆಚ್ಚಾಗಿರುವುದನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೇ ವೆಂದು ಹೇಳಿದರು. ಆ ರೀತಿ ನಿಜವಾಗಿ ಈ ಹೊತ್ತು ಮಾಡುತ್ತಿದ್ದಾರೆಯೆ ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಖಂಡಿತವಾಗಿ ಆ ರೀತಿ ಮಾಡುತ್ತಿಲ್ಲ. ಒಂದು ಕಡೆ ಅನ್ಯಾಯ ಮಾಡುತ್ತಿದ್ದಾರೆ ಇನ್ನೊಂದು ಕಡೆ ಪ್ರೊಕ್ಯೂರ್‌ಮೆಂಟ್ ಆಜ್ಞೆಯ 15ನೆಯ ಸೆಕ್ಷನ್ ಇಟ್ಟಿದ್ದಾರೆ. ಈ ಸೆಕ್ಷನ್ನಿನ ಪ್ರಕಾರ ನೋಡಿದರೆ ಗ್ರಾಮಾಂತರ ಪ್ರದೇಶದ ಜನರಿಗೆ ಬಹಳ ಅನ್ಯಾಯ ಮತ್ತು ಕಿರುಕುಳವಾಗುತ್ತಿದೆ. ಬತ್ತ ಮತ್ತು ರಾಗಿ ಬೆಳೆಯು ಕಟಾವು ಕಾಲ ಬಂದರೆ ಅಲ್ಲಿಯ ಜನರಿಗೆ ಇಲ್ಲದ ಕಷ್ಟ; ಕಾನೂನು ಉಲ್ಲಂಘನೆ ಮಾಡಿದವರೆಂದು ಅನೇಕರ ಮೇಲೆ ನೋಟೀಸ್ ಜಾರಿ ಮಾಡುತ್ತಾರೆ. ಒತ್ತವನ್ನು ಕಟಾವು ಮಾಡಬೇಕಾದರೆ ಅನುಮತಿ ಪಡೆಯಬೇಕು, ಮೆದೆ ಹಾಕ ಬೇಕಾದರೆ ಅಪ್ಪಣೆ ಪಡೆಯಬೇಕು, ಬಡಿದು ಮನೆಗೆ ತರಬೇಕಾದರೆ ಅಪ್ಪಣೆ ಪಡೆಯಬೇಕೆಂದು ಮಾಡಿದ್ದಾರೆ. ಇಷ್ಟು ತೊಂದರೆ ಕೊಟ್ಟು ಅವರಿಂದ ಬತ್ತ ರಾಗಿಯನ್ನು ತರುತ್ತಿದ್ದಾರೆ. ಹೀಗೆ ರೂರಲ್ ರೇಷನಿಂಗ್ ಇರುವ ಪ್ರದೇಶದಲ್ಲಿ ಜನರಿಗೆ ಬಹಳ ಕಿರುಕುಳ ನಡೆಯುತ್ತಿದೆ. 60 ಲಕ್ಷ ಪ್ರಜೆಗಳಿಗೆ ಕೊಂದರೆ ಕೂಟ್ಟು ಕೇವಲ 10-12 ಲಕ್ಷ ಪ್ರಜೆಗಳಿಗೆ ಆಹಾರವನ್ನೊದಗಿಸುವ ನೀತಿ ಒಳ್ಳೆಯದಲ್ಲ. ಎಲ್ಲ ದೃಷ್ಟಿಯಿಂದಲೂ ಆಹಾರ ಹತೋಟಿಯನ್ನು ಮುಂದು ವರಿಸಿಕೊಂಡು ಹೋಗುವುದು ಸರಿಯಲ್ಲ. ಇದನ್ನು ಅದಷ್ಟು ಜಾಗ್ರತೆ ತಗದು ಹಾಕಬೇಕೆಂದು ಹೇಳುವವ ರಲ್ಲಿ ನಾನೂ ಒಬ್ಬ. ಒಂದೇ ಸಲ ತೆಗೆಯಬೇಕೆಂದು ಹೇಳುವ ಬದಲು ಸ್ವಲ್ಪ ಬದಲಾಯಿಸಿ ಸರ್ಕಾರದವರು ದೀ ಕಂಟ್ರೋಲ್ ಮಾಡುವುದು ನಮ್ಮ ನೀತಿ ಎಂದು ಮನಸ್ಸು ಮಾಡಬೇಕು. ಮೊದಲು ಈ ಸಾಗಾ ಧಾನ್ಯ ಶೇಖರಣೆ ಆದ ಮೇಲಾದರೂ ರೂರಲ್ ರೇಷನಿಂಗ್ ಪ್ರದೇಶದಲ್ಲಿ decontrol ಮಾಡಿ ರೇಷನಿಂಗ್ ಇರುವ ಪ್ರದೇಶದಲ್ಲಿ ಇಟ್ಟುಕೊಂಡು ಇಷ್ಟನೆಯು ತಾರೀಖಿನ ಮೆ ರೆ ನಾವು ಕಂಟ್ರೋಲನ್ನಿಟ್ಟುಕೊಳ್ಳುವುದಿಲ್ಲವೆಂದು ಹೇಳಿ, ಅದರ ಮುಂದೆ ತೆಗೆದುಹಾಕಬೇಕೆಂದು ಹೇಳಿ. ಇದನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದು ದೇಶಕ್ಕೆ ಒಳ್ಳೆಯದು ಮಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಅಧ್ಯಕ್ಷರೇ, ಆಹಾರ ಪರಿಸ್ಥಿತಿಯ ವಿಷಯದಲ್ಲಿ ಏಪುಲವಾಗಿ ಚರ್ಚೆಯಾಗಿದೆ. ಕೆಲವು ಮಹನೀಯರು ದೇಶದ ಪರಿಸ್ಥಿತಿಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದ್ದಾರೆ, ರಚನಾತ್ಮಕ ಸಲಹೆ ಕೊಟ್ಟಿದ್ದಾರೆ. ನಿಜ, ಈ ಹತೋಟಿ ಆಜ್ಞೆ ಇರುವವರೆಗೂ ಯಾರು ಬೆಳೆದು ಒದಗಿಸುತ್ತಾರೋ ಅವರಿಗೆ ಅಲ್ಲಲ್ಲಿ ಅಲ್ಪಸ್ವಲ್ಪ pinpricks ಇವೆ. ಅದು ಈ ಹತೋಟಿ ಜೊತೆಯಲ್ಲಿ ಬಂದಿರತಕ್ಕದ್ದು. ಆದರೆ ಒಂದು ಅಂಶವನ್ನು ನಾನು ಒಪ್ಪುವುದಿಲ್ಲ. ಹತೋಟಿ ಒಂದರಿಂದಲೇ ನೀತಿಪತನವಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಹತೋಟಿ ಆಜ್ಞೆ ಇರತಕ್ಕ ಪಾಶ್ಚಾತ್ಯದೇಶಗಳಲ್ಲಿ ಇದು ಬಹಳ ಯಶಸ್ವಿಯಾಗಿ ನಡೆದಿದೆ ಎಂದು ಹೇಳಿ ಬರೀ ವರದಿಗಳಿಂದಲೇ ಅಲ್ಲ, ಖುದ್ದಾಗಿ ಅಲ್ಲಿ ಹಲವಾರು ತಿಂಗಳು ವಾಸವಾಡಿ ಬಂದಿರತಕ್ಕ ಮಿತ್ರರುಗಳಿಂದಲೂ ತಿಳಿದುಬಂದಿದೆ. ಭಾರತದಲ್ಲಿ ಕಳೆದ ಯುದ್ಧವಾದ ಮೇಲೆ ಶ್ರೀಮಾನ್ ಭೀಮಪ್ಪನಾಯಕರು ಹೇಳಿದಹಾಗೆ ನೀತಿಪತನವಾಗಿದೆ. ಈ ನೀತಿ ಸರಿಯಾಗಿದ್ದೇ ಇರತಕ್ಕ ಪ್ರದೇಶದಲ್ಲಿ ಹತೋಟಿ ಆಜ್ಞೆ ಯಶಸ್ವಿಯಾಗಿ ನಡೆಯುವುದು ಬಹಳ ಕಷ್ಟ. ಮನಸ್ಸು ಬಿಚ್ಚಿ ಮಾತನಾಡಬೇಕಾದರೆ ಈ ಹತೋಟಿ ಆಜ್ಞೆಗಳನ್ನು ಜಾರಿಮಾಡುವುದೂ ಸಹ ಕಷ್ಟ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಎಲ್ಲರೂ ಸತ್ಯವಂತರಾಗಿ ದೇಶದ ಹಿತದೃಷ್ಟಿಯಿಂದ ಈ ಆಜ್ಞೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಬೇಕು. ಎಲ್ಲರೂ ಸಮಾನವಾಗಿ ತ್ಯಾಗವಾದಬೇಕೆಂಬ ಧರ್ಮಬುದ್ಧಿ ಹುಟ್ಟಬಿದ್ದರೆ ಅಲ್ಲಲ್ಲಿ ಈ ವೈಪರೀತ್ಯಗಳು ಕಂಡುಬರುವುದು ಸಹಜ. ಆ ಒಂದೇ ದೃಷ್ಟಿಯಿಂದ ಹತೋಟಿಯನ್ನು ತೆಗೆದುಹಾಕಿ ಎಂದು ಹೇಳತಕ್ಕ ವಾದವನ್ನು ಒಪ್ಪುವುದಿಲ್ಲ ಎಂದು ಕೆಲವು ಮಹಾಶಯರು ತಿಳಿಸಿದ್ದಾರೆ. ಅದು ಬಹಳ ಒಳ್ಳೆಯದು ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಹತೋಟಿ ಆಜ್ಞೆಗಳನ್ನು ಅನೇಕ ಕಾಲದವರೆಗೆ ಇಟ್ಟುಕೊಂಡಿರುತ್ತೇವೆ ಎಂದು ಯಾರೂ ಹೇಳುವುದಿಲ್ಲ. ಕೇಂದ್ರ ಸರ್ಕಾರದವರೂ ಹೇಳಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಜನಗಳಿಗೆ ಹೆಚ್ಚು ತೊಂದರೆಯಾಗದ ರೀತಿಯಲ್ಲಿ, ಯಾರು ಬೆಳೆ ಬೆಳೆಯುವುದಿಲ್ಲವೋ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಹತೋಟಿ ಆಜ್ಞೆಯನ್ನು ನಡೆಸಿಕೊಂಡು ಹೋಗಬೇಕು. ಆ ಜವಾಬ್ದಾರಿ ಈ ಸಭೆಯ ಪಾಲಿಗೆ ಬಂದಿದೆ, ಅದು ಬರೀ ಸರ್ಕಾರದವರ ಪಾಲಿಗೇ ಬಂದದ್ದಲ್ಲ. ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಮೇಲೆ ಈ ಜವಾಬ್ದಾರಿ ಪ್ರಜಾಪ್ರತಿನಿಧಿಗಳ ಮೇಲೆ ಸಂಪೂರ್ಣವಾಗಿದೆ. ಪ್ರಜಾವರ್ಗ ಕಷ್ಟಕ್ಕೆ ಒಳಗಾಗಬಾರದು. ಆದ್ದರಿಂದ ಈ ಹತೋಟಿ ಆಜ್ಞೆಯನ್ನು ಇಟ್ಟುಕೊಂಡು ಇದರಲ್ಲಿ ಎಷ್ಟುಮಟ್ಟಿಗೆ ಸುಧಾರಣೆ ಮಾಡಿದರೆ ಎಲ್ಲರಿಗೂ ಆಹಾರ ಹಂಚಿಕೆಮಾಡಬಹುದು ಎಂಬ ಅಂಶವನ್ನು ಆರಿತು ಈ ವಿಷಯವನ್ನು ವಿಮರ್ಶಿಸಬೇಕೆಂದು ಹೇಳಿ ಪ್ರಾರ್ಥಿಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ. ಇನ್ನು ಮೇಲೆ ನಮ್ಮ ಹಣಕಾಸಿನ ದೃಷ್ಟಿಯಿಂದ ಹಣ ಖರ್ಚುಮಾಡುವುದು ಬಹಳ ಕಷ್ಟ ಎಂದು ಕೆಲವರು ಹೇಳಿದರು. ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಅದಷ್ಟು ಜಾಗ್ರತೆ ಆ ನೀತಿಯನ್ನು ನಾವು ಸಫಲಗೊಳಿಸುವುದಕ್ಕೆ ಪ್ರಯತ್ನಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಎರಡನೆಯದಾಗಿ ಆಹಾರದ ಪರಿಸ್ಥಿತಿಯನ್ನು ವಿಮರ್ಶೆಮಾಡುವಾಗ ಆಹಾರ ಉತ್ಪನ್ನದ ಪ್ರಶ್ನೆಯೂ ಎದ್ದಿದೆ. ಜನಾಬ್ ಇಮಾಂರವರೂ ಮತ್ತು ಶ್ರೀ ಮಾನ್ ಚನ್ನಬಸಪ್ಪನವರೂ ಒಂದೇ ಸಾರಿ ಇದರಿಂದ ಪ್ರಯೋಜನವಾಗಿಲ್ಲ ಎಂದು ಹೇಳಿದರು ಅದನ್ನು ನಾನು ಒಪ್ಪುವುದಿಲ್ಲ. ಜನಾಬ್ ಇಮಾಂರವರಿಗೆ ವರ್ಷಕ್ಕೆ ವರ್ಷಕ್ಕೆ ನೀರಾವರಿ ಕಾಮಗಾರಿಗಳಿಗೆ ಖರ್ಚಾಗಿರತಕ್ಕ ಹಣ ಎಷ್ಟು ಎಂಬುದು ಚೆನ್ನಾಗಿಗೊತ್ತಿದೆ. 150 ವರ್ಷಗಳ ಕಾಲ ನಮ್ಮ ನೀರಾವರಿ ಕಾಮಗಾರಿಗಳನ್ನು ಅಲಕ್ಷ್ಯಮಾಡಿ ಈಗ ಮೂರು ನಾಲ್ಕು ವರ್ಷಗಳಿಂದ ಮಾಡಿರತಕ್ಕ ಪ್ರಯತ್ನದ ಫಲವಾಗಿ ಬೆಳೆ ಬೆಳೆಯಬೇಕೆಂದರೆ ಬಹಳ ಕಷ್ಟ. ಇದು ಸರ್ಕಾರದವರೊಬ್ಬರನ್ನೇ ಅವಲಂಬಿಸಿಲ್ಲ. ಸರ್ಕಾರದವರು

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಒಂದು ನೀತಿಯನ್ನು ಜಾರಿಗೆ ಕೊಡಬಹುದು. ಆದ್ದರಿಂದ ಇದು ಲಕ್ಷಾಂತರ ಜನರು ಮನಸ್ಸು ಮಾಡಿದರೆ ಯಶಸ್ವಿಯಾಗಿ ಆಗತಕ್ಕ ಕೆಲಸ. ಅದೃಷ್ಟಿಯಿಂದ ನಿರಾಯಾಸವಾಗಿ ಹೀಗೆ ಹೇಳತಕ್ಕದ್ದು ಉಚಿತವಲ್ಲ ಎಂದು ಹೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು ಎಲ್ಲ ಅಧಿಕಾರಿಗಳನ್ನು ಅಕ್ಷೇಪಣೆ ಮಾಡಿದರು. ಅಲ್ಲದೆ ಯಾವ ಪ್ರಯೋಜನವೂ ಆಗಿಲ್ಲ ಎಂದು ಹೇಳಿದರು. ಒಂದು ಉದಾಹರಣೆ ಕೊಡುವುದಾದರೆ ಹೆಚ್ಚು ಆಹಾರ ಬೆಳೆ ಬೆಳೆಯುವುದಕ್ಕೆ ರಿಯಾಯಿತಿಗಳನ್ನು ಕೊಡಲೇ ಇದ್ದಿದ್ದ ಪಕ್ಷದಲ್ಲಿ ಶ್ರೀಮಾನ್ ಚೆನ್ನಬಸಪ್ಪನವರಿಗೆ ಅವರ ಜಮೀನಿನಲ್ಲಿ ಎಷ್ಟು ಬೆಳೆ ಬಂದಿದೆಯೇ ಅಷ್ಟೂ ನಷ್ಟ ಬರುತ್ತಿರಲಿಲ್ಲ. ಅವರೇ ನನ್ನ ಹತ್ತಿರ 50 ಎಕರೆಯಲ್ಲಿ ಭತ್ತ ಬೆಳೆದು ಕೊಡುತ್ತೇನೆ ಎಂದು ಹೇಳಿದ್ದರು. ಸ್ವತಃ ಪ್ರಯತ್ನಪಟ್ಟಿದ್ದಾರೆ. 50 ಎಕರೆಯಲ್ಲೂ ಪೂರ್ತಿ ಭತ್ತ ಬಂತೇ ಎಂಬುದನ್ನು ಅವರೇ ಹೇಳಬೇಕು. ದೇವರು ಕರುಣಿಸದೆ ನವೆಂಬರ್‌ನಲ್ಲಿ ಮಳೆ ಆಗಲಿಲ್ಲ. ಅಲ್ಲಿ ಬೆಳೆ ಎಷ್ಟು ಆಗಿದೆ? ಆದ್ದರಿಂದ ಒರೀ ಜಮೀನು ಇದ್ದರೆ ಸಾಲದು, ಜನಗಳಿಗೆ ಆರೋಗ್ಯ ಇರಬೇಕು; ಸಕಾಲಕ್ಕೆ ಮಳೆ ಆಗಬೇಕು; ಸಕಾಲದಲ್ಲಿ ಉಳಬೇಕು; ಮಟ್ಟ ಮಾಡಬೇಕು; ಗೊಬ್ಬರ ಹಾಕಬೇಕು; ಒಳ್ಳೆಯ ಬೀಜ ಬಿತ್ತಬೇಕು; ಕಾಯಬೇಕು. ಹಂದಿಕಾಟ, ಆನೆಕಾಟ ಇರುತ್ತದೆ; ಕಪ್ಪಪಟ್ಟು ಬೆಳೆವಾಡಬೇಕು. ಹೀಗೆ, there are hundreds of human factors that go into the question of food. They have to be taken into consideration. It is easy to generalise; it is easy to condemn. But we cannot tar the whole thing with a black brush. That evidently shows that we lack in proper appreciation of factors. ಆದ್ದರಿಂದ ಶ್ರೀಮಾನ್ ಚೆನ್ನಬಸಪ್ಪನವರು ಅವರ ಅನುಭವವನ್ನೇ ಸಭೆಯ ಮುಂದಿಟ್ಟಿದ್ದರೆ ಚೆನ್ನಾಗಿತ್ತು. ಜಮೀನು ಸರಿಯಾಗಿ ನಾಗುವಳಿ ಮಾಡಬೇಕಾದರೆ ಎಷ್ಟು ಕಷ್ಟ ಇದೆ ಎಂಬುದನ್ನು ಯೋಚನೆ ಮಾಡಬೇಕು. ಪ್ರಜಾರಾಜ್ಯದಲ್ಲಿ ತಿಳಿವಳಿಕೆ ಇಲ್ಲದವರು ಇದ್ದಾರೆ, ಅನಕ್ಷರಸ್ಥರು ಇದ್ದಾರೆ, ಬಡವರು ಇದ್ದಾರೆ. ಏಕದಂ ಬೆಳೆಯಿರಿ ಎಂದರೆ ಕಷ್ಟ ಇದೆ. ಮನೆಯಲ್ಲಿ ಖಾಯಿಲೆ ಇರಬಹುದು. ಚೆನ್ನಾಗಿ ಹೊಲ ಉತ್ತು, ಬೀಜಹಾಕತಕ್ಕ ಕಾಲದಲ್ಲಿ ಒಂದು ಎತ್ತು ಕುಂಟಾಗಬಹುದು. ಇವೆಲ್ಲಾ ಮನುಷ್ಯವರ್ಗಕ್ಕೆ ಸಹಜವಾಗಿರತಕ್ಕ ತೊಂದರೆಗಳು. ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಆಹಾರ ದವಸ ಉತ್ಪನ್ನಮಾಡುವ ಕೆಲಸ ಬಹಳ ಕಷ್ಟವಾದ ಕೆಲಸ ಎಂಬುದು ಯಾರಿಗೂ ಗೋಚರವಾಗದೆ ಇರದು.

ಶ್ರೀ ಎಸ್. ರಂಗರಾಮಯ್ಯನವರು.—ಕೃಷ್ಣರಾಜನಗರ ತಾಲ್ಲೂಕು ಸುವರ್ಣಾವತಿನಾರೆ ಕಾಮಗಾರಿ ವಿಚಾರ ಅವರು ಮರೆತಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳುತ್ತೇನೆ. ಆದ್ದರಿಂದ ಇದು ಮನುಷ್ಯನ ಹತೋಟಿಯಲ್ಲಿ ಇಲ್ಲದೇ ಇರತಕ್ಕ ಅನೇಕ ಸಂದರ್ಭಗಳಿಗೆ ಒಳಪಟ್ಟು ಮಾಡತಕ್ಕ ಕಾರ್ಯ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಈ ವರ್ಷ ಎಲ್ಲೆಲ್ಲ ನೀರಾವರೀ ಕಾಮಗಾರಿ ಮಾಡಿದ್ದೀವೆಯೋ ಅಲ್ಲಿ ಜನಗಳನ್ನು ಮುದ್ದಾಗಿ ಕೇಳಿ. ಯಳಂದೂರು ತಾಲ್ಲೂಕಿನಲ್ಲಿ 50 ವರ್ಷದಿಂದ ನಾರಾದುರಸ್ತು ಆಗಿರಲಿಲ್ಲ. ಈ ದಿನ ಇಲ್ಲಿ ಚಾಮರಾಜನಗರದ ಪ್ರತಿನಿಧಿಗಳೂ ಇದ್ದಾರೆ. ಅವರೇ ಖುದ್ದಾಗಿ ಹೇಳಿದ್ದಾರೆ. 50 ವರ್ಷದಲ್ಲಿ ಆಗದೇ ಇರುವ ಕೆಲಸ ಈ ಒಂದು ವರ್ಷದಲ್ಲಿ ಆಗಿದೆ. ಸುವರ್ಣಾವತಿ ನಾರೆಯಿಂದ ಎಷ್ಟೋ ಕೆರೆಗಳು ತುಂಬಿವೆ. ದುರದೃಷ್ಟವಶಾತ್ ಪೂರ್ತಿಯಾಗಿ ತುಂಬಿಲ್ಲ. ಮೈಸೂರು ದೇಶದಲ್ಲಿ 150 ವರ್ಷಗಳಿಂದಲೂ ಅಲಕ್ಷ್ಯವಾಡಿ, ಹೂಳು ತುಂಬಿಕೊಂಡಿರತಕ್ಕ ಕೆರೆಗಳನ್ನು ಒಂದೇ ಸಾರಿ ಹಳ್ಳ ಮಾಡಿ ನೀರು ತುಂಬಿಸುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚಿಸಬೇಕು. ನಮ್ಮ ದೇಶದಲ್ಲಿ 26 ಸಾವಿರ ಕೆರೆಗಳಿವೆ. ಅವುಗಳನ್ನು ಸರಿಯಾಗಿ ಕಾಪಾಡಿಕೊಂಡು ಬಂದಿದ್ದರೆ ಈ ದಿನ ಆಹಾರದ ಅಭಾವ ಇರುತ್ತಿರಲಿಲ್ಲ. 5 ಸಾವಿರ ಚಿಲ್ಲರೆ ಕೆರೆಗಳ ಜೀರ್ಣೋದ್ಧಾರವಾಗಿದೆ. ನಮ್ಮ ದೇಶದಲ್ಲಿ ಅನೇಕ ಕೆರೆಗಳು ಒಡೆದುಹೋಗಿವೆ. ಬೆಂಗಳೂರಿನ ಹತ್ತಿರ ಒಂದು ಕೆರೆ ನದಸ್ಯರಿಗೆ ತೋರಿಸಿದ್ದೇನೆ, 8½ ಅಡಿ ಹೂಳುತುಂಬಿತ್ತು, ಎರಡು ಅಡಿ ನೀರೂ ಸಹ ನಿಲ್ಲುತ್ತಿರಲಿಲ್ಲ. ಎಷ್ಟೋ ಕಡೆ ಕೆರೆಗಳು ಒಡೆದುಹೋಗಿ ಸ್ವಲ್ಪವೂ ನೀರು ನಿಲ್ಲುತ್ತಿಲ್ಲ.

ಹಾಗೆಯೇ ಪಾಲಾರ್ ನದೀ ಪಾತ್ರ. ಅಲ್ಲ ಒಂದು ಸಾವಿರ ಕೆರೆಗಳಿವೆ; ರಾಮಸಾಗರವೆನ್ನುವುದು ಒಂದು ಮಹಾ ಕೆರೆ. ಅಂಥ ಕೆರೆಯಲ್ಲಿ ಈಗ ದನ ಕುಡಿಯುವುದಕ್ಕೂ ನೀರಿಲ್ಲದೆ ಹೋಗಿದೆ! ಹೀಗಾಗಿ ಬತ್ತ ಬೆಳೆದ ಪ್ರದೇಶ ಕಡಿಮೆಯಾಗಿ ತೋರಿಸಿದರೆ, ನಂಸ್ಥಾನದಲ್ಲಿ ಬತ್ತದ ಸಾಗುವಳಿ ಪ್ರದೇಶವೇ ಕಡಿಮೆಯಾಯಿತೆಂದು ಹೇಳುವುದಕ್ಕಾಗುತ್ತದೆಯೇ? ಆ ರೀತಿಯಲ್ಲಿ ಇಂಥ ಪ್ರದೇಶಗಳನ್ನೂ ತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ನಮ್ಮ ಸಂಸ್ಥಾನದಲ್ಲಿ 7½ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಬತ್ತ ಬೆಳೆಯುವುದಕ್ಕೆ ವನತಿಯಿದೆಯೆಂದಿಟ್ಟುಕೊಳ್ಳಬಹುದು. ಇದರಲ್ಲಿ 3½ ಲಕ್ಷ ಎಕರೆ ಒಳ್ಳೆಯ ನೀರು ವನತಿಯಿರುವ ನಾರಾ ಕೆಳಗಿದೆ. ಮಿಕ್ಕಾದ್ದರಲ್ಲಿ ಶಿವಮೊಗ್ಗ ಜಿಲ್ಲೆಗಳಲ್ಲಿ ಕಡೆ 1½ ಲಕ್ಷ ಮತ್ತು ಹಾಸನದ ಕಡೆ 1½ ಲಕ್ಷ ಇವೆ. ಈ ಎಲ್ಲಾ ಕಡೆಯಲ್ಲೂ ಮಳೆ ಬಾರದೆಹೋದರೆ ಮಾಡಿದ ಕಷ್ಟವೆಲ್ಲಾ ನಿರರ್ಥಕವಾಗುತ್ತದೆ. ಹೋದವರ್ಷ ಶಿವಮೊಗ್ಗ, ಭದ್ರಾವತಿ ಕಡೆಯಲ್ಲಿ 2–3 ಆಣೆಯಷ್ಟು ಬತ್ತ ಕೂಡ ಆಗಲಿಲ್ಲ. ಆದ್ದರಿಂದ ನಾವೇನು ಪ್ರಯತ್ನಮಾಡುವುದರಲ್ಲೂ ಇದೆಲ್ಲವನ್ನೂ ನೋಡಿಕೊಂಡು ಕೆಲಸಮಾಡಬೇಕಾಗುತ್ತದೆ. ತರಗೆರ್ಲಾ ಒಂದೇ ಮಂತ್ರವಲ್ಲ!!

Sri H. M. CHANNABASAPPA.—On a point of explanation In Mysore District where there is a large channel area, from 9·99 lakhs of acres it has come down to two lakhs now.

ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಬೇರೆ ಕಾರಣಗಳಿವೆ.

ಆದ್ದರಿಂದರೇ ತರೆಗೆರ್ಲಾ ಒಂದೇ ಮಂತ್ರವನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ಏಕೆಂದರೆ, ಹಾಲ ನಮ್ಮಲ್ಲಿರುವ 7,75,000 ಎಕರೆಗಳಲ್ಲಿ ನಾರಾ ಸರಿ ಹತ್ತು ಪಟ್ಟು ಬತ್ತ ಬೆಳೆದರೆ ಸಾಕು, ನಮ್ಮಲ್ಲಿ ಅಕ್ಕಿಯ ಅಭಾವವೇ ಇರುವುದಿಲ್ಲವೆಂದು ಹೇಳಬಹುದು. ಹಾಗಿದ್ದರೂ ಜನಾಭಿಪ್ರಾಯವೇ ನಮ್ಮ ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದ ಬತ್ತದ ಅಭಾವವಿದೆಯೆಂದು ಹೇಳಿದ್ದಾರೆ. ಯುದ್ಧಕ್ಕೆ ಪೂರ್ವದಲ್ಲಿ 12 ಲಕ್ಷ ಟನ್ ಹೊರಗಡೆಯಿಂದ ಬರುತ್ತಿತ್ತು. ಆದರೂ ಯುದ್ಧ ಒರು ವರಗೂ ಇದರ ಬಿಸಿ ನಮಗೆ ತಟ್ಟಿರಲಿಲ್ಲ. ಯಾವಾಗ ಒಪ್ಪಿ ಬರ್ಮಾ ಇಂಗ್ಲೀಷರ ಕೈತಪ್ಪಿ ಮದ್ರಾಸ್ ಪ್ರಾಂತದ ಕಡೆಯಿಂದ ಮೈಸೂರುದೇಶಕ್ಕೆ ಅಕ್ಕಿಬಾರದೆ

ಹೋಯಿತೋ ಆಗ ನಮಗೆ ಇದರ ಕಷ್ಟ ಮನವರಿಕೆ ಯಾಯಿತು. ಆದ್ದರಿಂದ ಮಾನ್ಯ ಸದಸ್ಯರು ವಸ್ತುಸ್ಥಿತಿ ಯನ್ನು ಚೆನ್ನಾಗಿ ನೋಡಿ ಏನಾದರೂ ಸಲಹೆಗಳನ್ನು ಕೊಡಬೇಕು. ನಿಜ, ಕಂಟ್ರೋಲ್ ಏಕೆ? ಎಂಬುದು ಎಲ್ಲರ ಮನಸ್ಸಿನಲ್ಲೂ ಇದೆ. ಅದರೂ ಈಗಿನ ಪರಿಸ್ಥಿತಿ ಯಲ್ಲಿ ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಕೈ ಕಳಚಿಕೊಳ್ಳುವುದಕ್ಕಾಗುವುದಿಲ್ಲ. ದೇಶದಲ್ಲಿ ಅನಾಯ ಕತ್ವ ಉಂಟಾಗಬಹುದು. ಈ ಗುರಿಯನ್ನು ಎಷ್ಟು ನುಗಮವಾಗಿ ಸಾಧಿಸಬೇಕು, ಯಾವ ರೀತಿ ಈ ಪದ್ಧತಿ ಯನ್ನು ಮಾರ್ಪಾಟು ಮಾಡಬೇಕೆಂಬುದೇ ನಮ್ಮ ಯೋಚನೆಯೂ ಆಗಿದೆ. ಇದೂ ಅಲ್ಲದೆ ಇನ್ನೊಂದು ಕಠಿಣ ಪರಿಸ್ಥಿತಿಯೂ ಇದೆ. ನಾವಲ್ಲಾ ಈಗ 1944-45ನೆಯ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತಾಡುತ್ತಿದ್ದೇವೆ 1947ರಲ್ಲಿ ದೇಶವಿಭಾಗವಾದ ಮೇರೆ ಏನು ಹೆಚ್ಚಿನ ಕಷ್ಟ ಬಂದೊದಗಿತೆಂಬುದನ್ನು ಪರಿಶೀಲಿಸಬೇಕು ಇದರಿಂದ ಆಹಾರಪದಾರ್ಥವೊಂದೇ ಅಲ್ಲ, ಹತ್ತಿ, ಸೆಣಬು, ಎಣ್ಣೆ ಬೀಜಗಳು ಮುಂತಾದ ಅನೇಕ ಪದಾರ್ಥಗಳಿಗೆ ಕೊರತೆ ಪುರಾವಾಯಿತು. ಹೀಗಾಗಿ ನಮ್ಮ ದೇಶದ ಒಟ್ಟು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡರೆ ನಾವು ನಮ್ಮ ರೈತರು ವ್ಯಾಪಾರದ ಫಸಲುಗಳನ್ನೂ ಬೆಳೆಯಕೂಡದೆಂದು ಹೇಳುವುದು ಯುಕ್ತವಲ್ಲವೆಂದು ಕಾಣುತ್ತದೆ. ಈಗ ಹೊರಗಡೆ ಯಿಂದರೇ ಹತ್ತಿ, ಸೆಣಬು, ಎಣ್ಣೆ ಬೀಜಗಳನ್ನು ತರಿಸಿ ಕೊಳ್ಳಬೇಕಾಗಿ ಬಂದಿದೆ. ಪಾಕಿಸ್ತಾನದಿಂದ ಹತ್ತಿ ಬರುತ್ತಿದ್ದುದು ಹಣಕಾಸಿನ ಎಕ್ಸ್‌ಚೇಂಜ್ ತೊಂದರೆ ಗಳಿಂದ ನಿಂತುಹೋಗಿ ಎಷ್ಟೋ ಗಿರಣಿಗಳನ್ನು ಮುಚ್ಚ ಬೇಕಾಗಿ ಬಂದಿದೆಯೆಂದು ನೀವೇ ತಿಳಿದಿದ್ದೀರಿ. ನೂಲಿನ ಕೊರತೆ, ಬಟ್ಟೆಯ ಕೊರತೆ, ಆಹಾರ ಪದಾರ್ಥ ಗಳ ಕೊರತೆ, ಸೆಣಬು, ಎಣ್ಣೆಬೀಜ, ಸೀಮೆಎಣ್ಣೆ — ಹೀಗೆ ಅನೇಕ ಪದಾರ್ಥಗಳಿಗೆ, ಮನುಷ್ಯಜೀವನಕ್ಕೆ ಅತ್ಯ ಗತ್ಯವಾದ ಸಾಮಾನುಗಳಿಗೆ ಕೊರತೆಯುರುವಾಗ ಉದ್ವೇ ಗದಿಂದ ಮಾತನಾಡುವುದು, ವಿಷಯಗಳನ್ನು ತಿರುಗಿಸಿ ನಭೆಯ ಮುಂದಿಡುವುದು ಸರಿಯಲ್ಲ. ನಿಜ, ಇದು ಕಷ್ಟ ಕಾಲ! ಇನ್ನೂ ಎಷ್ಟು ವರ್ಷ ಹೀಗಿರುತ್ತದೆಯೋ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ಉರಿಯುವ ಬೆಂಕಿಗೆ ತುಪ್ಪ ಹಾಕಿದಹಾಗೆ ಪ್ರವಾಹಗಳು, ಭೂಕಂಪಗಳು, ಅತಿವೃಷ್ಟಿ, ಅನಾವೃಷ್ಟಿ — ಇವುಗಳೂ ಬಂದು ನಮಗೆ ಮತ್ತೂ ಕಷ್ಟ ಬಂತು. ಹೀಗೆ ಒಂದು ಕಡೆ ಪ್ರಾಕೃತಿಕ ಅನಾಹುತಗಳು, ಇನ್ನೊಂದು ಕಡೆ ಅನಿರೀಕ್ಷಿತ ಘಟನೆ ಗಳು ಬಂದು ಭಾರತದ ಆಹಾರದ ಸ್ಥಿತಿ ಇಷ್ಟು ಕಷ್ಟಕ್ಕೆ ಬಂದಿದೆ. ಇಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರೂ ಕೂಡ ತಮ್ಮ ಜವಾಬ್ದಾರಿಯನ್ನು ಅನಗಂಡು ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ. ಅದರಲ್ಲೂ ಅವರು ಪ್ರಾಂತಗಳಿಗೆ ಅಲ್ಪಸ್ವಲ್ಪ relaxations ತೋರಿಸುವು ದಕ್ಕೂ ತಯಾರಾಗಿದ್ದಾರೆ. ಆದರೆ ಒಂದು ವಿಷಯ: ಶ್ರೀವ ಕ ಭೀಮಪ್ಪನಾಯಕರು ಹೇಳಿದಹಾಗೆ ಒಳ್ಳೆಯ ಸರ್ಪ್ಲಸ್ ಪ್ರಾಂತ್ಯಗಳೇ ಈ ವರ್ಷ ಕಷ್ಟ ಕೊಳಗಾಗಿವೆ. ಭಾರತದಲ್ಲಿ ಸಾಮಾನ್ಯವಾಗಿ ಸಂಯುಕ್ತಪ್ರಾಂತಗಳು, ಮಧ್ಯಪ್ರಾಂತಗಳು ಅಕ್ಕಿಗೆ ಸರ್ಪ್ಲಸ್‌ಪ್ರಾಂತ್ಯಗಳೆಂದು ಪರಿಗಣಿಸಲ್ಪಟ್ಟಿವೆ. ದಕ್ಷಿಣ ಭಾರತವೆಲ್ಲಾ ಕೊರತೆಯ ಭಾಗಗಳೆಂದೇ ಕರೆಯಬಹುದು. ಆ ಸರ್ಪ್ಲಸ್ ಪ್ರಾಂತ ಗಳಿಂದ ನಮಗೆ ಧಾನ್ಯಗಳು ಬರುವ ಹಾಗಿದ್ದರೆ ನಮ ಗಿಷ್ಟು ಕಷ್ಟಪಡುತ್ತಿರಲಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ನಾವು ಇಡೀ ಭಾರತದೃಷ್ಟಿಯಿಂದ ನೋಡಿ ಯಾವ ರೀತಿ ನಮ್ಮ ನಮ್ಮಲ್ಲಿ ಏರ್ಪಾಡು ಮಾಡಿಕೊಳ್ಳ ಬೇಕೆಂಬುದನ್ನು ಯೋಚನೆಮಾಡಬೇಕು. ಯಾವ ರೀತಿ ಮಾಡಿದರೆ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೋ ಅದನ್ನು ಅದಷ್ಟುಬೇಗ ಜಾರಿಗೆ ತರುವುದಕ್ಕೆ ಪ್ರಯ ತ್ನವಾತುತ್ತೇನೆಂದು ಹೇಳುತ್ತೇನೆ.

ಈ ವಿಚಾರದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯ ರೊಬ್ಬರು ಸರ್ಕಾರದವರು ನಿರಾವರೀ ಕಾಮಗಾರಿ ಗಳಿಗೆ ಮಾತ್ರವುದೆಲ್ಲಾ ದಂಡ ಎಂದು ಹೇಳಿದರು. ಪ್ರಾಯಶಃ ಅವರಿದನ್ನು ಹೇಳದೆ ಇದ್ದರೆ ಚೆನ್ನಾಗಿರು ತ್ತಿತ್ತು. ಅದಂತೂ ಖಂಡಿತವಾಗಿಯೂ ಒಪ್ಪತಕ್ಕ ಮಾತಲ್ಲ. ಕನ್ವಂಬಾಡಿ ಕಟ್ಟದೆ ಹೋಗಿದ್ದರೆ ಆಗು ತ್ತಿತ್ತೇ? ಇನ್ನೂ ಅದರ ವಿಷಯದಲ್ಲಿ ಎಷ್ಟೋ ಕೆಲಸ ಗಳನ್ನು ಮಾಡಬೇಕಾದ್ದಿದೆ. ಎಷ್ಟೋ ಮಡಬಾಯಿ ಗಳನ್ನು ಮಾಡಬೇಕಾಗಿದೆ: ಕೆಳಕ್ಕೆ ಹರಿದುಹೋಗುವ ನೀರನ್ನು ಮತ್ತೆ ಮೇಲಕ್ಕೆತ್ತಿ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಳ್ಳಬಹುದಾಗಿದೆ. ನಾಲೆಯ ದಿಂಡುಗಳನ್ನು ಎತ್ತರಿಸಬೇಕಾಗಿದೆ. ಕಾಲುವೆಗಳಲ್ಲಿ ಸಿಲ್ಟ್ ತೆಗೆಸಿಕೊಡಬೇಕಾಗಿದೆ. ಇವಕ್ಕೆಲ್ಲಾ ಹಣ ಖರ್ಚು ಮಾಡಬೇಡವೆಂದರೆ ಹೇಗೆ? ಮಾಡಿದರೂ ಒಂದೆ ರಡು ವರ್ಷಗಳಲ್ಲೇ ಮಾಡಿ ಮುಗಿಸುವುದಕ್ಕಾಗುತ್ತ ದೆಯೇ! ಹೀಗೆಯೇ ಇನ್ನೂ ಎಷ್ಟೋ ಇವೆ. ಹೆಬ್ಬಳ್ಳಕ್ಕೆ pick-ups ಆಕಾಯಿದೆ. 1945ನೆಯ ಇಸವಿಯಲ್ಲೇ ಮಂಜೂರಾಯಿತು. ಇದುವರೆಗೂ ಅದನ್ನು ಮಾಡಿರ ಲಿಲ್ಲ. ಅಂಥಾದ್ದನ್ನು ಈ ವರ್ಷ ಒಂದೂವರೆ ತಿಂಗಳಲ್ಲಿ ಮಾಡಿಸಿದ್ದೇನೆ. ಇದರಿಂದ 6,000 ಎಕರೆಗಳು ಸಾಗು ವಳಿಗೆ ಬರುತ್ತೆ. ಇದೇ ಪ್ರಕಾರ ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯ. ಇದೆಲ್ಲಾ ಮಂತ್ರದಿಂದ ಆಗಿಬಿಡುತ್ತದೆಯೇ! ಎಷ್ಟೋ ವರ್ಷಗಳು ಕೆಲಸ ಮಾಡಬೇಕು. ಏಕೆಂದರೆ ವರ್ಷದಲ್ಲಿ ಆರೇ ತಿಂಗಳು ನಾವು ಕೆಲಸ ಮಾಡುವುದಕ್ಕಿರುವ ಕಾಲ. ಒಂದು ತೂಬು ಹಾಕಿ ಕೊಡಬೇಕಾದರೂ ಭದ್ರಾವತಿಯಿಂದ ಪೈಪುಗಳು ಬರುವೆ ಸ್ವಲ್ಪ ತಡವಾದರೂ ಕಾಲ ಮೀರಿ ಹೋಗುತ್ತೆ. ಮಾಡುತ್ತಿರುವಾಗ ಅಕಸ್ಮಾತ್ತಾಗಿ ಮಧ್ಯೆ ಮಳೆ ಬಂದರೂ ಅಲ್ಲಿಗೆ ಕೆಲಸ ನಿಲ್ಲುತ್ತೆ. ಹೀಗಿ ರುವಲ್ಲಿ ಎಷ್ಟೋ ಕೆರೆಗಳನ್ನು ಹೂಣಸೂರು, ಪಿರಿಯಾ ಪಟ್ಟಣದ ಕಡೆ ಮಾಡಿಸಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಎಷ್ಟು ಕೆರೆಗಳನ್ನು ರಿಪೇರಿ ಮಾಡಿಸಿದ್ದೇವೆ, ಎಷ್ಟು ಕಡೆ pick ups ಏರ್ಪಡಿಸಿದ್ದೇವೆಂದು ತಮಗೆ ಬೇಕಾದರೆ ಅಂಕಿ ಅಂಶಗಳನ್ನು ಕೊಡಬಲ್ಲೆ. ಕೃಷ್ಣ ರಾಜಸಾಗರ ಕಟ್ಟೆಯ ಕೆಳಗಡೆ ಒಂದೊಂದು ನಾಲೆಯ ಮೇಲೂ ನಾನೇ ನಡೆದುಕೊಂಡು ಹೋಗಿ ಎಷ್ಟೋ ಸಣ್ಣ ಸಣ್ಣ ನೀರಾವರೀ ಕಾಮಗಾರಿಗಳನ್ನು ಮಾಡಿಸಿ ಕೊಟ್ಟು ರೈತರಿಗೆ ಎಷ್ಟೋ ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಅದು ನಿಜ. ನಾರಾ ಕೆಳಗೆ 2,000 ಎಕರೆ ಪ್ರದೇಶದಲ್ಲಿ ತುದಿಯ ವರೆಗೂ ಸಮೃದ್ಧಿಯಾಗಿ ಈಗ ನೀರು ಹೋಗುವ ಹಾಗಾಗಿದೆ.

Sri H. M. CHANNABASAPPA.—If production has increased, why is it that procurement has fallen?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೃಷ್ಣರಾಜ ನಗರದಲ್ಲಿ ಒಂದೊಂದು ಊರಿನಲ್ಲೂ $1\frac{1}{2}$ ಲಕ್ಷ ಪರ್ಸಾ ವಸೂಲು ಮಾಡಿದ್ದೇವೆ. That too, in the briefest time, in a voluntary manner they have come and surrendered their paddy. ಏಕೆಂದರೆ ಆ ಭಾಗದಲ್ಲಿ ನೀರಾವರೀ ಕೆಲಸ ಗಳನ್ನೆಲ್ಲಾ ಒಬ್ಬರಿಂದಲೂ ಯಾವ ಒಂದು ದೂರಿಲ್ಲದ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ರೀತಿಯಲ್ಲಿ ಮಾಡಿಸಿಕೊಟ್ಟಿದ್ದೇವೆ. ಸಂತೋಷದಿಂದ ತಾವೇತಾವಾಗಿ ತಂದುಕೊಟ್ಟಿದ್ದಾರೆ. ಪೊನ್ನೆ ಮುಖ್ಯ ಮಂತ್ರಿಗಳು ಚುಂಚನಕಟ್ಟೆಗೆ ಹೋದಾಗ ಅನೇಕ ರೈತರುಗಳು ನಾವು ಮಾಡಿರುವ ಕೆಲಸಕ್ಕಾಗಿ ಮುಕ್ತ ಕಂಠದಿಂದ ಹೊಗಳಿ ತಮ್ಮ ಅಪಾರ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ನಮಗೆ ಮುಖ್ಯವಾಗಿ ಒಂದು ವಿಷಯ ವೇದ್ಯವಾಗುತ್ತದೆ. ರೈತರುಗಳ ಮನಸ್ಸಿಗೆ ಸಮಾಧಾನಪಡಿಸುವಂತೆ ಅವರಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಕೊಟ್ಟರೆ ಅವರೇ ಸಂತೋಷದಿಂದ ತಾವು ಬೆಳೆದ ದವಸವನ್ನು ತಂದು ಕೊಡುವುದಕ್ಕೆ ಸಿದ್ಧವಾಗಿರುತ್ತಾರೆ. ಅವರಿಗಿರತಕ್ಕ ನೀರಿನತೊಂದರೆಯನ್ನು ನಾವು ಮುಖ್ಯವಾಗಿ ತಪ್ಪಿಸಿದರೆ ಭತ್ತ ವಸೂಲು ಮಾಡುವುದರಲ್ಲಿ ಏನೂ ತೊಂದರೆಯಿರುವುದಿಲ್ಲ. ಕೃಷ್ಣರಾಜಸಾಗರದ ಕೆಳಗೆ ಅಲ್ಲಿರುವ ನುವಾರು 23000 ಎಕರೆಗಳಿಂದ ಎರಡು ಲಕ್ಷ ಪಲ್ಲಾ ಗಳಷ್ಟು ವಸೂಲುಮಾಡಿದ್ದೇವೆ. ಆ ತಾಲ್ಲೂಕಿನ ಮಟ್ಟಿಗೆ ವಸೂರಾತಿ ಏನೂ ಕಷ್ಟವಿಲ್ಲ. ಅವರಿಗಿರತಕ್ಕ ಕಷ್ಟಗಳನ್ನೆಲ್ಲಾ ನಿವಾರಿಸಿಕೊಟ್ಟಿದ್ದೇವೆ. 2-3 ವರ್ಷ ದಿಂದ ಆ ನಾಲೆಗಳನ್ನು ಗ್ರೇಡಿಂಗ್ ಮಾಡಿರಲಿಲ್ಲ. 48 ಅಡಿ ಅಳವಿರತಕ್ಕದ್ದು 20 ಅಡಿಗಳಿಗೆ ಇಳಿದಿತ್ತು. ಅದನ್ನೆಲ್ಲಾ ತೆಗೆಸಿ ರಿಪೇರಿ ಮಾಡಿಸಿದ್ದೇವೆ. ಅದೇ ರೀತಿ ನಂಜನಗೂಡಿನಲ್ಲೂ ಕೂಡ ಮಾಡಿಕೊಟ್ಟಿದ್ದೇವೆ. ಇದೇ ಪ್ರಕಾರ ಅನೇಕ ಕಡೆ ಸಣ್ಣ ಕೆರೆಗಳ ದುರಸ್ತಿ ನಡೆದಿದೆ. ಆದರೆ ಇವುಗಳಿಂದರೇ ಅಲ್ಲಿ ಬೆಳೆ ಬಂದೇ ಬರುತ್ತದೆಂದು ಖಾತರಿ ಪಡುವುದಕ್ಕಾಗುವುದಿಲ್ಲ. ನಾವು ಮಾಡಿಸಿದ್ದಕ್ಕೆ ತಕ್ಕಹಾಗೆ ಮಳೆಯೂ ಹುಯ್ಯಬೇಕು. ಕೋರಾರ ಡಿಸ್ಟ್ರಿಕ್ಟಿನ ವಿಚಾರದಲ್ಲಿ ಮೈನರ್ ಕೆರೆಗಳ ಜೀರ್ಣೋದ್ಧಾರದ ಕೆಲಸ ಬಹಳ ತುರ್ತಾಗಿದೆಯೆಂಬುದನ್ನು ತಿಳಿದು ಅಲ್ಲಿ 120 ಕೆರೆಗಳನ್ನು ಈ ಸಾರಿ ರಿಪೇರಿ ಮಾಡಿದ್ದೇವೆ. ಆದರೇನು : ಮಳೆ ಬರಲಿಲ್ಲ, ಹಿಂಗಾರು ಮಳೆ ಬಾರದೆ ಹಾಕಿದ ಭತ್ತದ ಬೀಜ ಕೂಡ ವಾಪಸು ಬರುವಷ್ಟು ಬೆಳೆಯಾಗಲಿಲ್ಲ. ಮಾಲೂರಿನಲ್ಲಿ ಒಂದು ಭಾಗಕ್ಕೆ, ಬೌರಿಂಗ್‌ಪೇಟೆ, ಮಳಬಾಗಿಲು—ಈ ಮೂರು ತಾಲ್ಲೂಕುಗಳಲ್ಲಿ ಈ ಸಾರಿ ಏನೂ ಆಗಿಲ್ಲ. ಆದರೂ ಈ acreageನ್ನೂ ಇಲ್ಲಿ ಅಂಕಿಗಳಲ್ಲಿ ಸೇರಿಸ ಬೇಕಾಗಿತ್ತು ! ಹಿಂದೆ ಒಮ್ಮೆ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ರವಾಹ ಬಂದು ಭತ್ತದ ಗದ್ದೆಗಳೆಲ್ಲಾ ಕೊಚ್ಚಿ ಕೊಂಡು ಹೋದುವು. ಆದ್ದರಿಂದ ಇವುಗಳನ್ನೆಲ್ಲಾ ಬಿಟ್ಟು ಬಿಟ್ಟು 7ಲಕ್ಷ 75,000 ಎಕರೆಗಳೆಂದು acreage ತೋರಿಸಿದೆ. ಸರಿಯಾಗಿ ಮಳೆಯಾಗಿದ್ದರೆ ಇನ್ನೂ 50-60 ಸಾವಿರ ಎಕರೆಯಲ್ಲಿ ಬೆಳೆಯಾಗುತ್ತಿತ್ತು.

ಇನ್ನೊಂದು ಪ್ರಶ್ನೆಯನೆಂದರೆ-ಈಗ ನಿಜವಾಗಿಯೂ ಹಿಂದೆಲ್ಲಾ ಎಷ್ಟು ಎಕರೆ ಜಮೀನುಗಳಲ್ಲಿ ರಾಗಿ ಬೆಳೆಯಾಗುತಿತ್ತೋ ಈಗ ಅಷ್ಟು ಎಕರೆಗಳಲ್ಲಿ ಬೆಳೆಯಾಗುತ್ತಿಲ್ಲ. ಅದು ಕಮ್ಮಿಯಾಗಿದೆ. ಹಿಂದೆ 2ಲಕ್ಷ ಎಕರೆ ಗಳಷ್ಟು ಪ್ರದೇಶದಲ್ಲಿ ರಾಗಿ ಬೆಳೆಯಾಗುತ್ತಿತ್ತು. ಈಗ ಆ ಪೈಕಿ 4 ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಈ ಬೆಳೆಯನ್ನು ಬೆಳೆಯದೆ ಬೇರೆ ಬೆಳೆಯನ್ನು ತೆಗೆಯುತ್ತಿದ್ದಾರೆ. ಈ ಪೈಕಿ ಕೇವಲ ನೆಲಗಡಲೆ ಕಾಯಿ ಬೆಳೆಯುತ್ತಿರುವ ಜಮೀನು ಹಿಂದೆ 400-500 ಎಕರೆ ಇದ್ದುದ್ದು ಈಗ ಒಂದು ಸಾವಿರ ಎಕರೆಗೆ ಹೋಗಿರಬಹುದು. ಆದರೆ ಹಾಸನದ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಆ ಜಿಲ್ಲೆಯ ಜಮೀನೆಲ್ಲ ರಾಗಿ ಬೆಳೆಗೆ ಪ್ರಸಿದ್ಧಿಯಾದಂಥ ಜಮೀನುಗಳು. ಅಷ್ಟೇ ಅಲ್ಲ ರಾಗಿಗೆ ತವರೂರಾಗಿತ್ತು. ಆದರೆ ಅಲ್ಲಿ ಈಗ ಅವರು ಯಾರೂ ರಾಗಿಯನ್ನು ಬೆಳೆಯುತ್ತಿಲ್ಲ. ಬರಿ ಅಲೂಗಡ್ಡೆ ಮಾತ್ರ ಬೆಳೆಯುತ್ತಿದ್ದಾರೆ. ಆದರೆ ಈ ಅಲೂಗಡ್ಡೆಯಾಲ್ಲಾ ಹೊರಗಡೆ ಸಾಗಿಹೋಗತಕ್ಕ ವಸ್ತುವೇ ವಿನಾ ಅದನ್ನು ನಮ್ಮ ಸಂಸ್ಥಾನದಲ್ಲಿ ಉಪಯೋಗಿಸುವುದು ಸಾಮಾನ್ಯ. ಹೀಗೆರಲ್ಲಾ ಆಗಿ ಎಲ್ಲೆಲ್ಲ ನಮಗೆ ಬೇಕಾದ ಬೆಳೆಯನ್ನು ಬೆಳೆಯಬಹುದಿತ್ತೋ ಆಲ್ಲೆರಲ್ಲಾ ಈಗ ನಮಗೆ ಪ್ರತಿಕೂಲವಾದ ಬೆಳೆಗಳನ್ನಿಡುತ್ತಿದ್ದಾರೆ ಈ ಬಗ್ಗೆ ಹಾಸನ ಜಿಲ್ಲೆಯಿಂದ ಬಂದಿರತಕ್ಕ ಮಾನ್ಯ ಸದಸ್ಯರು ಗಳು ಸ್ವಲ್ಪ ಗಮನಿಸಬೇಕಾಗಿದೆ.

ದಿಷ್ಟೆ ಬೆಳೆ ಹೀಗೆ ಲ್ಲಾ ಆದುದರಿಂದ ನಾಲ್ಕು ಕಾಳು ಬತ್ತವಾದರೂ ಸಿಕ್ಕಲಿ ಎಂಬ ಒಂದು ಆಸೆಯಿಂದ ನಾವು ಈಗ ಎಲ್ಲೆಲ್ಲಿ ಸಣ್ಣಸಣ್ಣ ಕೆರೆಗಳಿವೆಯೋ ಆಲ್ಲೆರಲ್ಲಾ ಅವುಗಳನ್ನು ದುರಸ್ತಿ ಮಾಡಿಸುವ ಒಂದು short term schemeನ್ನು ಕೈಗೊಂಡು ಕೆಲಸ ಮಾಡುತ್ತಿದ್ದೇವೆ. ಈಗ ನಾವು ಈ ಸಂಬಂಧವಾಗಿ ಕೈಗೊಂಡಿರುವುದು ಸಣ್ಣ ಕೆರೆಗಳ ಜೀರ್ಣೋದ್ಧಾರ ಕಾರ್ಯ, ತೂಬು, ಮೊಡಬಾಯಿಗಳ ದುರಸ್ತಿ, ಪಿಕಪ್ ಧಾನರ್ಸ್, ಇತ್ಯಾದಿ ಬಾಬುಗಳು ಇವುಗಳನ್ನು ನಾವು ರೈತರ ಹಿತದೃಷ್ಟಿಯಿಂದ ಇಂದಲ್ಲ ನಾಳೆ ಮಾಡಿತರೇ ಬೇಕಾಗುತ್ತೆ. ಇಂಥಾ ಸಣ್ಣ ಪುಟ್ಟ ಕೆಲಸ ಕಾರ್ಯಗಳನ್ನು ನಾವು ಮಾಡಿಸಿಕೊಡದಿದ್ದಲ್ಲಿ, ಅದರಿಂದ ರೈತರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಹೇಳುವಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಈ ಎಲ್ಲಾ ಅಂಶಗಳನ್ನೂ ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿಯೇ ಈ ಕೆಲಸಕಾರ್ಯಗಳನ್ನು ಕೈಗೊಂಡಿರುವುದು. ಆದ್ದರಿಂದ ನಮ್ಮ ವಿನಿಯೋಗದ ರೀತಿ ನೀತಿ ಸರಿಯಾಗಿಲ್ಲವೆಂದು ಹೇಳರತಕ್ಕ ದನ್ನು ಒಪ್ಪುವುದಕ್ಕಾಗುವುದಿಲ್ಲ. ಇಷ್ಟೂ ಅಲ್ಲದೆ ಈಗ ನಾವು ಹಾಕಿಕೊಂಡಿರತಕ್ಕಂಥ ಯೋಜನೆಗಳನ್ನೆಲ್ಲಾ, ಕೇಂದ್ರ ಸರ್ಕಾರದವರು, ನಮಗೆ ಹಣವನ್ನು ಸಾಲವಾಗಿ ಕೊಟ್ಟಿರುವಂಥ ಸರ್ಕಾರದವರ ಕಡೆಯಿಂದ ಬಂದಿದ್ದಂಥ ನಿಪುಣರೂ ಕೂಡ ಇದನ್ನೆಲ್ಲಾ ವಿವರವಾಗಿ ಪರಿಶೀಲಿಸಿ, ನಮ್ಮ ಯೋಜನೆಗಳು ಚೆನ್ನಾಗಿವೆಯೆಂದು ಒಪ್ಪಿಕೊಂಡು ಹೋಗಿದ್ದಾರೆ. ಹೀಗೆ ನಮಗೆ 70ಲಕ್ಷ ರೂಪಾಯಿಗಳ ಸಾಲಕೊಟ್ಟಿರತಕ್ಕ ಸರ್ಕಾರದ ಪರ ಜನಗಳೂ ಕೂಡ ನಮ್ಮ ಕಾರ್ಯನೀತಿಯನ್ನು ಒಪ್ಪಿಕೊಂಡಿದ್ದಾರೆ. ಆದರೆ ದೊಡ್ಡ ಯೋಜನೆಗಳನ್ನು ಮಾಡುವಾರವೆಂದೇನೂ ನಾವು ಹೇಳುತ್ತಿಲ್ಲ. ಆದರೆ ಅವು ನಮಗೆ ಫಲ ಕೊಡುವುದು ಬಹಳ ನಿಧಾನವಾಗುತ್ತದೆ ಅಷ್ಟೆ. ಈ ಬಗ್ಗೆ ನಾನು ತಮಗೊಂದು ನಿದರ್ಶನ ಕೊಡಬೇಕಾಗಿದೆ. ನೆಲ್ಲಿಗುಡ್ಡದ ಯೋಜನೆಯ ಬಗ್ಗೆ ಒಂದು ಸಾವಿರ ಎಕರೆ ಸಾಗುವಳಿಗೆ ಬರುವ ನಿರೀಕ್ಷಣೆಯಿಂದ ನಾವು ಅಲ್ಲಿ 6-7 ಲಕ್ಷ ರೂಪಾಯಿ ಗಳವರೆಗೆ ಖರ್ಚು ಮಾಡಿದ್ದಾಯಿತು. ಆದರೆ ಇನ್ನೂ ಸರಿಯಾಗಿ 500 ಎಕರೆಗಳು ಕೂಡ ಸಾಗುವಳಿಗೆ ಬಂದಿಲ್ಲ. ಆದರೆ ನಮ್ಮ ವಿಶೇಷ ಒತ್ತಾಯದ ಮೇಲು ವಾಗಿ ಈ ವರ್ಷ ಇನ್ನೂ 0 ಎಕರೆ ಕಾಸ್ತಿ ಸಾಗಾಗಿದೆಯೆಂದು ತಿಳಿದು ಬಂದಿದೆ. ಇದೇ ರೀತಿ ಮೈರ ಮಂಗಲದಲ್ಲಿ 400 ಎಕರೆ ಇನ್ನೂ ಸಾಗುವಳಿಗೆ ಬಂದೇ ಇಲ್ಲ. ಸಾಕಾಗುವಷ್ಟು ನೀರಿನ ಸರಬರಾಯಿ ಇದ್ದಾಗ್ಯೂ ವ್ಯವಸಾಯ ಮಾತ್ರ ಮುಂದುವರಿದಿಲ್ಲ. ಹೀಗೆ ಕಷ್ಟಗಳು ನಾನಾ ರೀತಿ ಇವೆ. ಎಲ್ಲ ಇನು ಮನುಷ್ಯ ಪ್ರಯತ್ನವಾಡಲು ಸಾಧ್ಯವಿಲ್ಲವೆಂದೂ ತೋರುತ್ತದೋ ಅಲ್ಲಿಯತನಕವೂ ನಾವು ಪ್ರಯತ್ನಮಾಡಿದ್ದೇವೆ. ಕೇವಲ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ನಿಂತುಹೋಗಿದೆ. ಕೆಲಸ ಮಾಡತಕ್ಕ ಗಂಡ ಹೆಂಡತಿ ಕಾಯಿಲೆ ಬದ್ದು ಮಲಗಿ ಬಿಟ್ಟರೆ, ಒಂದು ವರ್ಷದ ಬದುಕೇ ಹೋಗಿ

ಬಿಡುತ್ತೆ. ದಾರಿಯಲ್ಲಿ ಬರುತ್ತಿರುವಾಗ ಎತ್ತು ಕಾಲು ಜಾರಿ ಉಳಿಕೆಕೊಂಡರೆ ಅತನ ವ್ಯವಸಾಯವೇ ನಿಂತು ಹೋಗುತ್ತೆ.

Sri H. M. CHANNABASAPPA.—On a point of self-explanation. You have spent Rs. 25 lakhs for two works which have brought under cultivation or improved only 1,300 acres at a cost of Rs. 2000 an acre.

The Hon'ble Sri T. MARIAPPA.—It is not correct. I have already told him that Rs. 26 lakhs are spread over 18 works, of which only two are completed. He is totally wrong. He wants to mislead. He is at liberty to do so but, I am not prepared to yield.

ಮಾನ್ಯ ಸದಸ್ಯರು ಇನ್ನೊಂದು ವಿಚಾರ ಹೇಳಿದ್ದಾರೆ. ಅದೇನೆಂದರೆ, 1944ನೆಯ ಇಸವಿಯಿಂದೀಚೆಗೆ ಈ ಆಹಾರ ಸಂಗ್ರಹಣೆಯಲ್ಲಿ ದವಸ ಕಮ್ಮಿಯಾಗಿ ವಸೂಲಾಗುತ್ತಿದೆ ಎಂದು. ಆದರೆ ಹಿಂದೆ ಆ ರೀತಿ ರೈತರಲ್ಲಿ ದವಸ ಅಷ್ಟು ಹೆಚ್ಚಾಗಿತ್ತು, ಅದ್ದರಿಂದ ಆ ಒಂದು ವರ್ಷ ಹಾಗೆ ಜಾಸ್ತಿ ವಸೂಲಾಗಿರುತ್ತೆ. ಅಲ್ಲದೆ ಆಗ ನಾವು ಇದೇ ಸಭೆಯಲ್ಲಿ ಕುಳಿತು ಆಗಿದ್ದ ಸರ್ಕಾರಕ್ಕೆ ಈ ಬಗ್ಗೆ ಬೇಕಾದಷ್ಟು ಒತ್ತಾಯವನ್ನು ಮಾಡಿದ್ದೂ ಕೂಡ ಒಂದು ಕಾರಣವಾಯಿತು. ಅದಾಗ್ಯೂ ಈಗ ರೈತರಲ್ಲಿ ಅಂಥ ದವಸದ ದಾಸ್ತಾನೇ ಇಲ್ಲದಿದ್ದಾಗ್ಯೂ, ನಮ್ಮ ವಸೂಲಿಯಲ್ಲಿ ವರ್ಷೇ ವರ್ಷೇ ಆಹಾರ ಧಾನ್ಯವನ್ನು ಹೆಚ್ಚು ಹೆಚ್ಚಾಗಿ ವಸೂಲುಮಾಡಿರುವುದು ಅಂಕಿ-ಅಂಶಗಳಿಂದಲೇ ಎಲ್ಲರಿಗೂ ವೇದ್ಯವಾಗುತ್ತದೆ. ಈ ಬಗ್ಗೆ ಒಂದನ್ನೂ ಮರೆಮಾಚದೆ ತಮಗೆ ತಿಳಿಸುತ್ತಿದ್ದೇನೆ. ಆದರೆ ಈ ಧಾನ್ಯ ಸಂಗ್ರಹಣೆಯಲ್ಲಿ ನಾವು ತಲೆಗೆಲ್ಲ ಒಂದೇ ಮಂತ್ರ ಹಾಕುವುದ ಕ್ಕಾಗುವುದಿಲ್ಲ. ಕೆಲವು ಕಡೆ ಎಕರೆಯೊಂದಕ್ಕೆ ಕೇವಲ 6 ಸೇರು, 10 ಸೇರು ರಾಗಿ ಬೆಳೆದಿರುವ ನಿದರ್ಶನಗಳಿವೆ. ಆದರೆ ಅದರ ಜೊತೆಗೆ ಎಕರೆಗೆ 10—14 ಪಲ್ಲ ರಾಗಿ ಬೆಳೆದಿರುವ ನಿದರ್ಶನಗಳೂ ಇವೆ. ಹೀಗೆ ಎಕರೆಗೆ 10—14 ಪಲ್ಲ ಬೆಳೆ ಆಗತಕ್ಕ ಜಮೀನುಗಳ ಪಕ್ಕದಲ್ಲಿರತಕ್ಕ ಜಮೀನಿನಲ್ಲೇ 3—4 ಪಲ್ಲಾ ಕೂಡ ಆಗದಿರುವುದು ನಮ್ಮ ನಿದರ್ಶನಕ್ಕೆ ಬಂದಿದೆ. ಆದ್ದರಿಂದ ಎಲ್ಲಾ ಸಂದರ್ಭಗಳಲ್ಲಿಯೂ ಒಂದೇ ಮಂತ್ರ ಹಾಕಿ ರೈತರಿಗೆ ಕಿರುಕುಳ ಉಂಟುಮಾಡಬಾರದು. ಒಟ್ಟಿನಲ್ಲಿ ನಾನು ಹೇಳುವುದಾದರೆ 1943ರಿಂದಲೂ 1950ರ ತನಕ ಪ್ರತಿವರ್ಷವೂ ಈ procurement improve ಆಗುತ್ತಿದೆ. 1945—46ರಲ್ಲಿ 6 ಲಕ್ಷ 49 ಸಾವಿರ ಪಲ್ಲ ವಸೂಲಾಗಿದೆ. 1946—47ರಲ್ಲಿ 9 ಲಕ್ಷ ಚಿಲ್ಲರೆ ಪಲ್ಲಾಗಳೂ, 47—48ರಲ್ಲಿ 6 ಲಕ್ಷ 9 ಸಾವಿರ ಪಲ್ಲಾಗಳೂ, 1948—49ರಲ್ಲಿ 8 ಲಕ್ಷ 30 ಸಾವಿರ ಪಲ್ಲಾಗಳೂ, 49—50ರಲ್ಲಿ 8 ಲಕ್ಷ 31 ಸಾವಿರ ಪಲ್ಲಗಳೂ, ಹೀಗೆ ವರ್ಷೇ ವರ್ಷೇ ಹೆಚ್ಚಾಗಿರುತ್ತದೆಯೇ ವಿನಾ ವಸೂಲಿ ಎಂದಿಗೂ ಕಮ್ಮಿಯಾಗಿಲ್ಲ. ಕೇವಲ 1944ರ ಅಂಕಿಗಳನ್ನೇ ತೆಗೆದುಕೊಳ್ಳುವುದು ಒಂದು ಬುದ್ಧಿವಂತಿಕೆಯಲ್ಲ.

Sri H. M. CHANNABASAPPA.—Wrong information. That year all paddy was procured.

ಮಾನ್ಯ ಶ್ರೀ ಟಿ. ಮರಿಯಪ್ಪನವರು:—ಆ 1944 ಮತ್ತು 45 ಎರಡು ವರ್ಷಗಳನ್ನೂ ಲೆಕ್ಕಕ್ಕೇ ತೆಗೆದು ಕೊಳ್ಳಬಾರದು. ಅದನ್ನು ಬಿಟ್ಟುಕೊಂಡು ಬೇಕಾದಷ್ಟು ಈ ಸಂಗ್ರಹಣೆ ಕಾರ್ಯವು ಹೆಚ್ಚು ವಸೂಲಿಯಲ್ಲದೆಯೇ ವಿನಾ ಎಂದೂ ಕಮ್ಮಿಯಾಗಿಲ್ಲ. ಆದರೆ ಅನಿವಾರ್ಯ ಸಂದರ್ಭಗಳೊದಗಿ ಚಿಕ್ಕಕೆರೆ ತಾಲ್ಲೂಕಿನಲ್ಲಿ ಕೆಲವು ಬೆಳೆಗಳೆಲ್ಲಾ ಒಣಗಿಹೋದವು. ಅದೇ ರೀತಿ ಮಾಲೂರು ತಾಲ್ಲೂಕು, ಬೌರಿಂಗ್‌ಪೇಟೆ ತಾಲ್ಲೂಕುಗಳಲ್ಲಿ ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿ ಅಲ್ಲಿ ನಾವು ನಿರೀಕ್ಷಿಸಿದ್ದ ಧಾನ್ಯ ನಮಗೆ ಬಾರದೆ ಹೋಯಿತು. ಆದರೆ ಈಗ ನಾವು ಹಾಕಿಕೊಂಡಿರುವ ಅಂದಾಜೆಲ್ಲ ಅಷ್ಟು ನಿಖರವಾದ್ದಲ್ಲ. ಹೆಚ್ಚು ಕಮ್ಮಿ ಆಗುವುದಕ್ಕೆ ಹೊಣೆಯಾಗಿದೆ. ಇದನ್ನು ನಾವು ಒಕ್ಕಣಿಯ ಕಾಲದಲ್ಲಿ ಅಂದಾಜು ಹಾಕಿದ್ದರೇನೇ ಕೊಂಚ ನಿಖರವಾಗಿರುತ್ತದೆ. ನಾವು ಬೆಳೆಯ ತಲೆಯ ಮೇಲೆ ಇಷ್ಟಾಗಬಹುದೆಂದು ಅಂದಾಜು ಮಾಡಿದ್ದಾಗ ಒಂದೆರಡು ಹದ ನೀರು ತಪ್ಪಿ ಹೋಗಿ, ಅದು ಬಿತ್ತಿ ಹೋದರೆ, ಅಥವಾ ಸ್ವಲ್ಪ ನಲುಗಿ ಹೋದರೆ ಫಸಲಿನಲ್ಲಿ ತಗ್ಗುವರಿ ಬಂದುಬಿಡುತ್ತೆ. ಈಗ ತಾನೆ ಯಾರೋ ಒಬ್ಬ ಮಹನೀಯರು ಬಂದು ಹೇಳಿದರು.—ಚಾಮರಾಜನಗರ, ಯಳಂದೂರು ಮತ್ತು ಗುಂಡ್ಲುಪೇಟೆ ಈ ತಾಲ್ಲೂಕುಗಳಲ್ಲಿ ಮಳೆ ಸಾಲಕ್ಕೆ ಬಾರದೆಹೋಗಿ ಅಲ್ಲಿ ಪರಿಸ್ಥಿತಿ ಬಹಳ ಭಯಂಕರವಾಗಿದೆ ಎಂದು. ನಾವು ಅಲ್ಲಿ ಅನೇಕರಿಗೆ ಬೀಜ ವಗೈರೆ ಎಲ್ಲಾ ಕೊಟ್ಟಿದ್ದೆವು. 50 ಸಾವಿರ ಎಕರೆಯಲ್ಲಿ ಭತ್ತದ ಬೆಳೆ ಆಗುವ ನಿರೀಕ್ಷಣೆಯಿತ್ತು. ಆದರೆ ನೀರೇ ಬಾರದೆ ಅದೆಲ್ಲ ಒಣಗಿ ಹೋಯಿತು. ಹೀಗಾಗಿ ಹಾಕಿದ ಬೀಜ ಸಹ ಅವರಿಗೆ ಸಿಕ್ಕದೆ ಲುಕ್ಸಾನಾಗಿರುವ ಸಂದರ್ಭಗಳೂ ಎಷ್ಟೋ ಇವೆ. ಹಿಂದೆ ಏನಾಗಿದೆಯೆಂಬುದನ್ನು ನೋಡದೆ ಏಕ್‌ದಂ ಏನಾದರೂ ಮಾಡತಕ್ಕದ್ದು ಬುದ್ಧಿವಂತಿಕೆಯಲ್ಲ ಮತ್ತು ಅದು ಜವಾಬ್ದಾರಿ ಸರ್ಕಾರದ ಲಕ್ಷಣವಲ್ಲ. ಆದ್ದರಿಂದ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸರಿಯಾಗಿ ಎಲ್ಲರಿಗೂ ಹಂಚಬೇಕು.

ಇದು ಎಲ್ಲ ಪ್ರಜೆಗಳ ಕರ್ತವ್ಯ; ಪ್ರಜಾಸರ್ಕಾರ. ಈ ಸರ್ಕಾರ ಹೋದರೆ ಬೇರೆ ಇನ್ನೊಂದು ಬಗಬೇಕು. ಬರೀ ಸರ್ಕಾರವನ್ನು ಟೀಕೆ ಮಾಡಿದರೆ ಭೂಮಿಯಿಂದ ಬೆಳೆಯುತ್ತದೆಯೆ? ಯಾವ ಮನುಷ್ಯನಿಗೆ ತಲೆ ತಾಕುತ್ತದೆಯೋ ಅವನಿಗೆ ಜವಾಬ್ದಾರಿಯ ಅರಿವಿರುತ್ತದೆ. ಹೊರಗೆ ಏನು ಪರಿಸ್ಥಿತಿಯಿದೆಯೆಂಬುದನ್ನು ಚೆನ್ನಾಗಿ ಅರಿಯಬೇಕು. ಜನರು ಸಹಕಾರಮಾಡದೇ ಹೋದರೆ ಗತಿಯೇನು? ನಿಜವಾಗಿಯೂ ಮನಸ್ಸಿನಲ್ಲಿ ದೇಶಭಕ್ತಿಯಿದ್ದರೆ ಅದು ಹೊರಪಡಬೇಕಾದರೆ ಒಂದು ಪ್ರವಾಹದಂತೆ ಹರಿಯುತ್ತಾ ಇರಬೇಕು; ಆಗ ಎಲ್ಲಾ ಸರಿ ಹೋಗುತ್ತದೆ. ನಮ್ಮ ದೇಶವನ್ನು ನಾವು ಹದಮಾಡಿ ಕೊಳ್ಳಬೇಕೇ ಹೊರತು ಆಕ್ಷೇಪಮಾಡಬಾರದು. ಹಾಗೆ ಮಾಡುವುದರಿಂದ ಅನುಕೂಲವಿಲ್ಲ. ಪ್ರಚಾರಮಾಡುವ ಕಾಲ ಹೋಯಿತು. ಈಗ ಪುನರ್ರಚನೆ ಮಾಡುವ ಕಾಲ. ಜನರ ಮನಸ್ಸು ಏನೋ ಒಂದು ರೀತಿ ಬದಲಾವಣೆ ಹೊಂದಿದೆ. ಇದು ನಮ್ಮ ದೇಶದ ದುರಾದೃಷ್ಟ. ಜನ ಸುಲಭ ರೀತಿಯ ಕೆಲಸ ಮಾಡಿ ಸಂಪಾದನೆ ಮಾಡಲು ಪ್ರಯತ್ನ ಪಡುತ್ತಾರೆಯೇ ವಿನಾ ಕಷ್ಟಪಟ್ಟು ಫಸಲು ಬೆಳೆಯಲು ಮುಂದೆ ಬರುವುದಿಲ್ಲ. ಅದಕ್ಕೆ ನಾವು ಕಾರಣರೇ? ಎಲ್ಲರೂ ಕಾರಣರು. ಈಗ ಕಾಲ ಹೇಗಿದೆ, ಸಂಸ್ಕೃತಿ ಹೇಗಿದೆ, ಜನರ ಮನೋಭಾವ ಹೇಗಿದೆ ಎಂಬುದನ್ನು ನೋಡಿದರೆ ಮುಂದೆ ದೇಶಕ್ಕೆ ಒಳ್ಳೆಯ ಭವಿಷ್ಯವಿದೆಯೆ ಎಂದು ಯೋಚನೆ ಮಾಡಬೇಕಾಗುತ್ತದೆ. ಈಗ ಸುಮಾರು 4,800 ಜನ ಗಜಕಡ್ಡಿಯಿಂದ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಜೀವನ ಮಾಡುತ್ತಿದ್ದಾರೆ; 300 ಇದ್ದ ಬಸ್ ಸರ್ವಿಸ್ ಗಳು 800 ಆಗಿವೆ, ಇನ್ನೂ ಅನೇಕರು ಎಲ್ಲು, ಅಂಗಡಿ ವಗೈರೆ ಇಟ್ಟು ಕಾಲ ಹಾಕುತ್ತಿದ್ದಾರೆ. ಹೀಗಿರುವಾಗ ಯಾರೂ ಶ್ರಮಿಸದೆ ದೇಶ ಸ್ವಪರಿಪೂರ್ಣವಾಗಬೇಕೆಂದರೆ ಹೇಗೆ ಸಾಧ್ಯ? ಈಗ ದುಡಿಮೆ ಮಾಡುವುದು ಸಾಲದು. ಅನುಕೂಲತೆಯ ದೃಷ್ಟಿಯಿಂದ ದೇಶದಲ್ಲಿ ಪ್ರತಿಯೊಬ್ಬರೂ ಶ್ರಮಿಸದಿದ್ದರೆ ಪ್ರಯೋಜನವಿಲ್ಲ, ಅನೇಕರು ರೇಷ್ಣ ಸಿಕ್ಕುತ್ತಿದೆಯೆಂದು ಹೊರಗಿನಿಂದ ಬರುತ್ತಿದ್ದಾರೆ. ಹೀಗೆ ಮಾಡುವುದರಿಂದ ಒಂದೇ ಸಾರಿ ಪರಿಸ್ಥಿತಿಯನ್ನು ಕುದುರಿಸುವುದಕ್ಕಾಗುವುದಿಲ್ಲ. ಮೂಗಿನಲ್ಲಿ ಗೊಣ್ಣೆ ಬಂದರೆ ಆದನ್ನೇ ತೆಗೆದುಹಾಕುವುದಿಲ್ಲ. ನಾವೇನು ಮಾಡಬೇಕೆಂದರೆ ಎಲ್ಲರೂ ಉತ್ಪತ್ತಿ ಕಾರ್ಯಕ್ಕೆ ಕೈಹಾಕಬೇಕು. ಆ ಜವಾಬ್ದಾರಿಯೂ ಪ್ರತಿಯೊಬ್ಬ ಪ್ರಜಾಪ್ರತಿನಿಧಿಗೂ ಸೇರಿದೆ. ಅವರು ಜನರ ಸಹಕಾರಕ್ಕೆ ಪ್ರಯತ್ನಮಾಡಬೇಕು, ಸರ್ಕಾರ ನಡೆಸುವವರೂ ಪ್ರಜಾಪ್ರತಿನಿಧಿಗಳೇ. ಸರ್ಕಾರದಲ್ಲಿ ಆರು ಮಂದಿ ಪ್ರತಿನಿಧಿಗಳಿದ್ದರೂ ದೇಶದ ಆಗುಹೋಗುಗಳು ಈ ಸಭೆಯ ಪ್ರತಿನಿಧಿಗಳಿಗೆಲ್ಲಾ ಸೇರಿರುವುದು. ಆದ್ದರಿಂದ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಈ ಆಹಾರ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂಬುದಕ್ಕೆ ರಚನಾತ್ಮಕ ಸಲಹೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಜನಾದ್ ಇವಾಂರವರು ಎಷ್ಟೋ ರಚನಾತ್ಮಕ ಸಲಹೆಗಳನ್ನಿತ್ತಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಕಷ್ಟನಷ್ಟಗಳು ಅವರಿಗೆ ಗೊತ್ತಿರುವುದರಿಂದ ಹತೋಟಿಯಿದ್ದುವುದು ಕಷ್ಟವೆಂದು ತಿಳಿದು ಅದನ್ನು ತೆಗೆಯುವುದು ಉತ್ತಮವೆಂದು ಹೇಳಿದ್ದಾರೆ. ಈಗ ಹತೋಟಿಯೆಂಬುದು ಎಷ್ಟೋ ಮಂದಿಗೆ ಜುಗುಪ್ಸೆಯಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಅದು ಸ್ವಾಭಾವಿಕ. ನೈತಿಕ ಮಟ್ಟ ಎಲ್ಲಿಯವರೆಗೆ ಕೆಡ್ಡುವುದಿಲ್ಲವೋ ಅಲ್ಲಿಯ ವರೆಗೆ ಹತೋಟಿ ಮಾಡಿದರೂ ಕಷ್ಟ, ಮಾಡದೇ ಹೋದರೂ ಕಷ್ಟ. ಎಲ್ಲರೂ ಈಗ ಹೊಟ್ಟೆ ತುಂಬ ಊಟ ಮಾಡುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಪಟ್ಟಣಿಗರು ಎಲ್ಲಾ ಕಾಳಸಂತೆಯಿಂದ ಕೊಳ್ಳುತ್ತಿದ್ದಾರೆಂದು ಹೇಳಿರುವುದು ಸರಿಯಲ್ಲ. ಎಷ್ಟೋ ಜನ ಅವರಿಗೆ ಕೊಡುತ್ತಿರುವ ರೇಷ್ಣನಿಂದಲೇ ಜೀವನ ಮಾಡುತ್ತಿದ್ದಾರೆ. ಒಂದು ವೇಳೆ ಕೂಪ್ಪೆ ತುಂಬದೆ ಹಸಿವಾದರೆ ಹೋಟಲಿಗೂ ಹೋಗುತ್ತಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಕೊಡುವ 9 ಔನ್ಸನ್ನು ಕೂಡ ತೆಗೆದು ಕೊಳ್ಳುವುದಕ್ಕೆ ಹಣವಿಲ್ಲದೆ ಕೋಟ ಬಿಟ್ಟುಬಿಟ್ಟಿದ್ದಾರೆ. ಇದಕ್ಕೆ ಅಂಕ ಅಂಶಗಳಿವೆ. ಇನ್ನು ಕೆಲವರು ಮಕ್ಕಳು ಮರಿ ಹೆಚ್ಚಾಗಿರುವುದರಿಂದ ರೇಷ್ಣ ಸಾಲದೆ ಒಂದಕ್ಕಿಂತ ಹೆಚ್ಚು ರೇಷ್ಣ ಕಾರ್ಡುಗಳನ್ನು ಬೇರೆ ಇಟ್ಟುಕೊಂಡಿದ್ದಾರೆ. ಅದನ್ನು ತನಿಖೆ ಮಾಡಿದಾಗ 6 ಸಾವಿರ ಜನ ಕಡಮೆಯಾಯಿತು. ಇದು ಮನುಷ್ಯನ ನೈತಿಕ ಮಟ್ಟ ಇಳಿದಿರುವುದಕ್ಕೆ ನಿದರ್ಶನವಾಗಿದೆ. ಇನ್ನೂ ಅಲ್ಲಲ್ಲಿ ತನಿಖೆಮಾಡಿ ಕಳ್ಳಕಾರ್ಡಾಗಳನ್ನು ವಜಾ ಮಾಡುತ್ತಿದೆ. ಆದ್ದರಿಂದ ಎಲ್ಲರೂ ಸಹ ಧರವಸೆ ಕೊಟ್ಟಿರುವಂತೆ ಆದಷ್ಟು ಬೇಗ service at cost ಮಾಡಬೇಕಾದ್ದು ಸೂಕ್ತ ಎಂದು ಈ ವಿಚಾರದಲ್ಲಿ ಎಲ್ಲರನ್ನೂ ಪ್ರಾರ್ಥನೆ ಮಾಡುತ್ತೇನೆ. ನಮ್ಮಲ್ಲಿರುವ ಹಣ ಕಾಸಿನ ತೊಂದರೆಯನ್ನರಿತು ಸರ್ಕಾರದ ನೀತಿಯನ್ನು ಸ್ವಾಗತಿಸಿ ರಚನಾತ್ಮಕ ಸಲಹೆಗಳನ್ನಿತ್ತಿರುವ ಮಾನ್ಯ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಶ್ರೀ ನಾರಾಯಣರಾಯರು ಹೇಳಿದಂತೆ ತಮ್ಮ ಸಲಹೆಗಳನ್ನು ಪರಿಶೀಲನೆಗೆ ಅವುಗಳನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ. ಬೇಕಾದರೆ ಬಡ್ಜೆಟ್ ಭಾಷಣಗಳ ಪ್ರತಿಯನ್ನು ಸಹ ಕೇಂದ್ರಕ್ಕೆ ಕಳುಹಿಸಲು ತಯಾರಾಗಿದ್ದೇವೆ.

ಆ ಮೇಲೆ ಶ್ರೀ ಬಂದಿಗೌಡರು ರಾಜಾಸ್ಥಾನದ ವಿಚಾರವನ್ನು ಪ್ರಸ್ತಾಪಮಾಡಿದರು. ರಾಜಾಸ್ಥಾನದವರು ಮೊನ್ನೆತಾನೆ ಒಂದು ಲಕ್ಷ ರೂಪಾಯಿ ಬೆರೆ ಬಾಳುವ ಗೋಧಿಯನ್ನು ಹೆಚ್ಚಾಗಿ ದಾಸ್ತಾನಿಟ್ಟಿದ್ದರೆಂಬುದು ಎಲ್ಲರಿಗೂ ಗೊತ್ತಿರಬೇಕು. ಅಲ್ಲಿ ಗೋಧಿ ಬೆಳೆಯುವ ಪ್ರದೇಶ ಕೂಡ ಇದೆ. ಆದ್ದರಿಂದ ಅವರನ್ನು ನಮ್ಮೊಂದಿಗೆ ಹೋಲಿಸುವುದಕ್ಕಾಗುವುದಿಲ್ಲ. ಅದಕ್ಕೆ ಬದಲಾಗಿ ಮದ್ರಾಸು, ತಿರುವಾಂಕೂರು ಮತ್ತು ಬೊಂಬಾಯಿನ ಕೆಲವು ಭಾಗಗಳನ್ನು ಹೋಲಿಸಿದ್ದರೆ ಒಪ್ಪಬಹುದಾಗಿತ್ತು, ನಮ್ಮ ದೇಶವು ಕೊರತೆಯ ಪ್ರದೇಶ; ನೂರು ವರ್ಷಗಳಿಂದ ಇದೇ ರೀತಿಯಿದೆ. ಪಾಶ್ಚಾತ್ಯದೇಶದಲ್ಲಿರುವ ಉತ್ತಮ ನೀತಿಯನ್ನು ಸರಿಸಿ ನಡೆಯುವುದಕ್ಕೆ ನಾವು ಇದನ್ನು ಮಾಡುತ್ತಿದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪನವರ ತಿದ್ದುಪಡಿಯು ಬೆಲ್ಲದ ವಿಚಾರಕ್ಕೆ ಸಂಬಂಧಪಟ್ಟಿದೆ. ಅದಕ್ಕಾಗಲೇ ಉತ್ತರ ಹೇಳಿದೆ. ಧಾರಣೆ ಹೆಚ್ಚಿದ್ದರಿಂದ ಮತ್ತು ಕಾರ್ಖಾನೆಗೆ ಕಬ್ಬು ಸಾಲದ್ದರಿಂದ ಕೇಂದ್ರ ಪಾರ್ಲಮೆಂಟನಲ್ಲಿ ಈ ವಿಚಾರವು ಒಮ್ಮತದಿಂದ ತೀರ್ಮಾನವಾಗಿ ಅವರು ಜಾರಿಗೆ ತಂದಿದ್ದಾರೆ. ಅವರು ಅಧಿಕಾರ ಬಲದಿಂದ ಎಲ್ಲಾ ಕಡೆಗೂ ಬೆಲ್ಲದ ಹತೋಟಿಯನ್ನು ಜಾರಿಗೆ ತಂದರು. ಆದರ ಪ್ರಕಾರ ಬೆಲ್ಲದ ಮಾರಾಟದ ಬೆಲೆಯನ್ನು ಆಯಾ ಪ್ರಾಂತ್ಯದ ಪರಿಸ್ಥಿತಿಗೆ ತಕ್ಕಂತೆ ಗೊತ್ತುಮಾಡಿದ್ದಾರೆ. ಮೊದಲು ಮೈಸೂರು ಸಂಸ್ಥಾನಕ್ಕೆ 21 ರೂಪಾಯಿಗಳನ್ನು ನಿಗದಿ ಮಾಡಿದರು. ಆ ಮೇಲೆ ಆ ಧಾರಣೆಯು ಬಹಳ ಕಡಮೆಯೆಂದು ತಿಳಿದ ಮೇಲೆ ಮತ್ತು 24 ರೂಪಾಯಿಗಳಿಗಾದರೂ ದರ ಹೆಚ್ಚಿಸಬೇಕೆಂದು ಕೇಳಿಕೊಂಡಮೇಲೆ 22 ರೂಪಾಯಿ ಮಾಡಿದರು. ಮದ್ರಾಸಿನಲ್ಲಿ 19 ರೂಪಾಯಿ ಬೆರೆ.

The Hon'ble Sri K. CHENGALARAYA REDDY.—In other places it is 18.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೆಳೆಯುವವರಿಗೆ ಇದರಿಂದ ತೊಂದರೆ, ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಖರ್ಚಿನ್ನಾದರೂ ಸೇರಿಸಬೇಕೆಂದು ಮನವಿ ಮಾಡಿದ ಮೇಲೆ ಅದಕ್ಕೆ ಒಪ್ಪಿದ್ದಾರೆ. ಆದ್ದರಿಂದ ನಾವು ಮಾಡುವ ಪ್ರಯತ್ನ ಮಾಡಿದ್ದೇವೆ ಮೊದಲು ಬೆರೆ 14-15 ರೂಪಾಯಿಯವರೆಗೆ ಹೋಗಿತ್ತು. ಅದು ಜಾಸ್ತಿಯಾದ್ದರಿಂದ ಈಗ 6—6½ ರೂಪಾಯಿ ಮಾಡಿದೆ. ಈ ವಿವರವಾಗಿ ನಮ್ಮ ದೇಶಕ್ಕಾಗಿರುವ ತೊಂದರೆ ಮತ್ತು ಜನರಿಗಾಗಿರುವ ಕಷ್ಟವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಆದ್ದರಿಂದ ಶ್ರೀ ಕಡಿದಾಳ್ ಮಂಜಪ್ಪನವರು ಆ ವಿಚಾರವನ್ನು ಅಲ್ಲಗೇ ಬಿಡಬಹುದು.

ಇನ್ನು ಕೆಲವು ಸಲಹೆಗಳನ್ನು ಶ್ರೀ ಬೋರಣ್ಣಗೌಡರು ಮತ್ತು ಇತರ ಸದಸ್ಯರು ಕೊಟ್ಟಿದ್ದಾರೆ. ಸ್ಯಾಚ್ಯುರೆಟರಿ ರೇಷನಿಂಗ್ ಪ್ರದೇಶದಲ್ಲಿರುವವರಿಗೆ ಶೇಖರಣೆ ಮಾಡಿಕೊಡುವಂತೆ ಬಾಕಿ ಕಡೆಯವರಿಗೆ ಏಕೆ ಕೊಡುತ್ತಿಲ್ಲವೆಂದು ಕೇಳಿದರು. ಇದು ಹೋದವರ್ಷ ಅನುಭವಕ್ಕೆ ಬಂದಿದೆ. ಸಕಾಲಕ್ಕೆ ಕೇಂದ್ರ ಸರ್ಕಾರದಿಂದ ಸಹಾಯ ಬಾರದೇ ಯಿರುವಾಗ 40 ಸೇರು ಗಾತ್ರಾಂತರ ಪ್ರದೇಶಗಳಿಗೆ ತಗೆದುಕೊಂಡು ಹೋಗಬಹುದೆಂದು ಅವಕಾಶ ಮಾಡಿದಾಗ ಅನುಭವಕ್ಕೆ ಬಂದಿದೆ. ಅದನ್ನು ಆಲೋಚನೆ ಮಾಡಬೇಕಾಗಿದೆ. ಅದಕ್ಕೆ ಯಾವ ರೀತಿ ಮಾಡಬೇಕು ಎಂಬುದನ್ನು ಪರಿಶೀಲಿಸಬೇಕು. ಸರ್ಕಾರದವರು ಹತೋಟಿಯನ್ನು ಸ್ವಲ್ಪ ಸಡಿಲ ಮಾಡಿದರೆ ಶೇಖ

ರಣೆಯು ಯಶಸ್ವಿಯಾಗುವುದಿಲ್ಲ. ಆ ವಿಚಾರ ಕಿವಿಗೆ ಬಿದ್ದರೆ ಸಾಕು, ಜನರು ಹುಷಾರಾಗಿ ಆವಿರ್ಭಾವಕ್ಕೆ ಎಡೆಯಾಗುತ್ತದೆ. ಅದನ್ನು ನಾವು ಯೋಚನೆ ಮಾಡಿದ್ದೇವೆ. ಆದ್ದರಿಂದ ಆ ಪ್ರಶ್ನೆಯನ್ನು ತಾವು ಎತ್ತಬಾರದೆಂದು ಹೇಳುತ್ತೇನೆ. ಆ ವಿಷಯವನ್ನು ನಾವೂ ಎತ್ತುವುದಿಲ್ಲ ಮತ್ತು ಯಾರೂ ಪ್ರಸ್ತಾಪ ಮಾಡಬಾರದು ಎಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

The Hon'ble Sri K. CHENGALARAYA REDDY.—We may or may not relax it. It all depends upon the situation then existing.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಲ್ಲಿರುವ pin pricks ಸಾಧ್ಯವಾದಷ್ಟು ಹೋಗಬೇಕು. ಎಲ್ಲರೂ ಇದಕ್ಕೆ ಸಹಕಾರ ಮಾಡಬೇಕು. ಪಕ್ಷಪಾತ ತೋರಿಸದೇ ಇದ್ದರೂ ಎಲ್ಲರಿಗೂ ಕೊಡುತ್ತೇವೆಂದು ಹೇಳಿಲ್ಲ ಎಂದು ಶ್ರೀ ಬಂದೀಗೌಡರು ಹೇಳಿದರು. ನಾವು ಇರುವುದನ್ನು ಹಂಚುತ್ತೇವೆಂದು ಹೇಳಿದ್ದೇವೆ. ಈಗ ಪರಿಸ್ಥಿತಿ ಏನಾಗಿದೆಯೆಂಬುದನ್ನು ಯೋಚನೆ ಮಾಡಬೇಕು. ಸ್ಯಾಚ್ಯುಟರಿ ರೇಷ್ ಇರುವ ಕಡೆ ಹೇಗೆ ಮಾಡಬೇಕು, ಇಕ್ವಿಫಾರ್ಮರ್ ರೇಷ್ ಇರುವ ಕಡೆ ಹೇಗೆ ಮಾಡಬೇಕು ಎಂದು ಯೋಚನೆ ಮಾಡಬೇಕು. ಬೆಳೆಯುವವರು ಎಷ್ಟು ಮಂದಿ ಇದ್ದಾರೆ, ಜವಾನಿಲ್ಲದೇ ಯಿರುವವರೆಷ್ಟು, ಕೂಲಿ ಮಾಡುವವರೆಷ್ಟು ಎಂಬುದನ್ನು ವಿಚಾರ ಮಾಡಬೇಕು. ಕಾಳು ಕೂಲಿ ರೂಪವಾಗಿಯೂ ಕೆಲವರಿಗೆ ಸಿಗುತ್ತದೆ. ಆದ್ದರಿಂದ ಆವಶ್ಯಕತೆ ಎಷ್ಟಿದೆಯೆಂದು ನೋಡಬೇಕು. ರೇಷ್ ಪ್ರಮಾಣ ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ. ಆ ಜವಾಬ್ದಾರಿ ಹೊತ್ತು ಕೊಳ್ಳುವುದು ಕಷ್ಟ. ಆದ್ದರಿಂದಲೇ ಇಕ್ವಿಫಾರ್ಮರ್ ರೇಷ್ ಪ್ರದೇಶವೆಂದು ಮಾಡಿದೆ. ಆದರೆ ಶ್ರೀ ಮಲ್ಲಿಕಾರ್ಜುನಪ್ಪನವರು ಹೇಳಿದ ಹಾಗೆ ರೈತರಿಂದ ಎಲ್ಲಾ ತೆಗೆದುಕೊಂಡು ಆ ಮೇಲೆ ಅದನ್ನು ಹಂಚುವುದು ಪ್ರಾಯಶಃ ಕಷ್ಟ. ಇದನ್ನು ಈ ಸಂದರ್ಭದಲ್ಲಿ ಮಾಡುವುದು ಕಷ್ಟ. ಇದಕ್ಕೆ ತಕ್ಕ administrative machinery set up ಮಾಡುವುದು ಕಷ್ಟ. Nationalise ಮಾಡಿದರೆ, Dictatorship of the Proletariat ಬಂದರೆ ಹಾಗೆ ಮಾಡಲು ಸಾಧ್ಯವೋ ಏನೋ. ಇಲ್ಲಂತೂ ಇದು ಸಾಧ್ಯವಿಲ್ಲ. ನಾವು ಸುಗಮವಾಗಿ ನಮ್ಮ ಗುರಿಯನ್ನು ಮುಟ್ಟಬೇಕು. ಈ ಗುರಿಯನ್ನಿಟ್ಟುಕೊಂಡು ಮಾಡಬೇಕೆಂದು ಸರ್ಕಾರದವರ ಇಷ್ಟ. ಆದುದರಿಂದ ಮಾನ್ಯ ಸದಸ್ಯರು ಸಂಪೂರ್ಣ ಸಹಕಾರ ಸಹಾನುಭೂತಿಗಳನ್ನು ನೀಡಿ ಸರ್ಕಾರದೊಡನೆಸಹಕರಿಸಬೇಕೆಂದು ಪ್ರಾರ್ಥಿಸುತ್ತೇನೆ

Sri V. S. NARAYANA RAO.—I seek the permission of the House to withdraw my amendment.

The amendment was, by leave of the Assembly, withdrawn.

Sri Kadidal MANJAPPA.—I wish to withdraw my amendments.

The amendments were, by leave of the Assembly, withdrawn.

The Hon'ble Sri K. CHENGALARAYA REDDY (Leader of the House).—If the Hon'ble Speaker's party is at 6-30 P.M., I suggest that we may meet at 1-30 P.M. and go on till 6-30 P.M.

Mr. SPEAKER.—The House will now adjourn and reassemble at 1-30 P.M.

The Assembly abdjourned at Forty-five Minutes past Eleven of the Clock and reassembled at Thirty-Seven Minutes past One of the Clock.

Mr. SPEAKER. (The Hon'ble Sri V. Venkatappa) in the Chair.

STARRED QUESTIONS

(to which oral answers were given).

Mr. SPEAKER (The Hon'ble Sri V. Venkatappa).—Questions. Question No. 2 Sri H. C. Linga Reddy.

Accommodation in the Tuberculosis Sanatorium at Mysore.

Q.*—2. **Sri H. C. LINGA REDDY (Kolar District—General).—

Will the Government be pleased to state :—

(*a*) the seating accommodation in the Tuberculosis Sanatorium at Mysore ;

(*b*) the basis on which patients suffering from T. B. are admitted ;

(*c*) the steps they have taken to meet the ever-increasing demand for seats by the T. B. patients ;

(*d*) whether there is any discrimination made between Mysoreans and Non-Mysoreans in admissions and charges ?

A.—**The Hon'ble Sri K. CHENGALARAYA REDDY** (Chief Minister).—

(*a*) The present accommodation is for 250 beds.

(*b*) Advanced cases are not generally admitted to the Sanatorium. Early and suitable cases fit for treatment are registered and admission is